ಅವರು ಕಳುಹಿಸಿರುವ ಚೆಕ್ಕುಗಳೂ ಡಿಸ್ ಆನರ್ ಆಗಿರಬಹುದು ಇಲ್ಲಿ ನಮಗೆ ಬೇಕಾಗಿರುವುದು ನಮ್ಮ ಕರ್ಣಾಟಕ ರಾಜ್ಯದ ಅರ್ಥಿಕ ಸ್ಥಿತಿ ಬಗ್ಗೆ ಮಾನ್ಯ ಮಂತ್ರಿಗಳು ಹೇಳುತ್ತಿರುವುದನ್ನು ನೋಡಿದರೆ ಮಾನ್ಯ ಶ್ರೀ ದೇವೇಗೌಡರವರು ಹೇಳಿದ ಹಾಗೆ ಒಂದು ರೀತಿಯಾದ ದ್ವಂದ್ವ ಅಭಿಪ್ರಾಯಗಳು ಬರುತ್ತಿವೆ, ಹಣಕಾಸಿನ ಪರಸ್ಥಿತಿ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿರುವ ಹೇಳಿಕೆಯನ್ನು ಗಮನಿಸಿದರೆ ಅದರಲ್ಲಿ ಅನೇಕ ವಿವಿದ ವಿಚಾರಗಳು ಗಮನಕ್ಕೆ ಬಂದಿವೆ. ಇವೆಲ್ಲವುಗಳನ್ನೂ ಇಲ್ಲಿ ಹೇಳುವಾಗ ಕೆಲವು ವಿಚಾರಗಳನ್ನು ಮರೆ ಮಾಚಿದ್ದಾರೆಂದು ಇದರಿಂದ ಗೊತ್ತಾಗುತ್ತದೆ. ಇದಕ್ಕಾಗಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಇಲ್ಲಿ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ. ಈಗ ಸಂಪೂರ್ಣವಾಗಿ ಎಲ್ಲ ವಿವರಗಳನ್ನೂ ಕೊಡುವುದಕ್ಕಾಗುವುದಿಲ್ಲ. ಅದ್ದರಿಂದಲೇ ನಾವು ಇಲ್ಲಿ ನಿಲುವಳಿ ಸೂಚನೆ ಕಳುಹಿಸಿರುವುದು ಇದರ ಮೂಲಕ ನಮ್ಮ ರಾಜ್ಯದ ಅರ್ಥಿಕ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಳ್ಳಲು ನಮಗೆ ಒಂದು ಅವಕಾಶ ಸಿಗುತ್ತದೆ. ಇದಕ್ಕಾಗಿ ತಮ್ಮಲ್ಲಿ ನಿಲುವಳಿ ಸೂಚನೆಯಿಂದ ಚರ್ಚೆಗೆ ಅವಕಾಶ ಬೇಕು ಎಂದು ಕೇಳುತ್ತಿದ್ದೇವೆ ಅದ್ದರಿಂದ ಸರಕಾರದ ನೀತಿಯನ್ನೂ ತಿಳಿಯಲು ಸಹಾಯವಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ : ನಾನು ಇಲ್ಲಿ ಸ್ಟೇಟ್‌ಮೆಂಟು ಕೊಟ್ಟಿರುವುದರಲ್ಲಿ ಎಲ್ಲ ಅಂಕೆ ಅಂಶ ಗಳನ್ನೂ ವಿವರವಾಗಿ ಕೊಟ್ಟು ಹೇಳಿಕೆ ಕೊಟ್ಟಿದ್ದೇನೆ, ದೇಶದ ಹಣಕಾಶಿನ ಪ್ರತಿಯೊಂದು ಅಂಶವನ್ನೂ ಕುರಿತು ತಿಳಿಸಿದ್ದೇನೆ. ಇದರ ಮೇಲೆ ಇಲ್ಲಿ ಚರ್ಚೆಮಾಡಲು ಯಾವುದೂ ಇಲ್ಲ, ಕೇರಳದ ಓವರ್‌ಡ್ರಾಫ್ಟ್ ವಿಚಾರ ಹೇಳಿದರು. ಇರಬಹುದು ಅಲ್ಲೂ ಬಂದಿದೆ. ಕೇರಳದ ಸ್ಥಿತಿಯೇ ಬೇರೆ. ನಮ್ಮ ಕರ್ಣಾಟಕದಲ್ಲಿ ರುವ ಓವರ್‌ಡ್ರಾಫ್ಟ್ ಪರಿಸ್ಥಿತಿಯೇ ಬೇರೆ. ಇಲ್ಲಿ ನಾವು ಬರೀ ವೇಸ್ ಅಂಡ್ ಮೀನ್ಸ್ ಹಾಗೂ ಟೆಂಪರರಿ ಓವರ್‌ಡ್ರಾಫ್ಟ್‌ಗೆ ಸ್ವಲ್ಪ ಅಕಾಮಡೇಷನ್ ಕೇಳಿರುವುದು. ಇದರಲ್ಲಿ ನಮಗೆ ತೊಂದರೆಯಾಗಿರುವುದು ಒಂದೆರಡು ಗಂಟೆಗಳ ಕಾಲ. ಅದು ಶನಿವಾರದ ದಿನ ತೊಂದರೆಯಾಗಿರಬಹುದು. ಯಾವುದೇ ಓವರ್‌ಡ್ರಾಫ್ಟ್ ಇದ್ದರೂ ಕೇಂದ್ರ ಸರಕಾರ ಸರಿಪಡಿಸಲು ಸಾಧ್ಯ ಎಂದು ತಿಳಿಸಿದ ಮೇಲೆ ಅವರೂ ಕೂಡ ಅದಕ್ಕೆ ಒಪ್ಪಿ ಎಲ್ಲ ಸೌಕರ್ಯಗಳನ್ನೂ ಕೊಡಲು ತಮ್ಮ ತೀರ್ಮಾನ ತಿಳಿಸಿದರು, ಇದರಿಂದ ಅಂತಹ ತೊಂದರೆಯೇನೂ ಆಗಲಿಲ್ಲ. ತಾವು ಹೇಳುವ ಪ್ರಕಾರ

there was no basic imbalance in State's Finances.

ಶ್ರೀ ಟಿ. ಆರ್. ಶಾಮಣ್ಣ : ಇದರಿಂದೇನೂ ತಡವಾಗಿಲ್ಲ ಎಂದರೆ ತಾವು ಅಂತಹ ಒಂದು ವಾತಾ ವರಣವನ್ನೇಕೆ ಇಲ್ಲಿ ಉದ್ಭವ ಮಾಡಲಿಲ್ಲ? ಮೊದಲೇ ಇದಕ್ಕೆ ಸಾಕಾದಷ್ಟು ಹಣ ಒದಗಿಸಿದ್ದರೆ ಇಂತಹ ಕಷ್ಟಗಳು ಬರುತ್ತಿರಲಿಲ್ಲ. ಅನೇಕ ಮುಖ್ಯವಾದ ಕೆಲಸಗಳಿಗೆ ತೊಂದರೆಗಳಾದವು ಮತ್ತು ಕೆಲವು ಕಡೆ ಬಿಲ್ಲುಗಳು ಬಂದಿರುವುದನ್ನು ತೆಗೆದುಕೊಳ್ಳಲಾಗಲಿಲ್ಲ ಮತ್ತು ಡೆವಲಪ್‌ಮೆಂಟು ಎಕ್ಸ್‌ಪೆಂಡಿಚರುಗಳಿಗೂ ತೊಂದರೆಗಳಾದವು. ಇದನ್ನೇಕೆ ಸಕಾಲದಲ್ಲಿ ಸರಿಪಡಿಸಲು ತಕ್ಕ ಕ್ರಮ ತೆಗೆದುಕೊಳ್ಳಲಿಲ್ಲ?

ಅಧ್ಯಕ್ಷರು : ಮಾನ್ಯ ಶಾಮಣ್ಣನವರು ಈ ರೀತಿ ಹೇಳಲು ಇಲ್ಲಿ ಅವಕಾಶವಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿವರವಾದ ಹೇಳಿಕೆ ಕೊಟ್ಟಿರುವದರಿಂದ ಈ ನಿಲುವಳಿ ಸೂಚನೆಗೆ ನನ್ನ ಒಪ್ಪಿಗೆ ಕೊಡುವುದಿಲ್ಲ.

I with hold my concen to this adjournment motion.

BUDGET ESTIMATES FOR 1974-75 DEMANDS FOR GRANTS

DEMANDS No. 10, 19, 20. 35, 55, 57, 58 and No. 41.

SRI H. M. CHANNABASAPPA.—(Minister for Public Works and Electricity): Madam Speaker, on the recommendation of the Governor, I beg to move :

"That a sum not exceeding Rs. 29,00,000 inclusive of the sum granted 'on account' be granted to the Government to defary the charges which will come in course of payment during the financial year ending 31st day of March 1975 in respect of

(SRI H. M. CHANNABASAPPA)

Demand No. 10 "Other Taxes and Duties on Commodities and Services"

"That a sum not exceeding Rs. 7,09,75,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No; 19 "Public Works."

"That a sum not exceeding Rs. 4,51,01,000 incluse of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 20 "Buildings."

"That a sum not exceeding Rs. 2.36.00.000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 35 "Relief on account of Natural Calamities."

"That a sum not exceeding Rs. 2.36,00,000 inclusive of the sum granted 'on account' be granted to the Government to defray the charges which will come in course of payment during financial year ending 31st day of March 1975 in respect of Demand No. 55 "Power Projects."

"That a sum not exceeding Rs. 12,13.65,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 57 "Roads and Bridges."

"That a sum not exceeding Rs 21 51,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 58 "Road and Water Transport Services."

MADAM SPEAKER.—Motion moved.

"That a sum not exceeding Rs. 29,00,000 inclusive of the sum granted 'on account' be granted to the Government to defray charges which will come in course of payment during the financial year ending 31st day of March 1975 in respect of Demand No. 10 "Other Taxes and Duties on Commodities and Services."

"That a sum not exceeding Rs. 7,09,75,000 inclusive of the sum granted 'on account' be granted to the Government to defray

the charges which will come in course of payment during the financial year ending 31st day of March 1975 in respect of Demand No. 19 "Public Works."

"That a sum not exceeding Rs. 4 51 01,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 20 "Buildings."

"That a sum not exceeding Rs.2,36,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 35 "Relief on account of Natural Calamities."

"That a sum not exceeding Rs. 2,36,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 55 "Power Projects."

"That a sum not exceeding Rs. 12,13,65,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 57 "Road and Bridges."

"That a sum not exceeding Rs. 21,51,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 58 "Road and Water Transport Services."

SRI S. B. NAGARAL.—(Minister of State for Minor Irrigation): Madam on the recommendation of the Governor, I beg to move:

"That a sum not exceeding Rs. 12,27,50,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 41 "Minior Irrigation."

MADAM SPEAKER.—Motion moved:

"That a sum not exceeding Rs. 12,27,50,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 41 "Minior Irrigation."

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರಲ್ಲಿ ಒಂದು ವಿನಂತಿ. ಅನ್ಯುಯಲ್ ರಿಪೋರ್ಟ್‌ಗಳ ಬಗ್ಗೆ ಅನೇಕಸಾರಿ ಈ ಸದನದಲ್ಲಿ ಕೇಳಿಕೊಂಡಿದ್ದರೂ, ಪಿ.ಡಬ್ಲ್ಯೂ.ಡಿ. ಅನ್ಯುಯಲ್ ರಿಪೋರ್ಟ್ ಬಂದಿಲ್ಲ.

ಅಧ್ಯಕ್ಷರು.—ಅದು ೧-೪-೧೯೭೪ರಲ್ಲಿ ಸರ್ಕ್ಯುಲೇಟ್ ಆಗಿದೆ.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಣಿಯವರೇ, ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಮಾತನಾಡತಕ್ಕ ಈ ಸಂದರ್ಭದಲ್ಲಿ ಒಂದು ವಿಷಯ ತಮ್ಮ ಅವಗಾಹನೆಗೆ ತರುತ್ತೇನೆ. ನಾನು ಕಳೆದ ಎರಡು ವರ್ಷಗಳಿಂದ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಹಲವಾರು ಸೂಚನೆಗಳನ್ನು ಕೊಟ್ಟಿದ್ದೆ. ಬಹುಶಃ ಅವರಲ್ಲಿ ಒಂದು ಸೂಚನೆಯನ್ನು ಒಪ್ಪಿಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಸೂಚಿಸಿದ ವಿಜಿಲೆನ್ಸ್ ಚೀಫ್ ಇಂಜಿನಿಯರ್ ನೇಮಕ ಮಾಡುವುದನ್ನು ಒಪ್ಪಿಕೊಂಡಿದ್ದಾರೆ. ಅದನ್ನು ಬಿಟ್ಟರೆ ಕಳೆದ ಎರಡು ಸಾರಿ ಈ ಸಭೆಯಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಹಲವಾರು ಸೂಚನೆಗಳನ್ನು ಕೊಟ್ಟಿದ್ದರೂ ಅವು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಬೇಕಾಗುತ್ತದೆ. ಬಹುಶಃ ಒಂದೇ ಒಂದು ವಿರೋಧಪಕ್ಷದ ವತಿಯಿಂದ ಬಂದ ಸೂಚನೆಯೆಂದು ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ಮೊಟ್ಟಮೊದಲನೆಯದಾಗಿ ಸರ್ಕಾರಕ್ಕೆ ನನ್ನ ಮೆಚ್ಚುಗೆ ವ್ಯಕ್ತಪಡಿಸುತ್ತೇನೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಈ ಇಲಾಖೆಯ ಸಂಬಂಧವಾಗಿ ರಿಪೋರ್ಟ್ ಕೊಟ್ಟಿದ್ದಾರೆ. ಅದಾದಮೇಲೆ ಈ ಸಭೆಯಲ್ಲಿ ಕೂಡ ಕೆಲವು ಸೂಚನೆಗಳನ್ನು ಸರ್ಕಾರಕ್ಕೆ ತಿಳಿಸಿದ್ದೇನೆ. ನಾನು ಮೊದಲನೆಯದಾಗಿ ಆ ಇಲಾಖೆಯ ಸ್ಟ್ರಕ್ಚರ ಬಗ್ಗೆ ಕೆಲವು ವಿಷಯಗಳನ್ನು ಮಾತನಾಡಬೇಕಾಗಿದೆ. ಈ ಲೋಕೋಪಯೋಗಿ ಇಲಾಖೆಯನ್ನು ಬಹುಶಃ ತಾವು ಸರ್ಕಾರ ಕೈಗೆ ತೆಗೆದುಕೊಂಡ ಮೇಲೆ, ಇಲ್ಲಿ ಟಾಪ್ ಹೆವಿ ಅಡ್‌ಮಿನಿಸ್ಟ್ರೇಶನ್ ಎಂದು ಮಾಡಲಿಕ್ಕೆ ಪ್ರಯತ್ನ ಮಾಡಿದ್ದೀರಿ ಎಂದು ಮೊದಲನೆ ಆಪಾದನೆ ಮಾಡಬೇಕಾಗುತ್ತದೆ. ಟಾಪ್ ಹೆವಿ ಅಡ್‌ಮಿನಿಸ್ಟ್ರೇಶನ್ ಎಂದರೆ, ಚೀಫ್ ಇಂಜಿನಿಯರುಗಳು ಎಷ್ಟು ಜನ ಇದ್ದಾರೆಂದು ಎಣಿಸಿಕೊಳ್ಳುವುದೇ ಕಷ್ಟವಾಗಿದೆ. ಎರಡು ವರ್ಷಗಳ ಹಿಂದೆ ಚೀಫ್ ಇಂಜಿನಿಯರ್ ಹುದ್ದೆಯನ್ನು ವಿಜಿಲೆನ್ಸ್ ಇಲಾಖೆಯಲ್ಲಿ ಕ್ರಿಯೇಟ್ ಮಾಡಬೇಕು ಎಂದು ನಾನು ಹೇಳಿದ್ದು ಸಹಜ. ಹೇಳಿದ ಉದ್ದೇಶ ಬೇರೆ. ಯಾವುದೇ ವಿಚಾರಣೆ ಆಗಬೇಕಾದರೂ ಅದು ನಿರ್ಭಯದಿಂದ ಮತ್ತು ನಿರ್ಭೀತಿಯಿಂದ ಆಗಬೇಕು. ಒಬ್ಬ ಕಡಿಮೆ ದರ್ಜೆ ಅಧಿಕಾರಿ ಅಲ್ಲಿ ಇದ್ದರೆ, ನಿರ್ಭೀತಿಯಿಂದ ವಿಚಾರಣೆ ಆಗುವುದಿಲ್ಲವೆಂದು ಹೇಳಿದ್ದೆ. ಇದರ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಅದನ್ನು ಬಿಟ್ಟರೆ ತಾವು ಎಷ್ಟು ಚೀಫ್ ಇಂಜಿನಿಯರ್ ಹುದ್ದೆಗಳನ್ನು ನಿರ್ಮಾಣ ಮಾಡಿದ್ದೀರಿ ? ಅದರ ಅವಶ್ಯಕತೆ ಇದೆಯೇ ಎನ್ನತಕ್ಕಂಥದ್ದನ್ನು ಪ್ರಪ್ರಥಮವಾಗಿ ತಿಳಿಸಬೇಕು. ಒಂದು ಕಡೆ ಹಣಕಾಸಿನ ಪರಿಸ್ಥಿತಿ ಇಷ್ಟೊಂದು ಚಿಂತಾಜನಕವಾಗಿದೆ. ಅರ್ಥ ಸಚಿವರು ಅದನ್ನು ಮುಚ್ಚಿ ಅದಕ್ಕೆ ಬಣ್ಣವನ್ನು ಹಚ್ಚಲು ಪ್ರಯತ್ನ ಮಾಡಿದರು. ಕಳೆದ ಒಂದು ತಿಂಗಳಿಂದ ಈ ಹಣಕಾಸಿ ಪರಿಸ್ಥಿತಿ ನಮ್ಮೆಲ್ಲರ ಕೈ ಮೀರುವಂಥ ಪರಿಸ್ಥಿತಿಗೆ ಬಂದಿದೆ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಡಿವಿಜನ್‌ಗಳಲ್ಲಿ ತೆಗೆದುಕೊಂಡ ಕೆಲಸಗಳನ್ನು ಮೊಟಕುಗೊಳಿಸಿದ್ದೀರಿ. ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ತಾವು ತಡೆಹಿಡಿಯುವ ಆದೇಶವನ್ನೂ ಸಹಾ ಕೊಟ್ಟಿದ್ದೀರಿ. ಬಡ್ಜೆಟ್‌ನಲ್ಲಿ ಇರತಕ್ಕ ಹೊಸ ಕೆಲಸಗಳನ್ನೂ ಕೂಡ ತೆಗೆದುಕೊಂಡಿಲ್ಲ. ಈ ಮಾತನ್ನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಅನೇಕ ಡಿವಿಜನ್‌ಗಳಲ್ಲಿ ಪೇಮೆಂಟ್ ಆಗಿಲ್ಲ. ಕಳೆದ ಸಾರಿ ೧೯೭೪ರ ಮಾರ್ಚ್‌ಗಿಂತ ಹಿಂದೆ ಏನೇನು ಕೆಲಸಗಳು ಆಗಿವೆ ಅದಕ್ಕೆ ಇನ್ನೂ ಕೂಡ ಪೂರ್ಣ ಪೇಮೆಂಟ್ ಮಾಡಿಲ್ಲ. ಈವತ್ತು ಎಲ್ಲಾ ಪೇಮೆಂಟ್ ಮಾಡುವುದಕ್ಕೆ ಹೊರಟರೆ ಈಗ ಇರುವ ೪೨ ಕೋಟಿ ರೂಪಾಯಿ ಓವರ್ ಡ್ರಾಫ್ಟ್ ೫೦ ಕೋಟಿಯವರೆಗೆ ಹೋಗುತ್ತದೆಯೋ ಏನೋ ಗೊತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಕೆಲಸ ಮಾಡದೆ ಅದು ಹೇಗೆ ಬರುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ.—ಎಂಟು ತಿಂಗಳ ಹಿಂದೆ ಮಾಡಿದ ಕೆಲಸಕ್ಕೆ ದುಡ್ಡು ಕೊಟ್ಟಿಲ್ಲ. ಮುಖ್ಯಮಂತ್ರಿಗಳು ಈ ಮಾತನ್ನು ಕೇಳಿದ್ದು ಒಳ್ಳೆಯದೇ ಆಯಿತು. ಹಾಸನಕ್ಕೆ ಮೊನ್ನೆ ರಾಜ್ಯಪಾಲರು ಬಂದಿದ್ದಾಗ ಕಂಟ್ರಾಕ್ಟರುಗಳು ತಾವು ಮಾಡಿದ ಕೆಲಸಕ್ಕೆ ೩೫ ಲಕ್ಷ ರೂಪಾಯಿಗಳ ಪೇಮೆಂಟ್ ಮಾಡಿಲ್ಲ, ಅದನ್ನು ತಡೆಹಿಡಿದಿದ್ದಾರೆಂದು ಹೇಳಿದರು. ಅವರು ಅಧಿಕಾರಿಗಳನ್ನು ವಿಚಾರ ಮಾಡಿದಾಗ ಒಪ್ಪಿಕೊಂಡರು. ೬, ೭, ತಿಂಗಳಿಂದಲೂ ಪೇಮೆಂಟ್ ಕೊಡಲಿಲ್ಲ. ಎಂದರೆ ಆರು ತಿಂಗಳು ಪೂರ್ವದಲ್ಲಿ ಕೆಲಸ ಆಗಿದೆಯೆಂದಾಯಿತು. ತಮ್ಮ ಇಲಾಖೆಯಲ್ಲಿ ಟಾಪ್ ಹೆವಿ ಅಡ್ಮಿನಿಸ್ಟ್ರೇಶನ್ ಮಾಡಿದ್ದೀರಿ

ನ್ಯಾಷನಲ್ ಹೈವೇಗೆ ಒಬ್ಬ ಚೀಫ್ ಇಂಜಿನಿಯರ್, ಮೈನರ್ ಇರಿಗೇಷನ್ ಮತ್ತು ಪಬ್ಲಿಕ್ ಹೆಲ್ತ್‌ಗೆ ಇಬ್ಬರು ಚೀಫ್ ಇಂಜಿನಿಯರ್ಸ್ ಮಾಡಿದ್ದೀರಿ. ಇದಾದ ಮೇಲೆ ಪ್ಲಾನಿಂಗಿಗೆ ಒಬ್ಬ ಚೀಫ್ ಇಂಜಿನೀಯರನ್ನು ನೇಮಕ ಮಾಡಿದ್ದೀರಿ, ಆದಾದ ಮೇಲೆ ಬೆಂಗಳೂರು ಕಾರ್ಪೊರೇಷನ್‌ಗೆ ಚೀಫ್ ಇಂಜಿನೀಯರ್ ಮಾಡಿದ್ದೀರಿ, ಹೀಗೆ ತಾವು ಅಧಿಕಾರಕ್ಕೆ ಬಂದಮೇಲೆ ಐದು ಹೊಸ ಚೀಫ್ ಇಂಜಿನಿಯರ್ ಹುದ್ದೆಗಳನ್ನು ನಿರ್ಮಾಣ ಮಾಡಿದ್ದೀರಿ. ಇದರ ಅವಶ್ಯಕತೆ ಇದೇ ಎನ್ನುವುದಕ್ಕೆ ಹೇಗೆ ಸಮರ್ಥನೆ ಮಾಡಿಕೊಡುತ್ತೀರಿ ಎಂದು ಕೇಳುತ್ತೇನೆ. ನ್ಯಾಷನಲ್ ಹೈವೇ ಪ್ರೋಗ್ರೆಸ್ ರಿಪೋರ್ಟ್ ಈ ಸದನದ ಮುಂದೆ ಇಟ್ಟಿದ್ದಾರೆ. ಅದಕ್ಕೆ ಮೂರು ಮೂರುವರೆ ಕೋಟಿ ಎಕ್ಸ್‌ಪೆಂಡಿಚರ್ ಬಂದಿದೆ. ಇದಕ್ಕೆ ಒಬ್ಬ ಚೀಫ್ ಇಂಜಿನೀಯರ್ ಅವಶ್ಯಕತೆ ಇದೆಯೇ? ಒಂದೊಂದು ಡಿವಿಜನ್‌ಗೆ ವರ್ಷಕ್ಕೆ ೧½ ಕೋಟಿ ಖರ್ಚು ಮಾಡುತ್ತಾರೆ. ಇಡೀ ರಾಜ್ಯಕ್ಕೆ ೩½ ಕೋಟಿ ರೂಪಾಯಿ ಖರ್ಚು ಮಾಡುವುದಾದರೆ ಚೀಫ್ ಇಂಜಿನಿಯರ್ ಮತ್ತು ಎಲ್ಲಾ ಪ್ಯಾರ ಫರ್ನೆಲಿಯಾಕ್ಕೆ ಇಷ್ಟೊಂದು ದುಡ್ಡು ಖರ್ಚು ಮಾಡುತ್ತಿರುವುದು ಉಚಿತವೇ ಎಂದು ನಾನು ಕೇಳಬೇಕಾಗುತ್ತದೆ. ಇನ್ನು ಈ ಇಲಾಖೆಯಲ್ಲಿ ಡೂಪ್ಲಿಕೇಶನ್ ಆಫ್ ವರ್ಕ್ಸ್ ಬಗ್ಗೆ ನಿದರ್ಶನ ಕೊಡುತ್ತೇನೆ. ಪಿ.ಎಚ್.ಇ. ಅಸಿಸ್ಟೆಂಟ್ ಇಂಜಿನಿಯರ್, ನ್ಯಾಷನಲ್ ಹೈವೆ ಅಸಿಸ್ಟೆಂಟ್ ಇಂಜಿನೀಯರು ಮತ್ತು ಸಿ. ಮತ್ತು ಬಿ. ಅಸಿಸ್ಟೆಂಟ್ ಇಂಜಿಯರ್, ಈ ಮೂರು ಜನರ ಕೆಲಸ ಅಮಾಲ್ಗಮೇಟ್ ಮಾಡಿ ಒಂದೊಂದು ತಾಲ್ಲೂಕಿನ ಜವಾಬ್ದಾರಿಯನ್ನು ಒಬ್ಬರಿಗೆ ಕೊಡುವುದರಿಂದ ಮೂರು ಜೀಪ್‌ನಲ್ಲಿ ತಿರುಗಾಡುವುದು ಮತ್ತು ಸಂಬಂಧಪಟ್ಟ ಎಲ್ಲ ರೆಕರಿಂಗ್ ಎಕ್ಸ್‌ಪೆಂಡಿಚರ್ ತಡೆಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ನ್ಯಾಷನಲ್ ಹೈವೆ ಕೆಲಸವನ್ನು ನೋಡಿಕೊಳ್ಳುವುದಕ್ಕೆ ಮೂರು ತಾಲ್ಲೂಕಿಗೆ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಇರುತ್ತಾನೆ. ಅವನು ಇಲ್ಲಿಂದ ಅಲ್ಲಿ, ಅಲ್ಲಿಂದ ಇಲ್ಲಿ ರಸ್ತೆಯಲ್ಲಿ ಹೋಗುವಾಗ ಬ್ರಿಡ್ಜ್ ರಸ್ತೆ ಏನು ಆಗಿದೆಯೆಂದು ನೋಡಿಕೊಳ್ಳುವ ಕೆಲಸ ಮಾತ್ರ ಅವನದ್ದು. ಪಿ.ಎಚ್.ಇ.ಗೆ ಬಂದರೆ ಕೆಲವು ತಾಲ್ಲೂಕುಗಳಲ್ಲಿ ಪೈಪ್ ವಾಟರ್ ಸ್ಕೀಮ್ ಕಡಿಮೆ ಇರುತ್ತದೆ. ಕೆಲವು ಕಡೆ ಹೆಚ್ಚು ಇರಬಹುದು.

ಇಷ್ಟು ಮಾತ್ರ ಹೇಳುತ್ತೇನೆ, ಒಂದು ಆಡ್ಮಿನಿಸ್ಟ್ರೇಟಿವ್ ಕಂಟ್ರೋಲ್ ಕೆಳಗೆ ಎಲ್ಲಾ ತಾಲ್ಲೂಕಿನ ಕೆಲಸಗಳನ್ನು ತರುವ ಮುಖೇನ ಎಸ್ಟಾಬ್ಲಿಷ್‌ಮೆಂಟ್ ಮೇಲೆ ಅನಾವಶ್ಯಕವಾಗಿ ಮಾಡುವ ಖರ್ಚನ್ನು ಉಳಿಸಲಿಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಈ ಡಿಪಾರ್ಟ್‌ಮೆಂಟ್ ರೀ ಆರ್ಗನೈಜ್ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಈ ಬಗ್ಗೆ ಮಿಶ್ರಾ ಕಮಿಟಿ ನೇಮಕ ಮಾಡಿ ಅವರು ಡಿಪಾರ್ಟ್‌ಮೆಂಟನ್ನು ಹೇಗೆ ರೀ ಆರ್ಗನೈಸ್ ಮಾಡಬೇಕು ಎನ್ನುವ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ ಶ್ರೀಮಾನ್ ಚನ್ನಬಸಪ್ಪನವರಿಗೆ ಮೊದಲನೆಯದಾಗಿ ಆರೋಗ್ಯ ಸರಿ ಇಲ್ಲ. ನಾನು ಕಟುವಾಗಿ ಕೆಲವು ಪದಗಳನ್ನು ಪ್ರಯೋಗ ಮಾಡಿದರೆ ತಮ್ಮ ಮನಸ್ಸಿಗೆ ಅದನ್ನು ತೀವ್ರತೆಯಿಂದ ತೆಗೆದುಕೊಳ್ಳಬಾರದು ಎಂದು ಹೇಳುತ್ತೇನೆ. ತಾವು ೧೯೫೬ರ ರಿಂದ ೧೯೬೨ರ ರವರೆಗೆ ಪಿ.ಡಬ್ಲ್ಯು.ಡಿ. ಮಿನಿಸ್ಟರ್ ಆಗಿದ್ದಾಗ ನಾನು ಕಾಂಗ್ರೆಸ್ಸಿನಲ್ಲ ಸಾಮಾನ್ಯ ಕಾರ್ಯಕರ್ತನಾಗಿದ್ದೆನು. ನಂತರ ತಮ್ಮ ಕಂಪನಿ ಬಿಟ್ಟು ಹೊರಗಡೆ ಬಂದು ಯುದ್ಧ ಮಾಡಬೇಕಾಗಿ ಬಂತು. ಆಗ ತಾವು ಲೋಕೋಪಯೋಗಿ ಇಲಾಖೆಯಲ್ಲಿ ಚೆನ್ನಾಗಿ ಅಧ್ಯಯನ ಮಾಡಿ ಆಡಳಿತವನ್ನು ನಡೆಸತಕ್ಕ ದಕ್ಷ ರಾಜಕಾರಣಿ ಎಂದು ತಿಳಿದುಕೊಂಡಿದ್ದೆ. ಆ ರೀತಿ ೩-೪ ವರ್ಷಗಳು ಕೆಲಸ ಮಾಡಿದ್ದೀರಿ. ನಾನು ಪಕ್ಷದ ರಾಜಕಾರಣದಿಂದ ಮಾತನಾಡುತ್ತಾ ಇಲ್ಲ. ನಾನು ಒಂದು ವರ್ಷ ನಿದರ್ಶನ ಕೊಡುವುದಾದರೆ ಅಧಿಕಾರಿ ಹೆಸರು ಹೇಳುವುದು ಬೇಡ, ಅವರು ತಾವು ನಮ್ಮ ತಾಲ್ಲೂಕಿನಲ್ಲಿ ಪ್ರವಾಸಕ್ಕೆ ಬರುತ್ತೀರಿ ಎಂದು ನಿದ್ರೆ ಬರತಕ್ಕ ಗುಳಿಗೆ ತರಿಸಿ ಸೇವಿಸಿ ಮಲಗಿದ್ದ ವಿಚಾರ ನೋಡಿದ್ದೇನೆ. ರಾಜಕಾರಣಿಯ ಮುಖವನ್ನು ನೋಡಿ ನಮಸ್ಕಾರ ಮಾಡಿ ಚಾಡಿ ಹೇಳಬೇಡಿ ಎಂದು ಹೇಳುತ್ತಿದ್ದರು. ಈವತ್ತು ಪಿ.ಡಬ್ಲ್ಯು.ಡಿ. ಇಲಾಖೆಯು ಎಷ್ಟೊಂದು ಹದ್ದು ಮೀರಿದ ವರ್ತನೆಯಿಂದ ಈ ಪರಿಸ್ಥಿತಿ ಬಂದಿದೆ. ಈ ಇಲಾಖೆಯನ್ನು ರೀ ಆರ್ಗನೈಜ್ ಮಾಡುವುದಕ್ಕೆ ನಿಮಗೆ ಹೊಳೆಯಲಿಲ್ಲವೇ? ಈವತ್ತು ಈ ಡಿಪಾರ್ಟ್‌ಮೆಂಟನ್ನು ಸರಿಯಾದ ಮಾರ್ಗದಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಒಂದು ರೂಪುರೇಖೆ ಕೊಡತಕ್ಕ ಪರಿಶ್ರಮ ತಮಗೆ ಇದ್ದಂಥ ಪರಿಸ್ಥಿಯಲ್ಲಿ, ತಾವು ಅದನ್ನು ಕಾರ್ಯಗತ ಮಾಡುವುದಕ್ಕೆ ಏತಕ್ಕೆ ಮನಸ್ಸು ಮಾಡಲಿಲ್ಲ? ೫ ಜನ ಚೀಫ್ ಇಂಜನಿಯರ್ಸ್ ಹೆಚ್ಚು ಮಾಡಿ ಅನಾವಶ್ಯಕವಾಗಿ ಖರ್ಚು ಜಾಸ್ತಿ ಮಾಡಿದ್ದೀರಿ. ವರ್ಕ್‌ಲೋಡ್ ಆಧಾರದ ಮೇಲೆ ಚೀಫ್ ಇಂಜಿನಿಯರ್ಸ್ ಹುದ್ದೆ ನಿರ್ಮಾಣ ಮಾಡಿದ್ದೀರಾ ಅಥವಾ ಕೆಲವು ವ್ಯಕ್ತಿಗಳ ಸಮಾಧಾನಕ್ಕಾಗಿ ಹುದ್ದೆಗಳನ್ನು ನಿರ್ಮಾಣ ಮಾಡಿದ್ದೀರಾ? ಏತಕ್ಕೋಸ್ಕರ ಹುದ್ದೆಗಳನ್ನು ನಿರ್ಮಾಣ ಮಾಡಿದ್ದೀರಿ? ರಾಜಕೀಯ ಒತ್ತಡಕ್ಕಾಗಿ ಕೆಲವರ ಸಮಾಧಾನಕ್ಕಾಗಿ ಈ ಹುದ್ದೆಗಳ ನಿರ್ಮಾಣ ಮಾಡಿದ್ದೀರಿ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇಷ್ಟು ಮಾತ್ರ ಹೇಳಬೇಕಾಗುತ್ತದೆ, ತಾವು ಕೂಡ ದಾಕ್ಷಿಣ್ಯ ಪ್ರವೃತ್ತಿಯಿಂದ ಆಡಳಿತ ನಡೆಸುತ್ತೀರಿ ಎಂದು ತಿಳಿದುಕೊಂಡಿರಲಿಲ್ಲ. ಈ ಮಟ್ಟಕ್ಕೆ ಇಳಿದಿದ್ದು ದುರ್ದೈವ ಎಂದು ಹೇಳಬೇಕಾಗುತ್ತದೆ.

(ಶ್ರೀ ಹೆಚ್. ಡಿ. ದೇವೇಗೌಡ)

ಪಿ.ಎಚ್.ಇ. ನ್ಯಾಷನಲ್ ಹೈವೇ ಮತ್ತು ರೆಗ್ಯೂಲರ್ ಸಬ್‌ಡಿವಿಜನ್ಸ್ ಏನು ಇವೆ, ಇವು ಎಲ್ಲಾ ಕೆಲಸಗಳನ್ನೂ ಒಂದು ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್ ಕೆಳಗೆ ತರುವ ಮುಖೇನ ಸಬ್‌ಡಿವಿಜನ್ ಕೆಲಸ ಹೆಚ್ಚಿದರೆ ತಾಲ್ಲೂಕಿನ ಜ್ಯೂರಿಸ್ ಡಿಕನ್ ಕಮ್ಮಿ ಮಾಡಿ ಒಂದು ಸಬ್‌ಡಿವಿಜನ್‌ಗೆ ಬದಲಾಗಿ ಎರಡು ಸಬ್‌ಡಿವಿಜನ್ ಮಾಡಲಿ, ಬೇಡ ಎಂದು ಹೇಳುವುದಿಲ್ಲ. ಆ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯ ಇಲ್ಲವೆ ? ಒಂದು ಕಡೆ ಪೈಪು ಕೆಟ್ಟು ಹೋಯಿತು ಎಂದರೆ ಫೋನ್ ಮಾಡಿ ಎಲ್ಲೋ ಇರುವ ಪಿ.ಎಚ್.ಸಿ. ಅಸಿಸ್ಟೆಂಟ್ ಇಂಜಿನಿಯರನ್ನು ಅಲ್ಲಿಗೆ ಕರೆಸಿಕೊಳ್ಳುವುದು ಅನಾವಶ್ಯಕ. ಅದು ಸ್ಪೆಷಲೈಜ್ಡ್ ಜಾಬ್ ಅಲ್ಲ. ಪಿ. ಎಚ್. ಸಿ. ಅಸಿಸ್ಟೆಂಟ್ ಇಂಜಿನೀಯರನ್ನು ಕಲ್ಕತ್ತಕ್ಕೆ ಕಳುಹಿಸಿ ಆ ಕೆಲಸದಲ್ಲಿ ಸ್ಪೆಷಲೈಜ್ ಮಾಡಿಸಿಲ್ಲ. ಅಲ್ಲಿ ಇರುವ ರೆಗ್ಯೂಲರ್ ಅಸಿಸ್ಟೆಂಟ್ ಇಂಜಿನೀಯರೇ ಆ ಕೆಲಸವನ್ನು ನೋಡಿಕೊಳ್ಳಬಹುದು. ಈ ದಿಶೆಯಲ್ಲಿ ಕೆಲವು ಹುದ್ದೆಗಳನ್ನು ಕಡಿತ ಮಾಡಿ, ಅನಾವಶ್ಯಕವಾಗಿ ಇರುವ ಚೀಫ್ ಇಂಜಿನಿಯರ್ ಅವರನ್ನು ಮನೆಗೆ ಕಳಿಸಿದರೂ ಚಿಂತೆ ಇಲ್ಲ. ಇನ್ನು ಚೀಫ್ ಇಂಜಿನಿಯರ್ ಪ್ರಮೋಷನ್ ಬಗ್ಗೆ ತಮ್ಮ ಮೇಲೆ ಬರತಕ್ಕ ಒತ್ತಡ ಇದೆ. ಏನೇ ಆದರೂ ಕೂಡ ಈ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಈಗಲಾದರೂ ಟಾಪ್ ಹೆವಿ ಅಡ್ಮಿನಿಸ್ಟ್ರೇಷನನ್ನು ಕಡಿತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಮೊದಲನೆ ಸೂಚನೆ ಕೊಡುತ್ತೇನೆ. ಇನ್ನು ಡಿಸೈನ್ ಸೆಕ್ಷನ್ ಗೇರ್ ಅಪ್ ಮಾಡಬೇಕು. ಪ್ರತಿಯೊಂದು ಚೀಫ್ ಇಂಜಿನಿಯರಿಗೆ ಸಂಬಂಧಪಟ್ಟ, ಹಾಗೆ ಡಿಸೈನ್ ಸೆರ್ಕಲ್‌ನಲ್ಲಿ ಒಬ್ಬ ಪರಿಶ್ರಮ ಇರುವ ವ್ಯಕ್ತಿಯನ್ನು ಹಾಕಿ ಸೆರ್ಕಲ್ ಗೇರ್ ಅಪ್ ಕೆಲಸಗಳನ್ನು ಮಾಡುವ ಮುಖೇನ ಅನಾಹುತಕ್ಕೆ ಒಳಗಾಗುವುದು ಕಡಿಮೆಯಾಗುತ್ತದೆ. Due to faulty design ಅನೇಕ ಕೆಲಸಗಳು ಅನಾಹುತಕ್ಕೆ ಒಳಗಾಗುತ್ತವೆ. ಸೂಪರ್‌ವಿಜನ್ ಕೆಲಸ ಎಷ್ಟೇ ಚೊಕ್ಕವಾಗಿ ಮಾಡಿದರೂ ಕೂಡ, ತಪ್ಪು ಡಿಸೈನಿಂಗಳನ್ನು ಮಾಡುವ ಮುಖೇನ ಕೆಲವು ಅನಾಹುತಗಳು ಸಂಭವಿಸುತ್ತವೆ. ಅವನ್ನು ತಪ್ಪಿಸಬೇಕಾಗಿದ್ದರೆ, ಪರಿಶ್ರಮ ಇರುವ ಜನರನ್ನು ಹೊಣೆಗಾರಿಕೆಗೆ ಹಾಕಬೇಕಾಗುತ್ತದೆ. ಈವತ್ತು ಹೇಳತಕ್ಕ ಮಾತನ್ನು ಪಿ.ಡಬ್ಲ್ಯೂ.ಡಿ. ಬಗ್ಗೆ ಪದೇಪದೇ ಹೇಳುತ್ತಿದ್ದೇನೆ. ಗೋರ್ಕಲ್ಲಿನ ಮೇಲೆ ಮಳೆಗರೆದಂತೆ ಎಂದು ಹೇಳಿದ ಹಾಗೆ ನನ್ನ ಪರಿಸ್ಥಿತಿ ಆಗಿದೆ. ಡಿಸೈನ್ ಸೆರ್ಕಲ್‌ನಲ್ಲಿ ಈವತ್ತು ಸರಿಯಾದಂತ ಕ್ರಮ ತೆಗೆದುಕೊಳ್ಳತಕ್ಕ ವ್ಯಕ್ತಿಗಳು ಇದ್ದರೆ ಅರ್ಧ ಭಾಗದ ಅನಾಹುತಗಳನ್ನು ತಡೆಗಟ್ಟುವುದಕ್ಕೆ ಸಾಧ್ಯ ಆಗುತ್ತದೆ. ನನ್ನ ವೈಯಕ್ತಿಕ ಅನುಭವದಿಂದ ಹೇಳಬೇಕಾದರೆ ಯಾರಾದರೂ ಇವತ್ತು ರಾಜಕೀಯದಲ್ಲಿ ಪ್ರಭಾವವನ್ನು ಬೀರತಕ್ಕ ಶಕ್ತಿ ಇಲ್ಲದೆ ಅಧಿಕಾರಿಗಳು ಇದ್ದರೆ ಅವರನ್ನು ಡಿಸೈನ್ ಸೆಕ್ಷನ್ನಿಗೆ ಹಾಕುತ್ತಾರೆ. Men unwanted in the Public Works Department will go for Investigation. ಅಲ್ಲಿ ಏನೂ ಗಿಟ್ಟುವುದಿಲ್ಲ. ಗಿಟ್ಟದೆ ಇರುವ ಜಾಗಕ್ಕೆ ಯಾರೂ ಹೋಗುವುದಕ್ಕೆ ತಯಾರು ಇಲ್ಲ. ಈ ಒಂದು ಜಾಗಕ್ಕೆ ಪರಿಶ್ರಮ ಇರುವ ಜನರನ್ನು ಹಾಕಿ ಅವರಿಗೆ ಸ್ಪೆಷಲ್ ಪೇ ಕೊಡಬೇಕಾಗುತ್ತದೆ. ಅಟ್ರಾಕ್ಟಿವ್ ಸಂಬಳ ಕೊಡಬೇಕಾಗುತ್ತದೆ. ಆ ರೀತಿ ಡಿಸೈನ್ ಸೆಕ್ಷನ್‌ನಲ್ಲಿ ಅಥವಾ ಇನ್‌ವೆಸ್ಟಿಗೇಷನ್ ಕೆಲಸ ಮಾಡುವವರಿಗೆ ಆಕರ್ಷಣೀಯವಾದ ಸಂಬಳವನ್ನು ಕೊಡುವ ಮುಖೇನ ಅಲ್ಲಿ ಪರಿಣತರನ್ನು ಹಾಕುವ ವ್ಯವಸ್ಥೆ ಮಾಡಬೇಕು. ಈ ಒಂದು ಪರಿಶ್ರಮ ಹೊಂದಿರತಕ್ಕ ಎಕ್ಸಿಕ್ಯೂಟಿವ್ ಇಂಜಿನಿಯರ್ ಮೇಲ್ಪಟ್ಟವರನ್ನು ನೇಮಕ ಮಾಡ ಬೇಕಾಗಿದೆ. ಅಸಿಸ್ಟೆಂಟ್ ಇಂಜಿನಿಯರ್, ಜೂನಿಯರ್ ಇಂಜಿನಿಯರ್ ಯಾವ ರೀತಿ ಮಾಡಬೇಕೋ ಆ ರೀತಿ ಮಾಡಿಕೊಂಡು ಹೋಗುತ್ತಾರೆ. ಅದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಪ್ರಮೋಷನ್ ಆಫ್ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಬಗ್ಗೆ ಕಳೆದ ಸಾರಿ ಸಭೆಯಲ್ಲಿ ಚರ್ಚೆ ಮಾಡಿದ್ದೇವು ಪ್ರೊಬೇಷನರ್ಸ್ ಪರ್ಕ್ಸ್‌ನ ಪ್ರಮೋಟೀಸ್ ಬಗ್ಗೆ ದೊಡ್ಡ ಯುದ್ಧ ಆಯಿತು. ಕಮ್ಮಿ ಯುದ್ಧ ಎಂದು ತಿಳಿದುಕೊಳ್ಳಬೇಡಿ, ಹಣದ ಚೀಲದೊಡನೆ ಯುದ್ಧ ಆಯಿತು. ಗದೆ ಹಿಡಿದುಕೊಂಡು ಯುದ್ಧ ಮಾಡಲಿಲ್ಲ. ತಾವು ಪಾಸ್ಟ್ ಲೆಗೆಸಿ ಎಂದು ಒಂದೊಂದು ಸಾರಿ ಹೇಳುತ್ತೀರಿ. ಇಂಟರ್ ಸ್ಟೇಟ್ ಸೀನಿಯಾರಿಟಿ ಬಗ್ಗೆ ಮಾತನಾಡುವಾಗ ಪಾಸ್ಟ್ ಲೆಗೆಸಿ ಎಂದು ಹೇಳಿ ಈವತ್ತು ಅದು ಸರ್ಕಾರದ ತಲೆಯ ಮೇಲೆ ಬಂದಿದೆ, ಹಿಂದೆ ಮಾಡಿದ ಪಾಪದ ಫಲ ಊಟ ಮಾಡಬೇಕು ಎಂದು ಹೇಳುತ್ತೀರಿ. ಹಿಂದಿನ ಸರ್ಕಾರದವರು ಬಹುಶಃ ಗಾಂಜಿ ವೀರಪ್ಪನವರ ಪ್ರಶ್ನೆಗೆ ಉತ್ತರ ಕೊಡುತ್ತಾ ಪ್ರಮೋಟೀಸ್ ಏನು ಇದ್ದಾರೆ ಅವರಿಗೆ ಅನ್ಯಾಯ ಆಗಿರುವುದನ್ನು ಸರಿಪಡಿಸಬೇಕು ಎಂದು ಈ ಶಾಸನ ಸಭೆಯಲ್ಲಿ ಹೇಳಿದ್ದಾರೆ. ಪ್ರಮೋಟೀಸ್ ೨೦-೨೫ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ, ನಿನ್ನೆ ಮೊನ್ನೆ ಪಾಸು ಮಾಡಿದ ಹುಡುಗರು ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಿ ಬಂದರೆ ಅವರ ಕೈಕೆಳಗೆ ೨೫ ವರ್ಷಗಳು ಕೆಲಸ ಮಾಡಿರತಕ್ಕ ಅಸಿಸ್ಟೆಂಟ್ ಇಂಜಿನಿಯರನ್ನು ಹಾಕುವುದರಿಂದ ಈ ಡಿಪಾರ್ಟ್‌ಮೆಂಟಿನಲ್ಲಿ ಡಿಮಾರಲೈಸ್ ಆಗುತ್ತದೆ. ಅದನ್ನು ತಡೆಹಿಡಿಯಿರಿ ಎಂದು ಕೇಳಿದೆವು. ಒತ್ತಡ ಬಹಳ ಆಯಿತು. ಹಣದ ಒತ್ತಡ ತಡೆದುಕೊಳ್ಳುವುದು ಬಹಳ ಕಷ್ಟ

ಆಗಿದೆ. ನೀತಿಯುತ ರಾಜಕಾರಣಿಗಳಿಗೂ ಕೂಡ ಅಪ್ರಾಮಾಣಿಕವಾಗಿ ವರ್ತನೆ ಮಾಡುವ ಪರಿಸ್ಥಿತಿ ಬಂದಿದೆ. ಸುಮಾರು ೧೫-೨೦ ಅಸಿಸ್ಟೆಂಟ್ ಇಂಜಿನಿಯರ್‌ಗಳನ್ನು ಇನ್‌ಚಾರ್ಜ್ ಅರೇಂಜ್‌ಮೆಂಟ್ ಮಾಡಿ, ಎಕ್ಸಿಕ್ಯೂಟಿವ್ ಇಂಜಿನಿಯರ್ ಮಾಡಿ ಇಟ್ಟಿದ್ದೀರಿ ಏತಕ್ಕೆ? ಕಾರಣ ಏನು? ಇದಕ್ಕೆ ಇರುವ ಪ್ರಬಲವಾದ ಕಾರಣವನ್ನು ತಾವು ತಿಳಿಸಬೇಕು. ರಾಜ್ಯದಲ್ಲಿ ಪ್ರಾಮಾಣಿಕವಾಗಿ ದುಡಿದಿರತಕ್ಕ ಅಧಿಕಾರಿಗಳಿಗೆ, ನೀತಿಯುತ ಅಧಿಕಾರಿಗಳಿಗೆ ಮನ್ನಣೆ ಇಲ್ಲ, ಗೌರವ ಇಲ್ಲ, ಒಳ್ಳೆಯ ಸ್ಥಾನ ಇಲ್ಲ ಅವರಿಗೆ ದಕ್ಕಬೇಕಾಗಿರತಕ್ಕ ಯಾವುದೇ ಗೌರವ ದಕ್ಕುತ್ತಾ ಇಲ್ಲ.

2-30 P.M.

ಪ್ರಾಮಾಣಿಕವಾದ ಅಧಿಕಾರಿಗಳಿಗೆ ಮನ್ನಣೆ ಇದೆ, ಗೌರವ ಇದೆ. ಅವರಿಗೆ ಯಾವ ಮಟ್ಟಕ್ಕೆ ಪ್ರೋತ್ಸಾಹ ಕೊಡಲು ಸಿದ್ಧರಿದ್ದೀರಿ? ಅಧಿಕಾರಿಗಳಿಗೆ ಪ್ರಾಮಾಣಿಕವಾಗಿ ಕೆಲಸಮಾಡಿ ಎಂದ ಯಾವ ಮೋರೆಯನ್ನು ಇಟ್ಟುಕೊಂಡು ಕೇಳುತ್ತೀರಿ? ತಾವು ಈ ಸಭೆಯಲ್ಲಿ ಉತ್ತರ ಕೊಡತಕ್ಕ ಕಾಲದಲ್ಲಿ ಇದಕ್ಕೆ ಉತ್ತರ ಕೊಡಬೇಕು. ೧೧೭ ಅಸಿಸ್ಟೆಂಟ್ ಇಂಜನಿಯರ್ಸ್ ಪೈಕಿ ಕೆಲವರಿಗೆ ಒಂದು ರೇಖೆಯನ್ನು ಎಳೆದಿದ್ದೀರಿ. ಹೈಕೋರ್ಟಿನಲ್ಲಿ ೩-೪ ಡಿಸಿಷನ್ಸ್ ಆಗಿವೆ. ಯಾವುದೋ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮತ್ತೊಂದು ಡಿಪಾರ್ಟ್‌ಮೆಂಟ್‌ನಿಂದ ಎಳೆದುಕೊಂಡು ಒಂದು ತಮಗೆ ಬೇಕಾದಾಗ ಒಂದು ಮಾರ್ಗ, ಬೇಡವಾದಾಗ ಮತ್ತೊಂದು ಮಾರ್ಗ. ತಮ್ಮ ಚೌಕಟ್ಟಿನೊಳಗೆ ಬರುವುದಾದರೆ, ಕಾನೂನು ವ್ಯಾಖ್ಯಾನ ಮಾಡುವುದರಲ್ಲಿ ನಿಮ್ಮ ಲಾ ಡಿಪಾರ್ಟ್‌ಮೆಂಟ್‌ನಲ್ಲಿ, ಜಿ.ಎ.ಡಿ.ಯಲ್ಲಿ ಪರಿಣಿತರು ಇದ್ದಾರೆ. ಅಧಿಕಾರಿಗಳಿಗೆ ಇಂಥ ಒಂದು ಕೆಟ್ಟ ಹವ್ಯಾಸ ಬೇಡ ಎಂದು ಸವಿನಯದಿಂದ ಹೇಳುತ್ತೇನೆ. ೧೧೭ ಅಸಿಸ್ಟೆಂಟ್ ಇಂಜನಿಯರ್ಸ್ ಪೈಕಿ ಇಂಟರ್‌ಸ್ಟೇಟ್ ಸೀನಿಯಾರಿಟಿ ಲೀಸ್ಟ್‌ನಲ್ಲಿರುವ ಕೇವಲ ೮೫-೮೬ಕ್ಕೋ ಲಿಮಿಟ್ ಮಾಡಿ ಪ್ರಮೋಷನ್ ಕೊಟ್ಟು, ಬಾಕಿಯುವರಿಗೆ ಇಲ್ಲ ಎಂದು ಹೊರಗೆ ಇಟ್ಟಿದ್ದೀರಿ. ಇದರ ಜೊತೆಗೆ ಸೂಪರಿಂಟೆಂಡಿಂಗ್ ಇಂಜನಿಯರ್ ಪ್ರಮೋಷನ್ ಇದಕ್ಕೆ ಇಷ್ಟೊಂದು ಹೋರಾಟ ಏಕೆ? ಇರತಕ್ಕ ಯೋಗ್ಯ ವ್ಯಕ್ತಿಗಳಿಗೆ ಪ್ರಮೋಷನ್ ಕೊಡತಕ್ಕಂಥಾದಕ್ಕೆ ಇರತಕ್ಕ ಅಡೆತಡೆ ಏನು? ಚೀಫ್ ಇಂಜನಿಯರ್ ಪ್ರಮೋಷನ್, ನಾನು ಯಾವ ವ್ಯಕ್ತಿ ಬಗ್ಗೆ ವಕೀಲಿ ವಹಿಸಿಕೊಳ್ಳಬೇಕಾಗಿಲ್ಲ. ಒಂದು ವಿಷಯವನ್ನು ಹೇಳುತ್ತೇನೆ, ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದ್ದರೆ. ಪ್ರಮೋಷನ್ ಅಡ್ಡಿ ಬರುವುದಿಲ್ಲ ಎಂದು ಹೇಳಿದ್ದೀರಿ. We cannot withhold his pr motion, I would like to ask the Minister for P.W.D. in the caseof Sri Gopal why the promotion is with-held for the post of Chief Engineer. I have not seen his face. He has not come to me. He has not approached me. I know what things are going on. If you have to adopt any policy, you adopt it strictly. I call this Department as 'Politicians Welfare Department'. Nothing short of this. ಪ್ರಮೋಷನ್‌ಗೆ ಹಣ ಬೇಕು, ಪ್ರತಿಯೊಂದು ಹಂತದಲ್ಲೂ ಹಣ ಬೇಕು, ನಾಚಿಕೆ ಪಡಬೇಕು. ಒಬ್ಬ ಅಧಿಕಾರಿಯ ಮೇಲೆ ಆಪಾದನೆ ಬಂದಾಗ ಮೇಜರ್ ಕಮ್ಯೂನಿಟಿ, ಆಮೇಲೆ ಹಣವೇ ಕಮ್ಯೂನಿಟಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟನ್ನು ಛಿದ್ರಛಿದ್ರವಾಗಿ ಕತ್ತರಿಸಿದರೂ ಪಾಪ ಬರುವುದಿಲ್ಲ, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಎಂದು ಕರೆಯುವುದಕ್ಕೆ ಬದಲಾಗಿ ಒಂದು ಹೊಸ ಹೆಸರಿನಿಂದ ಕರೆಯುತ್ತೇನೆ. ಪಾಲಿಟೀಷಿಯನ್ಸ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಎಂದು ಕರೆಯಿರಿ. It does not apply only to Congress 'R'. ಹಣ ಹೊಡೆಯತಕ್ಕ ಜಾತಿ ಎಲ್ಲಾ ಕಡೆ ಇರಬಹುದು. ಕೆಲವರಿಗೆ ಹಣ ಹೊಡೆಯುವುದಕ್ಕೆ ಜಾಸ್ತಿ ಅವಕಾಶ ಇದೆ. I am not bothered whether Sri Channabasappa is continued or not. ಹಣ ಹೊಡೆಯುವುದರಲ್ಲಿ ಪಕ್ಷ ಬೇಧ ಇಲ್ಲದೆ ಹೇಳುತ್ತೇನೆ. ಎಲ್ಲಾ ಪಕ್ಷದಲ್ಲಿ ಒಳ್ಳೆಯವರು ಇದ್ದಾರೆ, ಕೆಟ್ಟವರು ಇದ್ದಾರೆ. ಒಳ್ಳೆಯವರು ಅಲ್ಪಸಂಖ್ಯಾತರಾಗಿದ್ದಾರೆ; ಮೂಕರಾಗಿದ್ದಾರೆ ಅವರಿಗೆ ಎದುರಿಸತಕ್ಕಂಥ ಶಕ್ತಿ ಇಲ್ಲ. ಹಣದ ಹುಚ್ಚನ್ನು ತಡೆಹಿಡಿಯುವುದಕ್ಕೆ ಹೋಗಿ ನಾವು ಕೊಚ್ಚಿಕೊಂಡು ಹೋಗುತ್ತಿದ್ದೇವೆ. ಕಂಡು ಕಾಣದ ಹಾಗೆ ಇರೋಣ ಎಂದು ಹೇಳುತ್ತಾರೆ, ರಾಜಕಾರಣಿಗಳೆಲ್ಲಾ ಹಾಗೆ ಎಂದರೆ ಸ್ವೀಪಿಂಗ್ ರಿಮಾರ್ಕ್ ಮಾಡುವುದಕ್ಕೆ ತಯಾರಿಲ್ಲ. ನಾನು ತಮ್ಮನ್ನು ಕೇಳಲಿಕ್ಕೆ ಇಚ್ಛೆ ಪಡುತ್ತೇನೆ. ಪ್ರಮೋಷನ್‌ನಲ್ಲಿ ನಿರ್ದಿಷ್ಟ ಮಾಡಿರೆ ದುರ್ದೈವದಿಂದ ಏನಾಗಿದೆ ಅಧ್ಯಕ್ಷಣೆಯುವರೇ ಲೋಕೋಪಯೋಗಿ ಇಲಾಖೆಗೆ ೫ ಜನ ಗಂಡಂದಿರು ಇದ್ದಾರೆ. ಈ ಒಂದು ಇಲಾಖೆಯಲ್ಲಿ ಡಿಸಿಪ್ಲೆನ್ ಎನ್‌ಫೋರ್ಸ್ ಮಾಡುವುದಕ್ಕೆ ಪಿ. ಡಬ್ಲ್ಯೂ.ಡಿ ಮಂತ್ರಿಗಳಿಗೆ ಸಾಧ್ಯವಿದೆಯೇ? ಇದಕ್ಕೆ ಎಂದಾದರೂ ಒಂದು ದಿವಸ ಕೊನೆ ಆಗಬೇಕು. ಈ ಡಿಪಾರ್ಟ್‌ಮೆಂಟಿನ ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್‌ನಲ್ಲಿ ಸರಿಯಾದ ರೀತಿ ಇಟ್ಟುಕೊಂಡು ನಡೆಸಬೇಕಾದರೆ ಒಬ್ಬೊಬ್ಬ ಮಂತ್ರಿ ಒಂದೊಂದು ರೀತಿ ಬರೆಯಬಹುದು. ಒಬ್ಬರನ್ನು ಟ್ರಾನ್ಸ್‌ಫರ್ ಮಾಡಿ ಎಂದು ಒಬ್ಬ ಮಂತ್ರಿ ಬರೆದರೆ, ಇನ್ನೊಬ್ಬರು ಬೇಡ ಎಂದು ಬರೆಯುತ್ತಾರೆ. ಮೇಜರ್ ಇಂ

(ಶ್ರೀ ಹೆಚ್. ಡಿ. ದೇವೇಗೌಡ)

ಗೇಷನ್ ಬೇರೆ ಮಂತ್ರಿಗಳಿದ್ದಾರೆ, ಶ್ರೀ ನಾಗರಾಳ್‌ರವರು ಬೇರೆ ಪೋರ್ಟ್‌ಫೋಲಿಯೋನಲ್ಲಿದ್ದಾರೆ. ಯಾವನೋ ಒಬ್ಬ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳಬೇಕು, ವರ್ಗಮಾಡಬೇಕು, ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಬೇಕು ಎಂದು ಒಬ್ಬ ಮಂತ್ರಿ ಬರೆದರೆ ಮತ್ತೊಬ್ಬ ಮಂತ್ರಿ ಬಿಡಬಹುದು ಎಂದು ಬರೆಯುತ್ತಾರೆ. ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಕೂಡ ಇಲಾಖೆಯೊಳಗೆ ಒಬ್ಬ ಹೊಣೆಗಾರ ಆಗಲಿಕ್ಕೆ ಇಲ್ಲ ಎನ್ನುವ ಭಾವನೆ ಬರುತ್ತದೆ ಲೋಕೋಪಯೋಗಿ ಇಲಾಖೆಯ ಎಲ್ಲಾ ವ್ಯವಹಾರಗಳನ್ನು ಪಿ.ಡಬ್ಲ್ಯೂ.ಡಿ. ಮಂತ್ರಿಗಳು ನೋಡಬಹುದು, ಎರಡು ವರ್ಷದ ಆಡಳಿತ ಅನುಭವದಲ್ಲಿ ನನಗನ್ನಿಸುತ್ತದೆ. ಇವರ ಕೈ ಕೈಯಲ್ಲಿ ಪುರುಷತ್ವ ಇಲ್ಲ, ಶಕ್ತಿ ಇಲ್ಲ ಎಂದು ಕಟುವಾಗಿ ಹೇಳಬೇಕಾಗುತ್ತದೆ. ಹಿಂದೆ ಎಂದೂ ಕಾಣದಂತಹ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ, ಸರ್. ಎಂ. ವಿಶ್ವೇಶ್ವರಯ್ಯರಂಥ ಮಹಾ ಪುರುಷರನ್ನು ಎಲ್ಲಿ ಕಂಡಿದ್ದೆವೋ ಅಂಥ ರಾಜ್ಯದಲ್ಲಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಯಾವ ಕೆಳದರ್ಜೆಗೆ ಬಂದಿದೆಯೆಂದರೆ: ಬಹುಶಃ ಊಹೆಗೆ ಕೂಡ ನಿಲುಕಲಿಕ್ಕೆ ಸಾಧ್ಯವಿಲ್ಲದ ರೀತಿಗೆ ಬಂದಿದೆ ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್ ಒಬ್ಬ ಮಿನಿಸ್ಟರ್ ಕೈಯಲ್ಲಿ ಇದೆಯೋ ಚೀಫ್ ಮಿನಿಸ್ಟರ್ ಕೈಯಲ್ಲಿದೆಯೋ, ಮಾನ್ಯ ಸಿದ್ಧವೀರಪ್ಪನವರ ಕೈಯಲ್ಲಿದೆಯೋ ಗೊತ್ತಿಲ್ಲ. To take any disciplinary action, all these ministers must agree. ಇಂಥ ಒಂದು ಪರಿಸ್ಥಿತಿ ಬಂದಾಗ, ಡಿಪಾರ್ಟ್‌ಮೆಂಟಿನ ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕ್ಕೆ ನಾನು ಒಂದು ಸಲಹೆ ಕೊಡುತ್ತೇನೆ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಇಲ್ಲ. ಅವರು ಬಹುಶಃ ಇಲ್ಲದೇ ಇದ್ದರೂ ಲೋಕೋಪಯೋಗಿ ಇಲಾಖೆ ಕಿತ್ತು ಹಾಕಲಿ. It is a party matter. I am not bothered. I care two Hoots. ನನಗೆ ಬೇಕಾಗಿರುವುದು ಇಲಾಖೆ ಕೆಲಸ. ದೇಶದ ಹಿತದೃಷ್ಟಿಯಿಂದ ಸಮರ್ಪಕವಾಗಿ ನಡೆಯುವುದಕ್ಕೆ ಇವತ್ತು ಯಾರಿಗೆ ಅಧಿಕಾರ ಕೊಡಬೇಕೋ, ಅವರಿಗೆ ಅಧಿಕಾರ ಕೊಡಬೇಕು ನಂಬಿಕೆ ಇದ್ದವರನ್ನು ಇಟ್ಟುಕೊಂಡು ನಡೆಸಿಕೊಂಡು ಹೋಗಲಿ, ಈ ಒಂದು ಕೆಲಸವನ್ನು ಮುಖ್ಯ ಮಂತ್ರಿಗಳು ಮಾಡದೇ ಇದ್ದರೆ ಕರ್ನಾಟಕದ ಇತಿಹಾಸದಲ್ಲಿ ಇದನ್ನು ಬರೆಯುತ್ತಾರೆ. ಮುಖ್ಯ ಮಂತ್ರಿಗಳು ತಿಳಿದುಕೊಂಡಿರಬಹುದು, ನಾನು ಪೋಲ್ಯೂಟೆಡ್ ಆಡಳಿತ ಕೊಡುತ್ತಿದ್ದೇನೆ ಎಂದು. ೧೯೫೦ರಿಂದ ರಾಜಕಾರಣಕ್ಕೆ ಪ್ರವೇಶ ಮಾಡಿದರೂ ನನಗೆ ಪಿ.ಡಬ್ಲ್ಯೂ.ಡಿ. ಇಲಾಖೆ ಬಗ್ಗೆ ಸ್ವಾಭಿಮಾನ ಇದೆ ಅಭಿಮಾನ ಇದೆ. ಈ ಇಲಾಖೆಯನ್ನು ಕಂಡರೆ ಅಕ್ಕರೆ ಇಟ್ಟುಕೊಂಡಿದ್ದೆ. ಆದರೆ ಇವತ್ತು ತಲೆತಗ್ಗಿಸಿ ಮಾತನಾಡಬೇಕಾಗಿದೆ. ಕರ್ನಾಟಕದಲ್ಲಿ ಈ ಇಲಾಖೆಯ ಪರಿಸ್ಥಿತಿ ಇಲ್ಲಿಗೆ ಬಂದಿದೆ. ಆದುದರಿಂದ ತಾವು ದಯಮಾಡಿ, ಕೆಲವು ಡಿಪಾರ್ಟ್‌ಮೆಂಟ್ಸ್ ರೀಆರ್ಗನೈಸೇಷನ ಬಗ್ಗೆ ಮಾಡುವ ಬಗ್ಗೆ ಹೇಳುತ್ತೇನೆ, ಮುಖ್ಯ ಮಂತ್ರಿಗಳು ಸಭೆಯಲ್ಲಿ ಇರಬೇಕಾಗಿತ್ತು. ನಿಜವಾಗಿಯೂ ಕರ್ನಾಟಕದಲ್ಲಿ ಅಡ್ಮಿನಿಸ್ಟ್ರೇಷನ್ ಟೋನ್ ಅಪ್ ಮಾಡಬೇಕು ಎಂದು ಇಚ್ಛೆ ಇದ್ದರೆ ಯಾರಾದರೂ ಮಧ್ಯಪ್ರವೇಶ ಮಾಡಿದರೆ ನೀವು ಜಾಗ ಖಾಲಿ ಮಾಡಿ ಪಿರಿಯಾಪಟ್ಟಣಕ್ಕೆ ಹೋಗಿ ನಿಮಗೆ ಮರ್ಯಾದೆ ಉಳಿಸಲಿಕ್ಕೆ ಈ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈ ಡಿಪಾರ್ಟ್‌ಮೆಂಟ್ ಬಗ್ಗೆ ಕೆಲವು ಮಾತನ್ನು ಹೇಳುತ್ತೇನೆ, ಡಿಪ್ಲೊಮೊ ಹೋಲ್ಡರ್ಸ್ ಪ್ರಮೋಷನ್. ಅವರು ಮೆಮೊರಾಂಡಮ್ ಕೊಟ್ಟಿದ್ದಾರೆ. ನಾನು ಒಬ್ಬ ಡಿಪ್ಲೊಮಾ ಹೋಲ್ಡರ್. ಡಿಪ್ಲೊಮೊ ಓದಿಕೊಂಡು ಬಂದಿರುವವರು ಗವರ್ನರ್ ಆಗಿದ್ದಾರೆ, ನಮ್ಮ ಗವರ್ನರ್ ಎಲೆಕ್ಟ್ರಿಕಲ್ ಅಥವಾ ಮೆಕಾನಿಕಲ್ ಡಿಪ್ಲೊಮೊ ಮಾಡಿರಬಹುದು. ಬರೀ ಡಿಪ್ಲೊಮಾ ಮಾಡಿದವರನ್ನು ಕಡೆಗಣಿಸಬೇಡಿ. ನಾನು ವಿರೋಧ ಪಕ್ಷದ ನಾಯಕನಾಗುವ ಸಂದರ್ಭ ಬಂತು. ಪಿ.ಡಬ್ಲ್ಯೂ.ಡಿ. ಮಿನಿಸ್ಟರಾಗಿದ್ದರೆ ಚೆನ್ನಾಗಿ ಕೆಲಸ ಮಾಡುತ್ತಿದ್ದೆ. ಇವತ್ತು ಡಿಪ್ಲೊಮಾ ಹೋಲ್ಡರ್ಸ್ ೨೦ ವರ್ಷದಿಂದ ಕೆಲಸಮಾಡಿರತಕ್ಕವರು ಸ್ಟಾಗ್ನೆಂಟ್ ಆಗುತ್ತಿದ್ದಾರೆ. ಇವತ್ತು ಪ್ರಮೋಷನ್ ಬಗ್ಗೆ ೧:೪ ಎಂದು ಏನು ರೇಷಿಯೋ ಇಟ್ಟುಕೊಂಡಿದ್ದೀರಿ, ಅದರ ಬಗ್ಗೆ ಪೂರ್ಣ ವಿವರಣೆ ಕೊಟ್ಟು ಮಾತನಾಡುವುದಕ್ಕೆ ಹೋಗುವುದಿಲ್ಲ,

ಇವತ್ತು ಅವರುಗಳಿಗೆ ಉತ್ತೇಜನ ಕೊಡಬೇಕಾದರೆ, ಅವರು ೨೦ ವರ್ಷಗಳಿಂದ ಒಂದೇ ಸಮನೆ ಕೆಲಸಮಾಡಿ ನಾನ್‌ಗೆಜೆಟೆಡ್ ಹುದ್ದೆಯವರಾಗಿರುತ್ತಾರೆ, ಯೋಗ್ಯವಾಗಿ ಕೆಲಸ ಮಾಡತಕ್ಕ ಅಧಿಕಾರಿಗಳೂ ಇದ್ದಾರೆ. ಅವರಿಗೆ ಪ್ರಮೋಷನ್ ಬೆನಿಫಿಟ್ಸ್ ಕೊಡುವ ಬಗ್ಗೆ ಯಾವುದೇ ಕಾರಣದಿಂದ ತಡೆಹಿಡಿಯತಕ್ಕಂತಾದ್ದು ಯೋಗ್ಯವಲ್ಲ ಈ ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಅದನ್ನು ಕನ್ಸಿಡರ್ ಮಾಡಬೇಕು. ಡಿಪ್ಲೊಮಾ ಓದಿಕೊಂಡು ಡ್ರಾಫ್ಟ್ಸ್‌ಮೆನ್ ಕೆಲಸ ಮಾಡುತ್ತಾರೆ. ಎಕ್ಸಿಕ್ಯೂಟಿವ್ ಮತ್ತು ಮಿನಿಸ್ಟೀರಿಯಲ್ ಎರಡು ಕೆಲಸವನ್ನೂ ಮಾಡತಕ್ಕ ತಿದ್ದುಪಡಿಯನ್ನು ಪಿ.ಡಬ್ಲ್ಯೂ.ಡಿ. ರೆಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಚೇಂಜ್ ಮಾಡಿ 'ನಾನ್ ಡಿಪ್ಲೊಮೋ ಡ್ರಾಫ್ಟ್ಸ್‌ಮೆನ್‌ನ್ನು ನೇಮಕ ಮಾಡುವಾಗ ಬೆನಿಫಿಟ್ ಕೊಡಿ ಎಂದು ಕೇಳುತ್ತೇನೆ. ಬಿ. ಇ. ಇಂಜನಿಯರಿಂಗ್ ಗ್ರಾಜ್ಯುಯೇಟ್ಸ್ ಆಫೀಸಿನಲ್ಲಿ ಕೆಲಸ ಮಾಡುತ್ತಾರೆ. ಸಂದರ್ಭ ಬಂದರೆ ಎಕ್ಸಿಕ್ಯೂಟಿವ್ ಲೈನಿನಲ್ಲಿ ಕೆಲಸ ಮಾಡುತ್ತಾರೆ. ಟೆಕ್ನಿಕಲ್ ಅಸಿಸ್ಟೆಂಟ್ ಆಗಿ ಕೆಲಸ

ಮಾಡುತ್ತಾರೆ. ಹಾಗೆಯೇ ಅಸಿಸ್ಟೆಂಟ್ ಇಂಜನಿಯರ್ ಆಗಿ ಕೆಲಸ ಮಾಡುತ್ತಾರೆ. ಡಿಪ್ಲೊಮೋ ಮಾಡಿರುವವರನ್ನು ಕೊಳೆಸಾಕತಕ್ಕುದ್ದನ್ನು ಮಾಡಬಾರದು. ಇಂಟರ್ ಚೇಂಜಬಲ್ ಕೇಡರ್ ಮಾಡಿದರೆ ಅನಾಮಲಿ ಹೋಗುತ್ತದೆ, ಅತೃಪ್ತಿ ತೊಡೆದು ಹಾಕುವುದಕ್ಕೆ ಅವಕಾಶವಾಗುತ್ತದೆ. Let there be an amendment to the Cadre and Recruiment rules. ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಆಮೇಲೆ 'ವರ್ಕ್ ಚಾರ್ಜ್ ಎಸ್ಟಾಬ್ಲಿಶ್‌ಮೆಂಟ್' ಬಗ್ಗೆ ತಮಗೆ ಒಂದು ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಅವರು ಒಂದು ಡಿಮ್ಯಾಂಡನ್ನು ಕೂಡ ಕೊಟ್ಟಿದ್ದಾರೆ. ಅದನ್ನು ಪರ್ಯಾಲೋಚನೆ ಮಾಡುವುದಕ್ಕೆ ಸರ್ಕಾರಕ್ಕೆ ಏನೂ ಅಡ್ಡಿಯಾಗಲಾರದು. ೧೪ ಬೇಡಿಕೆಗಳನ್ನು ಇಟ್ಟಿದ್ದಾರೆ. ಆ ಡಿಮ್ಯಾಂಡ್‌ಗಳಿಂದ ಸರ್ಕಾರಕ್ಕೆ ಹೆಚ್ಚು ಹಣಕಾಸಿನ ಭಾರ ಆಗುವುದಿಲ್ಲ, ಆದುದರಿಂದ ಅವನ್ನು ಪರ್ಯಾಲೋಚನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಡಿಸಿಪ್ಲಿನರಿ ವಿಷಯ ಮಾತನಾಡುತ್ತಿದ್ದೆ. ೧೯೭೨ರಲ್ಲಿ ನೀವು ಅಧಿಕಾರಕ್ಕೆ ಬಂದಿರಿ. ಬಂದಾಗ ಒಂದು ದೊಡ್ಡ ಗುಲ್ಲು ಇಡೀ ರಾಜ್ಯದಲ್ಲಿ ಎಲ್ಲಾ ಗುಲ್ಲು. ಏನೆಂದರೆ ಭ್ರಷ್ಟಾಚಾರ ಅಧಿಕಾರಿಗಳನ್ನು ಮನೆಗೆ ಕಳುಹಿಸುತ್ತೇವೆ ಎನ್ನತಕ್ಕಂಥ ದೊಡ್ಡ ಗುಲ್ಲು, ಇಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ, ಅಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವಂಥ ಗುಲ್ಲನ್ನು ಇಡೀ ರಾಜ್ಯದಲ್ಲಿ ಹರಡುವಂತೆ ಮಾಡಿದಿರಿ. ಇದರಿಂದ ಜನ ನಿಮ್ಮನ್ನು ಬೀದಿಯಲ್ಲಿ ಕೊಂಡಾಡುತ್ತಿದ್ದರು. ನಾನಾ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ ನಮ್ಮ ಶ್ರೀಮಾನ್ ಕೆ. ಎಚ್. ಪಾಟೀಲರು ೧೯೭೨ರಲ್ಲಿ ಅರಣ್ಯ ಇಲಾಖೆಯಲ್ಲಿ ಇದ್ದ ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದಾಗ ಹೇಳಿದ್ದಾರೆ. "ಹಿಂದಿನ ಸರ್ಕಾರದಲ್ಲಿ ಏನು ಲಂಗು ಲಗಾಮು ಇಲ್ಲದೆ ನಡೆದುಕೊಳ್ಳುತ್ತಿದ್ದರು, ಹಾಗೆ ನಡೆದ್ದುಕೊಳ್ಳುವುದಕ್ಕೆ ನಾವು ಬಿಡುವುದಿಲ್ಲ ನಮ್ಮ ಸರ್ಕಾರ ತಪ್ಪಿತಸ್ಥ ಅಧಿಕಾರಿಗಳನ್ನು ದಂಡಿಸಿ ಬಿಡುತ್ತೇವೆ." ಶ್ರೀ ಕೃಷ್ಣ ಪರಮಾತ್ಮ ದುಷ್ಟರನ್ನು ನಿಗ್ರಹಿಸಿ ಬಿಡುತ್ತೇನೆಂದು ಚಕ್ರವನ್ನು ತಿರುಗಿಸಿ ಬಿಟ್ಟನಲ್ಲ ಹಾಗೆ ಮಟ್ಟು ಬಿಡುತ್ತೇವೆಂದು ಶ್ರೀ ಕೆ. ಎಚ್ ಪಾಟೀಲರು ಹೇಳಿದರು ಅದನ್ನು ಪುನಃ ಓದುತ್ತೇನೆ, "ತಪ್ಪು ಮಾಡಿದ ಅಧಿಕಾರಿಗಳನ್ನು ತಿದ್ದಲಿಕ್ಕೆ ಪ್ರಯತ್ನ ಮಾಡುತ್ತೇವೆ ಸಾಧ್ಯವಿಲ್ಲದ ಅಧಿಕಾರಿಗಳನ್ನು ಮುಕ್ತಾಯಗೊಳಿಸುತ್ತೇವೆ" ಇದು ನಿಮ್ಮ ಕ್ಯಾಬಿನೆಟ್‌ನೊಳಗೆ ಇರತಕ್ಕಂಥ ಒಬ್ಬ ಕೂಲಿಗೆ ಮಂತ್ರಿ ಹೇಳಿರತಕ್ಕಂಥ ಮಾತು. "ಅಧಿಕಾರಿಗಳನ್ನು ಮುಕ್ತಾಯಗೊಳಿಸುತ್ತೇವೆ" ಎಂದು ಹೇಳಿದ ಅವರು ಈಗ ನಿಮ್ಮನ್ನೇ ಮುಕ್ತಾಯಗೊಳಿಸುವುದಕ್ಕೆ ಬಂದಿದ್ದಾರೆ.

ಆಮೇಲೆ ನಿಮ್ಮದು ಒಂದು ಇದೆ, ಶ್ರೀಮಾನ್ ಚೆನ್ನಬಸಪ್ಪನವರು ಮಾನ್ಯ ಜಿ. ಪುಟ್ಟಸ್ವಾಮಯ್ಯನವರ ಪ್ರಶ್ನೆಗೆ ಉತ್ತರ ಈ ರೀತಿ ಕೊಟ್ಟಿದ್ದಾರೆ:—

ಪ್ರಶ್ನೆ : "ಮೈಸೂರು ದೇಶದ ಇಂಜನಿಯರುಗಳು ಬಹಳ ಹೆಸರುವಾಸಿಗಳು ಬಹಳ ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದಾರೆ, ಅನಾವಶ್ಯಕವಾಗಿ ಇಂಥ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿದರೆ ದೇಶಕ್ಕೆ ಕೆಟ್ಟ ಹೆಸರು ಬರುವುದಿಲ್ಲವೇ?"

ಈ ಪ್ರಶ್ನೆಗೆ ಮೈಸೂರು ರಾಜ್ಯದ ಪಿ.ಡಬ್ಲ್ಯು.ಡಿ. ಮಂತ್ರಿಗಳು ಈ ರೀತಿ ಉತ್ತರ ಕೊಟ್ಟಿದ್ದಾರೆ.—

"ಮೈಸೂರು ದೇಶದಲ್ಲಿರುವ ಇಂಜನಿಯರ್ಸ್ ಬಹಳ ಒಳ್ಳೆಯ ಹೆಸರನ್ನು ಪಡೆದವರೂ ಇದ್ದಾರೆ. ಕೆಟ್ಟ ಹೆಸರನ್ನು ಪಡೆದವರೂ ಇದ್ದಾರೆ, ಒಳ್ಳೆಯವರಿಗೆ ಪ್ರೋತ್ಸಾಹ ಕೊಡುತ್ತೇವೆ, ಕೆಟ್ಟವರಿಗೆ ಡೆಟ್ಟರಿಂಗ್ ಪನಿಶ್‌ಮೆಂಟ್ ಕೊಡಬೇಕಾಗುತ್ತದೆ"

ಮತ್ತೆ ಎಂ. ಎಸ್. ಕೃಷ್ಣನ್‌ರವರ ಪ್ರಶ್ನೆ ಈ ರೀತಿಯಾಗಿದೆ.—

"ಇದರಲ್ಲಿ ಹೇಳಿರುವ ಅಪಾದನೆಗಳು ಪ್ರೈಮಾಫೇಸಿಯಾಗಿದೆ ಬಹಳ ತೀವ್ರ ಸ್ವರೂಪದು ಎಂದು ಇಲ್ಲಿ ಸಸ್‌ಪೆಂಡ್ ಮಾಡಿದ್ದಾರೆ. ಇವರನ್ನೆಲ್ಲಾ ಈಗ ವಾಪಸ್ಸು ತೆಗೆದುಕೊಂಡಿರುವುದರಿಂದ ಇವರ ಮೇಲೆ ಎನ್‌ಕ್ವೈರಿ ನಡೆಯಬೇಕಾಗಿತಲ್ಲ ಎಂದು ಸರಕಾರದ ಅಭಿಪ್ರಾಯವೇ? ಇಲ್ಲವೇ ಇನ್ನೂ ಎನ್‌ಕ್ವೈರಿ ಮುಂದುವರಿಸುತ್ತಿದ್ದೀರಾ?" ಮಾನ್ಯ ಚನ್ನಬಸಪ್ಪನವರು ಈ ರೀತಿ ಉತ್ತರ ಹೇಳಿದ್ದಾರೆ — "ಪ್ರೈಮಾಫೇಸಿ ಕೇಸಿದೆ ಎಂತಲೇ ಮೊದಲು ಸಸ್‌ಪೆಂಡ್ ಮಾಡಿರತಕ್ಕದ್ದು ಮತ್ತು ಇದರ ಉದ್ದೇಶ ಎನ್‌ಕ್ವೈರಿ ಟೈಂನಲ್ಲಿ ಇಲ್ಲಿನ ರಿಕಾರ್ಡ್‌ಗಳ ದುರುಪಯೋಗವಾಗಬಹುದು ಎಂದು ಮಾಡುವುದು."

Sri H. M. Channabasappa.— I am aware of that.

Sri H. D. Deve Gowda, - But you are not aware of that in action now. ಮುಂದೆ ಈ ರೀತಿ ಹೇಳಿದ್ದೀರಿ, ನಮಗೆ ಬೇಕಾದ ಎಲ್ಲಾ ಮಾಹಿತಿಗಳೂ ದೊರೆತ ಮೇಲೆ ಸಸ್‌ಪೆಂಡ್ ಮಾಡಿರುವ ಆಜ್ಞೆಯನ್ನು ರಿವೋಕ್ ಮಾಡಿ ವಾಪಸ್ಸು ತೆಗೆದುಕೊಂಡು ಮುಂದೆ ಎನ್‌ಕ್ವೈರಿ

(ಶ್ರೀ ಹೆಚ್. ಡಿ. ದೇವೇಗೌಡ)

ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ. ನಾನು ಇದನ್ನು ಸುಮ್ಮನೇ ಪ್ರಸ್ತಾಪ ಮಾಡುತ್ತಿಲ್ಲ. ನೀವು, ನಿಮ್ಮ ಸರ್ಕಾರದವರು ಒಂದು ಪಣವನ್ನು ತೊಟ್ಟಿರಿ, ಏನೆಂದರೆ ಹಿಂದೆ ಇದ್ದಂಥ ಭ್ರಷ್ಟಾಚಾರ ಸರ್ಕಾರವನ್ನು ತೊಡೆದು ಹಾಕಿ ಶಿಷ್ಟಾಚಾರ ಸರ್ಕಾರವನ್ನು ತರುತ್ತೇವೆಂದು ಹೇಳಿದ್ದೀರಿ. ನಿಮ್ಮ ಪಾಡು ಏನು ಆಗಿದೆ ಎಂದರೆ ನಿಮಗೆ ಗುಲ್ಬರ್ಗದಲ್ಲಿ ಜೀವದಾನ ಬಂದಿದೆ. ಗುಲ್ಬರ್ಗದ ಜನ ನಿಮ್ಮನ್ನು ಸ್ವಲ್ಪ ಕೈ ಹಿಡಿದುಕೊಂಡಿದ್ದಾರೆ, ನಾನು ಒಪ್ಪಿಕೊಳ್ಳುತ್ತೇನೆ ಪರಿಸ್ಥಿತಿ ಎಲ್ಲಿಗೆ ಬಂದಿದೆಯೆಂದರೆ ದ್ರೌಪದಿ ಸೀರೆಯನ್ನು ಎಳೆಯುತ್ತಿರುವಾಗ ಅನೇಕ ಜನ ಕೂತಿದ್ದರು, ಹಾಗೆ ನಿಮ್ಮ ಪರಿಸ್ಥಿತಿಯಾಗಿದೆ. ತಾವು ಸಭೆಯಲ್ಲಿ ಸಸ್ಪೆಂಡ್ ಮಾಡಿದಾಗ ಆ ಚಾರ್ಜಸ್‌ಗೆ ಏನು ಉತ್ತರ ಹೇಳಿದ್ದೀರಿ? ಸುಪೀರಿಯರ್ ಆಫೀಸರ ಮೇಲೆ ಒಬ್ಬ ಇಂಜನಿಯರ್ ಬೇನಾಮಿ ಅರ್ಜಿಯನ್ನು ಬರೆಯುತ್ತಾ ಇದ್ದ, ಆದಕ್ಕಾಗಿ ಸಸ್‌ಪೆಂಡ್ ಮಾಡಿದ್ದೇವೆಂದು ಆತನ ಹೆಸರು ಕಡಮನಿ ಎಂದು. Sr. Kadamani, Junior Engineer was suspended for writting pseudonymous letter making allegations against superior officers- ಆ ಕಾರಣಕ್ಕೋಸ್ಕರ ಸಸ್‌ಪೆಂಡ್ ಮಾಡಿದ್ದೀರಿ, ಇನ್ನೊಬ್ಬನನ್ನು [illegible] ರೂಪಾಯಿಗಳ ಚಪ್ಪಡಿ ಕ್ಲಾಸಿಫಿಕೇಷನ್ ಸರಿಯಾಗಿಲ್ಲವೆಂದು ಸಸ್‌ಪೆಂಡ್ ಮಾಡಿದ್ದಾರೆ. ಮತ್ತೆ ಯಾವನೋ ಒಬ್ಬ wrong classification of data ಮಾಡಿದ್ದಾನೆ. ಅವರು ರಿಟೈರ್ ಆಗಿದ್ದಾರೆ ಅವರನ್ನು ಸಹ ಸಸ್‌ಪೆಂಡ್ ಮಾಡಿದ್ದಾರೆ. ಹೀಗೆ ತಾವು ವಿವರಣೆಗಳನ್ನು ಕೊಟ್ಟಿದ್ದೀರಿ ಮೊನ್ನೆ ದಿವಸ ಈ ಸಭೆಯಲ್ಲಿ ನಮ್ಮ ಮುಖ್ಯ ಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ, ನಾನು ಕೃಷ್ಣಾ, ಕಬಿನಿ ಪ್ರಾಜೆಕ್ಟ್ ಬಗ್ಗೆ ಪ್ರಶ್ನೆ ಕೇಳಿದ್ದ, there is a report to the effect that nearly Rs. 34 lakhs of overpayment is made in Krishna but in kabini project overpayment is about Rs. three lakhs ಎಂದು ಹೇಳಿದ್ದಾರೆ.

Sri H. N. Nanje Gowda.— If I remember correctly, later on he rectified and said Rs. five and odd lakhs.

ಶ್ರೀ ಎಚ್. ಡಿ. ದೇವೇಗೌಡ.— ಐದೂವರೆ ಲಕ್ಷ ರೂಪಾಯಿ ಇರಬಹುದು. ಏತಕ್ಕೆಂದರೆ ಅವರಿಗೆ ಮೇಜರ್ ಇರಿಗೇಷನ್‌ನಲ್ಲಿ ಕೆಲಸ ಮಾಡಿರುವ ಅನುಭವ ಇದೆ. ಏತಕ್ಕೆ ಇವರನ್ನು ಸಸ್‌ಪೆಂಡ್ ಮಾಡಲಿಲ್ಲ, ಈ ಡಿಪಾರ್ಟ್‌ಮೆಂಟ್ ಡಿ ಮಾರಲೈಜ್ ಆಗುತ್ತದೆಂದು ಕೇಳಿದಾಗ, this is a matter which we have to decide after we get a final report ಎಂದು ಹೇಳಿಕೊಂಡು ಹೋಗಿದ್ದಾರೆ.

ಸ್ವಾಮಿ, ತಾವು ಮೊದಲು ಅಧಿಕಾರಕ್ಕೆ ಬಂದ ಕೂಡಲೇ [illegible] ಜನರನ್ನು ಸಸ್ಪೆಂಡ್ ಮಾಡಿದಿರಲ್ಲಾ ಅದನ್ನು ತಿಳಿಸಬೇಕು. It is on a preliminary report by the Vigilance Commission or on the final report by the Vigilance Commission? ಈಗ ಅವರನ್ನು ಮುಟ್ಟಿದರೆ ನಿಮಗೇ ಕುತ್ತು ಬರುತ್ತೆ. ಅವರನ್ನು ಮುಟ್ಟುವುದಕ್ಕೆ ಶಕ್ತಿ ಇಲ್ಲ. ನಾನು ಈ ಮಾತನ್ನು ಅತಿರೇಕ ಮಾಡಿ ಹೇಳುತ್ತಾ ಇಲ್ಲ. ಅಥವಾ ಉತ್ಪ್ರೇಕ್ಷೆ ಮಾಡಿ ಹೇಳುತ್ತಾ ಇಲ್ಲ ಈ ಸಭೆಯಲ್ಲಿ ಮುಖ್ಯ ಮಂತ್ರಿಗಳು ಹೇಳಿದ್ದನ್ನೇ ನಾನು ಉಲ್ಲೇಖ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದುವರೆಗೆ ನಾನು ಹೇಳಿದ್ದು ಅಪ್ಪರ್ ಕೃಷ್ಣ ಮತ್ತು ಕಬಿನಿ ವಿಷಯಕ್ಕೆ ಸಂಬಂಧಪಟ್ಟದ್ದು.

ಇನ್ನು ನನ್ನ ಬಿಲ್ಲಿಗೆ ಸಂಬಂಧಪಟ್ಟ ಹಾಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಬರುತ್ತೇನೆ, ಸ್ವಾಮಿ, ಇದು ಒಂದು ದೊಡ್ಡ ಹಗರಣ. ನಾನೂ ಮತ್ತು ಶ್ರೀಮಾನ್ ಹೆಚ್. ಎಂ. ಚೆನ್ನಬಸಪ್ಪನವರು ಏನೋ ಒಂದು ದೊಡ್ಡ ನಾಟಕ್ಷನ ಮಾಡುತ್ತಿದ್ದೇವೆ ಎಂದು. ಈ ಬಗ್ಗೆ ಜನಮಿತ್ರ ಅನ್ನುವ ಪೇಪರಿನಲ್ಲಿ ಏನು ಬಂದಿದೆ ಎನ್ನುವುದನ್ನು ನಾನು ಓದಿದ್ದೇನೆ, ಅಂದಾಜು ಇಲ್ಲದೆ [illegible] ಲಕ್ಷ, [illegible] ಲಕ್ಷ, [illegible] ಲಕ್ಷ, [illegible] ಲಕ್ಷ ಪೇಮೆಂಟ್ ಆಗಿವೆ. ಇದನ್ನು ತಾವೇ ಹೇಳಿದ್ದಿರಿ. [illegible] ದಿನಗಳಲ್ಲಿ [illegible] ಲಕ್ಷ ರೂಪಾಯಿ ಪೇಮೆಂಟ್ ಮಾಡಿದ್ದಾರೆ. ಇದಕ್ಕೆ ಎಸ್ಟಿಮೇಟ್ ಇಲ್ಲ, ಬಿಲ್ ಪೇಮೆಂಟ್ ಮಾಡಿದ್ದಾರೆ. ಆ ವಿವರಣೆಯನ್ನು ನಾನು ಹೆಚ್ಚು ಕೊಡಬೇಕಾಗಿಲ್ಲ. ಅವೆಲ್ಲಾ ಹೇಗೆ ಆಯಿತು ಎನ್ನುವುದು ತಮಗೇ ಗೊತ್ತಿದೆ. ಈ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಗಳಲ್ಲಿ ಒಂದು ಪ್ರಶ್ನೆಯನ್ನು ಕೇಳಬೇಕಾಗಿದೆ. ವಿರೋಧ ಪಕ್ಷದ ನಾಯಕರಿಗೆ ಹಲವಾರು ಕಡೆಯಿಂದ ದೂರು ಬರುತ್ತವೆ. ಅದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಫರ್‌ವಾರ್ಡ್ ಮಾಡುತ್ತೇನೆ ಈ ಬಗ್ಗೆ ಪತ್ರವನ್ನೂ ಕೂಡ ಬರೆದಿದ್ದೇನೆ. ಆದರೆ ಆ ರೀತಿ ಬರೆದರೆ ಅದಕ್ಕೆ ಒಂದು ಬಣ್ಣ ಕಟ್ಟುವುದು ಏತಕ್ಕೆ? ಈಗ ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇಂಥಾವಕ್ಕೆಲ್ಲಾ ಒಂದು ಕಥೆ ಕಟ್ಟಿದ್ದಾರೆ. ಜನಮಿತ್ರ ಅನ್ನುವ ಪೇಪರಿನಲ್ಲಿ ಇಂಥಾ ಹೇಳಿಕೆಯೆಲ್ಲಾ ಬಂದಿವೆ. ಅದಕ್ಕೆ ಛಾಲೇಂಜ್ ಕೌಂಟರ್ ಛಾಲೇಂಜ್ ಕೂಡ ಬಂದಿವೆ. ಈ ಬಗ್ಗೆ ಪೇಪರಿನಲ್ಲಿ ಯಾವ ಯಾವ ಸಂದರ್ಭದಲ್ಲಿ ಏನೇನು

ಬಂದಿದೆ ಎನ್ನುವುದು ಎಲ್ಲವನ್ನೂ ಕಟ್ ಮಾಡಿ ಇಟ್ಟುಕೊಂಡಿದ್ದೇನೆ, ಅದನ್ನು ನನಗೆ ಕಳಿಸಿಕೊಟ್ಟವರು ಮಾನ್ಯ ಚೆನ್ನಬಸಪ್ಪನವರೇ. ಯಾವಾಗ ಎಂದರೆ ೧೯೭೨ ರಲ್ಲಿ ಅವರು ನನ್ನ ಪರವಾಗಿ ಭಾಷಣ ಮಾಡುವುದಕ್ಕೆ ಬಂದಿದ್ದಾಗ ಶ್ರೀಮಾನ್ ನಿಜಲಿಂಗಪ್ಪನವರು ಆಡಿದ ಭಾಷಣದ ಪ್ರತಿಗಳೆಲ್ಲವನ್ನೂ ಕಟ್ ಮಾಡಿ ಇಟ್ಟುಕೊಂಡು ಅವೆಲ್ಲವನ್ನೂ ಹೇಳಿದ್ದಾರೆ. ಅವಾಗ ನನಗೆ ಅನಿಸಿತು ನಾನು ಏನಾದರೂ ಈ ಅಸೆಂಬ್ಲಿಗೆ ಮೆಂಬರ್ ಆಗಿ ಬಂದರೆ ಇಂಥವರನ್ನೆಲ್ಲಾ ಕಟ್ ಮಾಡಿ ಇಟ್ಟುಕೊಳ್ಳಬೇಕು ಎಂದು. ಈ ಬಗ್ಗೆ ಮೊದಲು ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟದ್ದನ್ನು ಮಾತ್ರ ಇಟ್ಟುಕೊಂಡಿದ್ದೆ. ಈಗ ಪಿ.ಡಬ್ಲ್ಯೂ.ಡಿ. ಗೆ ಸಂಬಧಪಟ್ಟದ್ದೆಲ್ಲವನ್ನೂ ಕೂಡ ಕಟ್ ಮಾಡಿ ಇಟ್ಟುಕೊಂಡಿದ್ದೇನೆ. ಆದುದರಿಂದ ನಾನು ಈಗ ಕೇಳುತ್ತೇನೆ; ಸುಮಾರು ೬೫ ೯೦ ವರ್ಕ್ಸ್‌ಗೆ ಎಸ್ಟಿಮೇಟ ಇಲ್ಲದೆ ಪೇಮೆಂಟ್ ಮಾಡಿದ್ದು ಏತಕ್ಕೆ? ಎಂದು ಹಣಕಾಸಿನ ಮಂತ್ರಿಗಳ ಲೆಟರ್ ಆಫ್ ಕ್ರೆಡಿಟ್ ನೀತಿಗೆ ಏನು ಪಾವಿತ್ರ್ಯ ಉಳಿಯಿತು? ಇದು ಯಾವ ಲೆಟರ್ ಆಫ್ ಕ್ರೆಡಿಟ್‌ರೀ? ಆದುದರಿಂದ ನಾನು ಹೇಳುವುದು ಮಾನವಿದ್ದರೆ ಹಣಕಾಸಿನ ಮಂತ್ರಿಗಳು ರಾಜೀನಾಮೆ ಕೊಡಬೇಕು ಎಂದು. ಮರ್ಯಾದೆಗೆ ಅಂಜಿಕೊಂಡಿರುವ ಯಾರೇ ರಾಜಕಾರಣಿಗಳು ಇರಲಿ ಅವರು ಮೊದಲು ರಾಜೀನಾಮೆ ಕೊಡಬೇಕು.

SRI S. BANGARAPPA.—What is the amount involved in the cases where payment has been made without estimates?

SRI H. D. DEVEGOWDA.—I will come to other Divisions also. I will mention about the letter of credit, the new policy of the Government and other things. How the payments were made? Is there any sanctity for that letter of credit? How the payment of about Rs. 20 lakhs has been made in three days? I am asking Sri Channabasappa as long as he is the P.W.D Minister. Under what circumstances it was done? Why? Is it a Politicians Welfare Department or the Public Works Department? I want to know that. ಈ ಪ್ರೊತಿನ ದಿವಸ ನಿಮ್ಮ ಆಡಳಿತದಲ್ಲಿ ಕೋಡ್ ರೂಲ್ಸ್‌ಗೆ ಬೆಲೆ ಇಲ್ಲ, ಈ ಪ್ರೊತ್ತಿನ ದಿವಸ ನೀವು ಮಾಡಿರತಕ್ಕಂಥ ಪೇಮೆಂಟ್‌ಗೆ ವರ್ಕ್ ಆರ್ಡರ್ ಇಲ್ಲ, ಮತ್ತೊಂದು ಇಲ್ಲ, ಮುಗಿದೊಂದು ಇಲ್ಲ ಈ ಪ್ರೊತ್ತಿನ ದಿವಸ ೨೦-೨೨ ಲಕ್ಷ ರೂಪಾಯಿಗಳು ೨೦/೨೨-೩ ತಿಂಗಳಿನಲ್ಲಿ ಪೇಮೆಂಟ್ ಆಗಿರಬಹುದು. Nearly 50 percent of the amonnt has been swindled. ನಾನು ಇನ್ನೂ ಹೆಚ್ಚು ಹುಡುಕಿಕೊಂಡು ಹೋಗಿಲ್ಲ. ಯಾವ ತಾರೀಖು ಎನ್ನುವುದು ನನಗೆ ಜ್ಞಾಪಕ ಇಲ್ಲ. ನಾನು ಈ ದಿವಸ ಅಸೆಂಬ್ಲಿ ಕೆಲಸ ಮುಗಿಸಿಕೊಂಡು ನನ್ನ ಸಂಬಂಧಿಕರ ಮನೆಗೆ ಹೋಗಿ ರಾತ್ರಿ ೯ ಗಂಟೆಗೆ ಹಾಸನ ಟಿ.ಬಿ. ರೂಮು ಸೇರಿದಾಗ ಕೆಲವರು ನಾನ್ ಅಫಿಷಿಯಲ್ಸ್ ನನ್ನ ಹತ್ತಿರ ಬಂದರು. ಅವರು ಈ ರೀತಿ ಹೇಳಿದರು. ಇದೇನು ವಿರೋಧಪಕ್ಷದ ನಾಯಕರ ಊರಿನಲ್ಲೇ ಈ ರೀತಿ ನಡೆಯುತ್ತದೆಯಲ್ಲಾ ಎಂದು. ಇದು ಯಾರೂ ಏನೊ ಬಣ್ಣ ಕಟ್ಟುವ ಮಾತಲ್ಲ. ಆದಾದ ಮೇಲೆ ನನಗೆ ಒಂದು ಕಾಗದ ಬಂತು. ಅದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಫಾರ್ವಾರ್ಡ್ ಮಾಡಿದೆ. ಇದರಲ್ಲಿ ಏನು ನ್ಯಾಯ ಕಂಡು ಬರುತ್ತದೆ ಅದನ್ನು ಹೇಳಿ ಎಂದು. ನಾವೇನಾದರೂ ಹೇಳಿದರೆ ಜಾತಿ ಬಣ್ಣ ಕಟ್ಟುತ್ತೀರಿ. ಮತ್ತು ಅದನ್ನು ಇನ್ನು ಏನೇನು ಕಲರ್ ಕಟ್ಟಬೇಕೋ ಅದನ್ನೆಲ್ಲಾ ಕಟ್ಟುತ್ತೀರಿ. ಈ ಪ್ರೊತಿನ ದಿವಸ ಕರ್ನಾಟಕದಲ್ಲಿ ಒಂದು ಚೆಕ್ ಡಿಸ್‌ಆನರ್ ಆದರೆ ನಮ್ಮ ನಿಮ್ಮೆಲ್ಲರಿಗೂ ಮಾನ ಹೋಗುವುದಿಲ್ಲವೇ ಎನ್ನುವುದನ್ನು ತಿಳಿದುಕೊಳ್ಳಬೇಕು. ಕರ್ನಾಟಕದ ಇತಿಹಾಸದಲ್ಲಿ ಚೆಕ್ ಡಿಸ್‌ಆನರ್ ಆದದು ತಮಗೆ ಗೊತ್ತೇ? ಆದುದರಿಂದ ಸರ್ಕಾರದ ಆಡಳಿತ ನಡೆಸತಕ್ಕಂಥವರಿಗೆ ಘನತೆಗೌರವಗಳು, ಗಾಂಭೀರ್ಯಗಳು ಇವೆಯೋ ಎಂದು ನಾನು ಕೇಳುತ್ತೇನೆ ನಾನು ತಮ್ಮ ಹತ್ತಿರ ವಿನಯಪೂರ್ವಕವಾಗಿ ಕೇಳುತ್ತೇನೆ. ನಾಳೆ ದಿವಸ ಈ ಸಭೆಯಲ್ಲಿ ತಾವು ಉತ್ತರ ಹೇಳುವಾಗ ನಾನು ನಿಮ್ಮ ಮೇಲೆ ಈಗ ಮಾಡಿರತಕ್ಕಂಥ ಛಾರ್ಜಸ್ ಏನೇನು ಇವೆ including action taken on these things ಅದನ್ನು ಈ ಸಭೆಯಲ್ಲಿ ಇಡದೇಹೋದರೆ ನಾನು ಈ ಸಭೆಯನ್ನು ನಡೆಸಲಿಕ್ಕೆ ಬಿಡುವುದಿಲ್ಲ. ನೀವು ರೂಲ್‌ನ ತೆಗೆದುಕೊಂಡು ಹೇಳಬಹುದು ರೂಲ್ಸ್ ಬಂದಂಥಾ ಕಾಲದಲ್ಲಿ ಇಂತಹ ಕೆಟ್ಟ ಆಡಳಿತ ಬರುತ್ತದೆ ಎಂದು ಅವರು ತಿಳಿದಿರಲಿಲ್ಲ. ಅವರು ರೂಲನ್ನು ಬರೆಯುವಾಗ ದೇಶದ ಘನತೆಗೌರವಗಳನ್ನು ಕಾಪಾಡಿಕೊಂಡು ಬರುತ್ತಾರೆ ಎಂದು ರೂಲು ಬರೆದಿಟ್ಟಿದ್ದಾರೆ. ಅವರು ಇಂತಹ ಕೀಳುಮಟ್ಟದ ಆಡಳಿತ ಬರುತ್ತದೆ ಎಂದು ತಿಳಿದಿರಲಿಲ್ಲ. ಆದುದರಿಂದ ನಾವು ಈಗ ನಿಮ್ಮ ಮೇಲೆ ಮಾಡಿರತಕ್ಕಂಥ ಛಾರ್ಜಸ್ ಏನೇನು ಇವೆ ಅದಕ್ಕೆ ಸರಿಯಾದ

(ಶ್ರೀ ಹೆಚ್. ಡಿ. ದೇವೇಗೌಡ)

ಉತ್ತರ ಕೊಡದೆ ಗಿಲಟಿನ್‌ಗೆ ಹಾಕಿ ಓಟು ಪಡೆಯುವುದಾದರೆ ಅಥವಾ ನಮ್ಮನ್ನು ಸಸ್ಪೆಂಡ್ ಮಾಡಿದರೂ ಪರವಾಯಿಲ್ಲಾ ನಾವು ಈ ಸಭೆಯನ್ನು ನಡೆಸುವುದಕ್ಕೆ ಬಿಡುವುದಿಲ್ಲ ನಿಮಗೆ ಏತಕ್ಕೋಸ್ಕರ ಹಣ ಬೇಕು, ಯಾರಿಗೋಸ್ಕರ ಹಣ? ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ನಾರ್ಮ್ಸ್ ಎಲ್ಲಿದೆ, ಸರ್ಕಾರಕ್ಕೆ ಘನತೆಗೌರವ ಎಲ್ಲಿದೆ? ಏತಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ೧೨೪ ರೂಪಾಯಿ ಕಲ್ಲುಚಪ್ಪಡಿಗೆ ಸ್ಪೆಸಿಫಿಕೇಷನ್ ಸರಿಯಾಗಿಲ್ಲ ಎಂದು ಅವರನ್ನು ಸಸ್ಪೆಂಡ್ ಮಾಡಿದ್ದೀರಿ. ಮತ್ತು ಮೂಗರ್ಜಿ ಬರೆಯುವವರನ್ನು ಸಸ್ಪೆಂಡ್ ಮಾಡಿದ್ದೀರಿ, ಆದರೆ ೫೧/೨ ಲಕ್ಷ, ೩ ಲಕ್ಷ, ೩೦ ಲಕ್ಷ ಇಂಥಾ ಪೇಮೆಂಟ್ ಆಗಿರುವ ಕಡೆ ಏನೂ ದುರುಪಯೋಗವಾಗಿಲ್ಲ ಎಂದು ಅವರ ಮೇಲೆ ಸರಿಯಾದ ಆಕ್ಷನ್ ತೆಗೆದುಕೊಂಡಿಲ್ಲ. ಮತ್ತೊಂದು ಕಡೆ ನೋಡಿದರೆ ಒಂದು ಡಿವಿಷನ್‌ನಲ್ಲಿ ಲಿಂಗಾಯಿತರು, ಒಂದು ಡಿವಿಜನ್‌ನಲ್ಲಿ ಒಕ್ಕಲಿಗರು, ಇದ್ದಾರೆ ಅದೇರೀತಿ ಬೆಂಗಳೂರು ಡಿವಿಜನ್‌ನಲ್ಲಿ ನೋಡಿದರೆ ಹರಿಜನರೇ ಬಹಳ ಇದ್ದಾರೆ. ಆದುದರಿಂದ ಇಲ್ಲಿ ಸರ್ಕಾರ ಇದೆಯೋ ಎಂದು ನಾನು ಕೇಳುತ್ತೇನೆ.

ಇನ್ನು ಬಿಜಾಪುರದ ಡಿವಿಜನ್ ತೆಗೆದುಕೊಂಡರೆ ಅಲ್ಲಿಯ ಪಾರ್ಲಿಮೆಂಟ್ ಸದಸ್ಯರೇ ಹೇಳಿದ್ದಾರೆ ೯೦ ಪರ್ಸೆಂಟ್‌ನಷ್ಟು ಹಣ ಬೋಗಸ್ ಪೇಮೆಂಟ್ ಆಗಿವೆ ಎಂದ ಅದರ ಪ್ರೆಸ್ ಕಟಿಂಗ್ ನನ್ನ ಹತ್ತಿರ ಇದೆ. ಈ ಒಂದು ಡಿವಿಜನ್‌ನಲ್ಲಿ ೩೧/೨ ಯಿಂದ ೪ ಕೋಟಿ ರೂಪಾಯಿಯವರೆಗೆ ಖರ್ಚು ಮಾಡಿದ್ದಾರೆ ಶ್ರೀಮಾನ್ ಕೆ. ಎಚ್. ರಂಗನಾಥ್‌ರವರು ನನಗಿಂತ ಹಿರಿಯ ಸದಸ್ಯರಲ್ಲದಿದ್ದರೂ ಕೂಡ ನನಗಿಂತ ಹೆಚ್ಚು ಅನುಭವ ಇದೆ ಎಂದು ಹೇಳುತ್ತೇನೆ. ಅವರಿಗೂ ಗೊತ್ತಿದೆ. ಒಂದೊಂದು ಡಿವಿಜನ್‌ಗೆ ಖರ್ಚು ಮಾಡಬೇಕಾದರೆ ಬಹಳ ಹೆಚ್ಚು ಎಂದರೆ ಒಂದು-ಒಂದೂವರೆ ಕೋಟಿ ರೂಪಾಯಿಗಿಂತ ಹೆಚ್ಚು ಹಣ ಖರ್ಚು ಮಾಡುವ ಹಾಗಿಲ್ಲ

ಅದಕ್ಕೆ ಎಷ್ಟು ಸಬ್ ಡಿವಿಜನ್ ಇವೆ? ೪ ಸಬ್ ಡಿವಿಜನ್ ಇವೆ, ಒಂದು ಸಬ್ ಡಿವಿಜನ್‌ನಲ್ಲಿ ೧೨೦ ಲಕ್ಷ ರೂಪಾಯಿ ಪೇಮೆಂಟ್ ಆಗಿದೆ. ಬರೀ ಹಾಸನದ ವಿಷಯ ಮಾತ್ರ ಮಾತನಾಡುತ್ತೇನೆ ಎಂದು ತಿಳಿದುಕೊಳ್ಳಬೇಡಿ, It is humanly possible to make Rs. 120 lakhs payment in One Sub-Division? ಯಾರ ತಾತನ ಮನೆ ಗಂಟು ಎಂದು ಕೇಳುತ್ತೇನೆ? ನಿಮ್ಮ ಮನೆಯಿಂದ ಹಣ ತಂದಿದ್ದೀರಾ? ಯಾರ ಮನೆ ಹಣ?

೩-೦೦ ಪಿ.ಎಮ್.

ಶ್ರೀ ಕೆ. ಪುಟ್ಟಸ್ವಾಮಿ.—ತಾತನ ಮನೆಯದಂತೂ ಅಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಬರೀ ಹೆಬ್ಬೆಟ್ಟು ಒತ್ತಿರುವುದು ಕಷ್ಟ. ಹೆಸರೂ ಇಲ್ಲ, ಕುಲವೂ ಇಲ್ಲ, ಎನ್.ಆರ್.ಬಿಲ್. ಒಂದೇ ಹೆಬ್ಬೆಟ್ಟು ರಾಜಕೀಯದಲ್ಲಿ ನಿಮ್ಮ ಪಕ್ಷ, ನಮ್ಮ ಪಕ್ಷ ಎಂದು ಹೇಳಬೇಡಿ. ಯಾವುದೇ ಪಾರ್ಟಿ ಇರಲಿ, ಅಸೆಂಬ್ಲಿ ಮೆಂಬರ್ಸ್, ಮಂತ್ರಿಗಳು ದುಡ್ಡು ಹೊಡೆಯುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ವಿರೋಧ ಪಕ್ಷಕ್ಕೂ ಕೂಡ ಈ ಮಾತನ್ನು ಹೇಳುತ್ತಿದ್ದಾರೆ ಗೌರವದಿಂದ ತಲೆ ಎತ್ತಿಕೊಂಡು ಓಡಾಡುವುದಕ್ಕೆ ಜನ ನಿಮಗೂ ಬಿಡುವುದಿಲ್ಲ, ತಮಗೆ ನಿಷ್ಪಕ್ಷಪಾತದಿಂದ ಆಡಳಿತ ನಡೆಸುವುದಕ್ಕೆ ಆಗದಿದ್ದರೆ ಆ ಜಾಗವನ್ನು ತೆರವು ಮಾಡಿ ಹೊರಗೆ ಹೋಗಿ. ಬಿಜಾಪುರದ ಬಗ್ಗೆ ತಾವು ಏನು ಇನ್‌ವೆಸ್ಟಿಗೇಷನ್ ಮಾಡಿದ್ದೀರಿ ಎಂಬುದನ್ನು ಸಭೆಯಲ್ಲಿ ಹೇಳಬೇಕು ಹೇಳದೇ ಹೋದರೆ, ತಮ್ಮ ರೂಲ್ಸ್ ಮತ್ತು ರಗ್ಯುಲೇಷನ್‌ಗೆ ವಿರೋಧ ಪಕ್ಷದವರು ಗೌರವ ಕೊಡದೆ ಎಲ್ಲೆ ಮೀರಿ ವರ್ತನೆ ಮಾಡಿದರು ಎಂದು ತಾವು ಹೇಳಿದರೂ ಅದಕ್ಕೆ ನಾವು ಮನ್ನಣೆ ಕೊಡುವುದಕ್ಕಾಗುವುದಿಲ್ಲ.

Sri K. Puttaswamy.—It is a threat to the house.

ಶ್ರೀ ಹೆಚ್. ಡಿ. ದೇವೇಗೌಡ.—ಈ ಹೌಸ್‌ಗೆ ತ್ರೆಟನ್ ಏತಕ್ಕೆ ಮಾಡಲಿ! ಈ ಸಭೆಗೆ ಅಕ್ಕ ಕೇಳುತ್ತಿದ್ದೇನೆ. The house has got supreme powers to punish us ರಿಲೀಫ್ ಕಾಮಗಾರಿ ಬಗ್ಗೆ ಚೀಫ್ ಮಿನಿಸ್ಟರ್‌ರವರು ಹೇಳಿರುವ ಮಾತು ಜ್ಞಾಪಕಕ್ಕೆ ಬಂತು: ಅವರು ೨೫ ಪರ್ಸೆಂಟ್ ಹಣ ರಿಲೀಫ್ ಕಾಮಗಾರಿಯಲ್ಲಿ ಅಪವ್ಯಯವಾಗಿದೆ ಎಂದು ಹೇಳಿದ್ದಾರೆ. ಅದನ್ನು ಓದಿಬಿಡುತ್ತೇನೆ.

ಅದು ಈ ರೀತಿ ಇದೆ:—Mr. said that only 75 percent of the drought relief reached the people to home it was meant and the rest was sanethed away by the agents of Congress (O)". ನಾನು ಕಾಂಗ್ರೆಸ್ "ಓ"

ನವರು ದುಡ್ಡು ಹೊಡೆದಿದ್ದಾರೆ, ನಮ್ಮ ಪಾರ್ಟಿಯವರು ದುಡ್ಡು ತಿಂದಿದ್ದಾರೆ ಕ್ರಮ ತೆಗೆದುಕೊಳ್ಳಬೇಡಿ, ಅವರ ಮರ್ಯಾದೆಯನ್ನು ಉಳಿಸಿ ಎಂದು ವಿರೋಧ ಪಕ್ಷದ ನಾಯಕನಾಗಿ ಕಾಂಗ್ರೆಸ್ 'ಒ' ಪಕ್ಷದವನಾಗಿ ನಾನು ಬಂದಿದ್ದರೆ ಸಭೆಗೆ ಹೇಳಿ. ದೇಶದ ಜನ ತಿಳಿದುಕೊಳ್ಳಲಿ. ಅದು ಇಲ್ಲದಿದ್ದರೆ ಆ ಕಳ್ಳರು ಯಾರು ಹೊಡೆದಿದ್ದಾರೋ ಅದರಲ್ಲಿ ನೀವು ಜಾಮೀನು ಆಗಿದ್ದೀರಿ. ನೀವು ಹೆಚ್ಚಿನ ಭಾಗ ತೆಗೆದುಕೊಂಡಿದ್ದೀರಿ ಎಂದು ಹೇಳುತ್ತೇನೆ. ೬೩ ಕೋಟಿ ರೂಪಾಯಿಯಲ್ಲಿ ೧೫ ಕೋಟಿ ರೂಪಾಯಿಯನ್ನು ಯಾರು ಹೊಡೆದಿದ್ದಾರೆ, ಹೊಡೆದಿರತಕ್ಕದರಲ್ಲಿ ನಿಮಗೆ ಎಷ್ಟು ಬಂದಿದೆ, ನಿಮ್ಮ ಜೇಬಿಗೆ ಎಷ್ಟು ಬಂದಿದೆ ಎಂದು ತಿಳಿಸಿ. ನಿಮ್ಮ ಜೇಬಿಗೆ ಬಂದಿಲ್ಲ ಅಂದರೆ ಯಾರು ದುಡ್ಡು ಹೊಡೆದಿದ್ದಾರೋ ಅವರನ್ನು ಹ್ಯಾಂಗ್ ಮಾಡಿ. ಈ ಸಭೆಯಲ್ಲಿ ನಾನು ಹೇಳಿದೆ ೩ ಜನರ ಒಂದು ಸಮಿತಿಯನ್ನು ಮಾಡಿ, ನಮ್ಮ ಪಾರ್ಟಿಯವರು ಬೇಡ, ಯಾರನ್ನು ಬೇಕಾದರೂ ಅದರಲ್ಲಿ ಹಾಕಲು ಈ ಸಭೆಗೆ ಅನುಮತಿ ಕೊಡಿ ಎಂದು ನಿಮಗೆ ರಿಕ್ವೆಸ್ಟ್ ಮಾಡಿದೆ, ಇವತ್ತು ೨೫ ಪರ್ಸೆಂಟ್ ಮಿಸ್‌ಯೂಸ್ ಆಗಿದೆ ಎಂದು ಹೇಳುವವನು ನಾನಲ್ಲ, ಕರ್ನಾಟಕದ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಇದರ ಬಗ್ಗೆ ನಾಳೆ ನಿರ್ಣಯ ಆಗಬೇಕು. ಅಷ್ಟು ಸುಲಭವಾಗಿ ನಾವು ನಮ್ಮನ್ನು ಹತ್ತಿಕ್ಕಲಿಕ್ಕೆ ಪ್ರಯತ್ನ ಮಾಡಬೇಡಿ. ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ. ದೇಶದ ದೃಷ್ಟಿಯಿಂದ ಇದು ಇತ್ಯರ್ಥವಾಗಬೇಕು. ಯಾರ ಪುರುಷಾರ್ಥಕ್ಕಾಗಿಯೂ ಅಥವಾ ಯಾರಿಗೋಸ್ಕರವಾಗಿಯೂ ತಾವು ಈ ರಾಜ್ಯವನ್ನು ಆಳುತ್ತಾ ಇಲ್ಲ. ೧೫ ಕೋಟಿ ರೂಪಾಯಿ ಹಣವನ್ನು ಬಿಜಾಪುರ ಮತ್ತು ಗುಲ್ಬರ್ಗಾದಲ್ಲಿ ಕಾಂಗ್ರೆಸ್ 'ಒ' ಏಜೆಂಟ್ಸ್ ಹೊಡೆದಿದ್ದರೆ ಆ ಕಳ್ಳರನ್ನು ಸೀಳಿ ತೋರಣ ಕಟ್ಟಿರಿ. ಅದನ್ನು ಮಾಡಲು ತಮಗೆ ಯೋಗ್ಯತೆ ಇಲ್ಲದಿದ್ದರೆ ಇಂತಹ ಮಾತುಗಳನ್ನು ಹೇಳಿಕೊಂಡು ಹೊಟ್ಟೆ ಹೊರೆಯುವುದಕ್ಕೆ ಬದಲಾಗಿ ರಾಜ್ಯದ ಆಡಳಿತ ನಡೆಸದೆ ಮನೆಗೆ ಹೋಗಬೇಕು

ಇನ್ನು ಬೆಂಗಳೂರಿನ ಬಿಲ್ಡಿಂಗ್ ಡಿವಿಜನ್ ಬಗ್ಗೆ ಹೇಳುತ್ತೇನೆ. ಸ್ವಾಮಿ, ಎರಡು ಹಾಸ್ಟೆಲುಗಳ ಎನ್‌ಕ್ವೈರಿ ರಿಪೋರ್ಟನ್ನು ಕೊಡಲಿಕ್ಕೆ ಎಷ್ಟು ದಿವಸ ಬೇಕು? ಸುಮಾರು ಒಂದೂವರೆ, ಎರಡು ತಿಂಗಳು ಆಯಿತು. ಈ ಸಭೆಗೆ ಏನು ಆಗಿದೆ ಎಂದು ಕೊಡಲಿಕ್ಕೆ ಇನ್ನೂ ಆಗಿಲ್ಲ. ಈ ಸಭೆಗೆ ರಿಪೋರ್ಟ್ ಕೊಡಲಿಕ್ಕೆ ಕಾಲ ವಿಳಂಬ ಮಾಡಬಾರದಾಗಿತ್ತು. If the Chief Minister has delayed it is the fault. ಅದಕ್ಕೂ ನನಗೂ ಏನೂ ಸಂಬಂಧ ಇಲ್ಲ. ಇದು ಒಂದು ದೊಡ್ಡ ಇತಿಹಾಸ. ಯಾರ್ಯಾರು ಇದರಲ್ಲಿ ಸೇರಿದ್ದಾರೊ ನನಗೆ ಗೊತ್ತಿಲ್ಲ ೪೦೦–೫೦೦ ಟನ್ ಕಬ್ಬಿಣ ಆ ಡಿವಿಜನ್‌ಗೆ ಸಂಬಂಧಪಟ್ಟ ವರ್ಕ್ಸ್‌ನಲ್ಲಿ ಇಲ್ಲ. ಅದು ೧೫ ಲಕ್ಷ ರೂಪಾಯಿ ಆಗುತ್ತದೋ, ಏನೋ ೧ ಟನ್ ಕಬ್ಬಿಣಕ್ಕೆ ೩ ಸಾವಿರ ರೂಪಾಯಿ ಇರಬೇಕು. ಇದು ಎಲ್ಲಿಗೆ ಹೋಗಿದೆ, ಯಾರಿಗೆ ಕೊಟ್ಟಿದ್ದಾರೆ, ಹೇಗೆ ಆಗಿದೆ? ಇದನ್ನು ಏನಾದರೂ ಹೇಳುವವರು, ಕೇಳುವವರು ಇದ್ದಾರೆಯೇ? ಇಲ್ಲಿ ಆಡಳಿತ ಇದೆಯೋ ಈ ಸರ್ಕಾರದಲ್ಲಿ ಪಿಡಬ್ಲ್ಯು ಡಿಪಾರ್ಟ್‌ಮೆಂಟ್ ಇದೆಯೇ? Is it worth the name? ನಾವು ಈ ಸಭೆಯಲ್ಲಿ ಏತಕ್ಕೆ ಚರ್ಚೆ ಮಾಡಬೇಕು? ಇಲ್ಲಿ ನೀವು ಇರುವವರು, ಅವರೂ, ಹಂಚಿಕೊಳ್ಳುತ್ತೇವೆ ಎಂದು ಹೇಳಿರಿ I am not going to speak hereafter.

ಮತ್ತೆ ಈ ಸಭೆಯಲ್ಲಿ ಮಾತನಾಡಿದರೆ ನನ್ನ ಆಣೆ. ಜನ ನಮಗೆ ಓಟು ಕೊಟ್ಟಿದ್ದಾರೆ ನಮಗೆ ಬೆಂಬಲ ಇದೆ, ಮೆಜಾರಿಟಿ ಇದೆ, ನಾವು ಡಿಸ್ಟ್ರಿಬ್ಯೂಟ್ ಮಾಡಿಕೊಳ್ಳುತ್ತೇವೆ ಎಂದು ಹೇಳಿ. As long as we enjoy majority in the house, we are going to distribute it ಎಂದು ಹೇಳಿ. ಮಿಸ್ಟರ್ ಗುಂಡೂರಾಯರೆ, ಇದನ್ನು ಒಪ್ಪಿಕೊಳ್ಳುತ್ತೀರಾ? ಇದು ಯಾವ ಡೆಮಾಕ್ರಸಿ?

ಶ್ರೀ ಕೆ. ಪುಟ್ಟಸ್ವಾಮಯ್ಯ.—ಕರ್ಪೂರದ ಗೊಂಬೆ ಹಂಸಪಕ್ಷಿ ಹಾರ ನುಂಗಿದೆ ವಿಕ್ರಮಾದಿತ್ಯನಿಗೆ ಏತಕ್ಕೆ ಶಿಕ್ಷೆ ಕೊಡುತ್ತೀರಿ ಗೌಡರೇ?

ಶ್ರೀ ಹೆಚ್. ಡಿ. ದೇವೇಗೌಡ.—ಕೊನೆಯದಾಗಿ ಯಾರಾದರೂ ಎಲ್ಲಿಂದಲಾದರೂ ನನ್ನ ಮೇಲೆ ಒತ್ತಡಗಳನ್ನು ತೆಗೆದುಕೊಂಡು ಬಂದರೆ ಅವರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುತ್ತೇನೆ, ಹುಷಾರ್ ಎಂದು ಹೇಳಿದಿರಿ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಅದನ್ನು ಈಗಲೂ ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಕೊನೆಯುಸಿರು ಇರುವವರೆಗೂ ಹಾಗೆಯೇ ನಡೆದುಕೊಳ್ಳಿ. Either live or die with honour. Hon'ble Minister's honour is at stake. Why should he stay as P.W.D. Minister?

SRI H. M. CHANNABASAPPA.—I will tell the Hon'ble member tommorrow.

ಶ್ರೀ ಎಚ್. ಡಿ. ದೇವೇಗೌಡ.—ಇವೊತ್ತು ಅಧಿಕಾರಿಗಳ ಹೆಂಡತಿಯರು ಹಣ ಹಾಕಿ ಒಂದು ನ್ಯಾಯಬೆಲೆ ಅಂಗಡಿಯನ್ನು ಅದು ಜನತಾ ಬಜಾರೋ ಅಥವಾ ಮಾಯಾ ಬಜಾರೋ ಗೊತ್ತಿಲ್ಲ. ಅಂತೂ ಒಂದು ಅಂಗಡಿಯನ್ನು ಪ್ರಾರಂಭ ಮಾಡಿದ್ದಾರೆ. ಕೆ. ಕೆ. ಮೂರ್ತಿಯವರು ೬೫ ಸ್ಕ್ವೇರ್ಸ್‌ನಲ್ಲಿ ಏನು ಮನೆ ಕಟ್ಟಿಸುತ್ತಿದ್ದಾರೆ, ಅವರ ಮುಂಭಾಗದಲ್ಲಿ ಈ ಅಂಗಡಿಯನ್ನು ತೆರೆದಿದ್ದಾರೆ. ಚೀಫ್ ಇಂಜಿನಿಯರ್ ಅವರು ರಿಟೈರ್ ಆಗಿ ಚಾರ್ಜ್ ಕೊಡುವಾಗ ಈ ರೀತಿ ಅಂಗಡಿ ತೆರೆಯಲು ಅನುಮತಿ ಕೊಟ್ಟಿದ್ದಾರೆ. ಈ ಹಿಂದೆ ಮಾನ್ಯ ಸದಸ್ಯರಾದ ಶ್ರೀ ಅವರ್ಗಿಗಾ ಅವರು ಚೀಫ್ ಇಂಜಿನಿಯರ್ ಒಬ್ಬರ ಆಸ್ತಿ ಬಗ್ಗೆ ಪ್ರಸ್ತಾಪ ಮಾಡಿದಾಗ ಆದರ ಬಗ್ಗೆ ವಿವರ ಕೊಡಿ ಅವರನ್ನು ಹಿಡಿದುಕೊಳ್ಳುತ್ತೇನೆ ಎಂದು ಮಾನ್ಯ ಚೆನ್ನಬಸಪ್ಪನವರು ಹೇಳಿದರು, ತಾವು ಏನನ್ನು ಹಿಡಿದುಕೊಂಡಿರಿ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಚಿತ್ರವನ್ನು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಹೊಡೆಯುವುದಕ್ಕೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಚಿತ್ರದಿಂದ ಏನೂ ಆಗುವುದಿಲ್ಲ, ತಾವು ಬಂದೂಕವನ್ನು ಮೊದಲಿನಂತೆ ತೆಗೆದುಕೊಳ್ಳಬೇಕು,

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಗುಂಡು ಹಾರುವವರೆಗೆ ಸ್ವಲ್ಪ ತಾವು ಸುಮ್ಮನಿರಿ.

ಶ್ರೀ ಎಚ್. ಡಿ. ದೇವೇಗೌಡ.—ಇವೊತ್ತು ನಾನು ಕೇವಲ ಲೋಕೋಪಯೋಗಿ ಇಲಾಖೆಯಲ್ಲಿ ಮಾತ್ರ ಅಧಿಕಾರಿಗಳು ಹಣ ಮಾಡಿದ್ದಾರೆಂದು ಹೇಳುತ್ತಿಲ್ಲ, ಈ ಇಲಾಖೆ ಖರ್ಚು ಮಾಡುವ ಇಲಾಖೆ ಯಾದ್ದರಿಂದ ಹಣ ಸೋರಿಹೋಗುತ್ತಿರಬಹುದು ಆದರೆ ಇಂದು ಆದಾಯ ತರತಕ್ಕಂಥ ಇಲಾಖೆಗಳಲ್ಲಿಯೂ ಸಹ ಹಣ ಸೋರಿಹೋಗುತ್ತಿದೆ. ಸೇಲ್ಸ್‌ಟ್ಯಾಕ್ಸ್ ಮತ್ತು ಎಕ್ಸೈಜ್ ಇಲಾಖೆಗಳಲ್ಲಿ ಬೇರೆ ಕಡೆಗಳಿಗಿಂತ ಮೂರು ಪಟ್ಟು ಹೆಚ್ಚು ಹಣ ಸೋರಿಹೋಗುತ್ತಿದೆ. ಇಲ್ಲಿ ಕೆಲಸ ಮಾಡುತ್ತಿರುವ ಇನ್ಸ್‌ಪೆಕ್ಟರ್‌ಗಳಿಗೆ ಎಲ್ಲಿ ದುಡ್ಡು ಇಡಬೇಕು ಎಂಬುದೇ ಗೊತ್ತಾಗುತ್ತಿಲ್ಲ ? ಈ ರೀತಿ ಹಣ ಸೋರಿಹೋಗುತ್ತಿರುವುದಕ್ಕೆ ಕಾರಣ ಸರ್ಕಾರದ ಹತೋಟಿ ಇಲ್ಲದಿರುವುದು, ಈ ಕಾರಣದಿಂದ ಬೇಕಾದಷ್ಟು ಹಣ ಮಾಡಿಕೊಂಡು ಅಧಿಕಾರಿಗಳು ಅದಷ್ಟು ಅನುಕೂಲ ಮಾಡಿಕೊಳ್ಳುತ್ತಿದ್ದಾರೆ ಇದರ ಜೊತೆಗೆ ಜನರು ಬೀದಿಗಳಲ್ಲಿ ಏನು ಮಾತನಾಡಿಕೊಳ್ಳುತ್ತಿದ್ದಾರೆ ಎಂದರೆ, ಶ್ರೀಮಾನ್ ಪುಟ್ಟಸ್ವಾಮಿಯವರು ಆಸ್ತಿ ಮಾಡಿಕೊಂಡರು, ಶ್ರೀಮಾನ್ ರಂಗನಾಥ್ ಅವರು ಆಸ್ತಿ ಮಾಡಿಕೊಂಡರು, ರಾಜಕೀಯದಲ್ಲಿರುವುದು ಆಸ್ತಿ ಮಾಡಲಿಕ್ಕೆ ಇಂತಹ ವಾತಾವರಣ ಬೆಳೆಯಲಿಕ್ಕೆ, ಎಂದು ಶ್ರೀಮಾನ್ ಚನ್ನಬಸಪ್ಪನವರ ಮೇಲಿನ ಆಪಾದನೆಯ ಬಗ್ಗೆ ನಾನು ಹೇಳಿದ್ದು. ಅಂದು ತಮ್ಮ ದೇಹ ಪ್ರಕೃತಿ ಚೆನ್ನಾಗಿಲ್ಲದಿದ್ದರಿಂದ ನಾನು ಆ ರೀತಿ ಹೇಳಬೇಕಾಯಿತು. ಆದರೆ ನಾನು ತಪ್ಪನ್ನು ತಪ್ಪು ಎಂದು ಹೇಳುತ್ತೇನೆಯೇ ಹೊರತು, ಯಾರ ದಾಕ್ಷಿಣ್ಯಕ್ಕೂ ಬಲಿ ಬೀಳ ತಕ್ಕವನು ನಾನಲ್ಲ? ಜನರು ಈ ರೀತಿ ಮಾತನಾಡಿಕೊಳ್ಳುವುದಕ್ಕೆ ಕಾರಣ ಅಂತಹ ಒಂದು ವಾತಾವರಣ ಇಂದು ಸೃಷ್ಟಿಯಾಗಿರುವುದು. ದಯಮಾಡಿ ಮಾನ್ಯ ಮಂತ್ರಿಗಳು ಇವರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಬೇಕು. ಏಕೆಂದರೆ ಇದನ್ನು ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಇಂದು ಈ ಸರ್ಕಾರದ ತೇಜೋವಧೆಯಾಗತಕ್ಕಂಥ ಪರಿಸ್ಥಿತಿ ಬಂದಿರುವುದಕ್ಕೆ ಕಾರಣಗಳು ಮೂರು. ಅವು ಯಾವುವು ಎಂದರೆ ಹೆಂಡ, ಹಣ, ಮತ್ತು ಹೆಣ್ಣು. ಈ ಮೂರಕ್ಕೆ ನಾನು ಎಂದೂ ಬಲಿ ಬಿದ್ದಿಲ್ಲ, ಆದರೆ ಸರ್ಕಾರ ಬಿದ್ದಿದೆ ಇದಕ್ಕೆ ಉದಾಹರಣೆಯನ್ನು ಕೊಡ ಬೇಕೆಂದರೆ, ತಾವು ಇಂದು ಒಬ್ಬ ಅಧಿಕಾರಿಯನ್ನು ಸಸ್ಪೆಂಡ್ ಮಾಡುತ್ತೀರಿ, ಎರಡು ದಿನದ ನಂತರ ಮತ್ತೆ ವಾಪಸ್ ಕೆಲಸಕ್ಕೆ ತೆಗೆದುಕೊಳ್ಳುತ್ತೀರಿ. ಇದು ಯಾವ ನ್ಯಾಯ ಎಂದು ಕೇಳುತ್ತೇನೆ? ಸಸ್ಪೆಂಡ್ ಮಾಡಿದ ಮೇಲೆ ಮನೆಗೆ ಕಳಿಸಬೇಕು ಅದು ಬಿಟ್ಟು ಎರಡು ದಿನದ ನಂತರ ಮತ್ತೆ ಕೆಲಸಕ್ಕೆ ವಾಪಸ್ ತೆಗೆದು ಕೊಳ್ಳುವುದಕ್ಕೆ ಹಣದ ಒತ್ತಡವೋ ರಾಜಕೀಯದ ಒತ್ತಡವೋ ನನಗೆ ಗೊತ್ತಿಲ್ಲ ಈ ಬಗ್ಗೆ ನಾನೇನಾದರೂ ಆಪಾದನೆ ಮಾಡಿದರೆ ದೇವೇಗೌಡ ಮನಸ್ಸಿಗೆ ಬಂದ ಹಾಗೆ ಮಾತನಾಡುತ್ತಾನೆ ಎಂದು ಹೇಳುತ್ತೀರಿ. ಆದರೆ ನಾನು ಈ ಬಗ್ಗೆ ಆಧಾರ ಕೊಟ್ಟು ಹೇಳಬಲ್ಲೆ, I am prepared to give the name of the Officer. The Executive Engineer of the B ngalore City Corporation was kept under suspension. On the third day that order was withdrawn. Why ? ಮಾನ್ಯ ಮಂತ್ರಿಗಳು ನಾಳೆ ಉತ್ತರ ಕೊಡುವಾಗ ನಾನು ಪ್ರಸ್ತಾಪ ಮಾಡಿದ ಎಲ್ಲ ಅಂಶಗಳಿಗೂ ಉತ್ತರ ಕೊಡಬೇಕು ಮತ್ತು ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನು ಕೊಟ್ಟು ನಮ್ಮ ವಿಶ್ವಾಸಕ್ಕೆ ಪಾತ್ರರಾಗಬೇಕು. ಹಾಸನದ ಪ್ರಕರಣದ ಬಗ್ಗೆ ಬಿಜಾಪುರದ ಪ್ರಕರಣದ ಬಗ್ಗೆ, ಬೆಂಗಳೂರು ಬಿಲ್ಡಿಂಗ್ ಡಿವಿಜನ್ ಬಗ್ಗೆ ಎಲ್ಲ ಮಾಹಿತಿಗಳನ್ನು ನಾಳೆ ಉತ್ತರ ಕೊಡುವಾಗ ಸಭೆಯ ಮುಂದೆ ಇಡದೆ ಹೋದರೆ ಮತ್ತು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಹೋದರೆ......

ಅಧ್ಯಕ್ಷರು.—ಮಾನ್ಯ ಸದಸ್ಯರು ಆ ರೀತಿ ಹೇಳಿದರೆ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ಈ ಮಾತನ್ನು ಏತಕ್ಕೆ ಹೇಳುತ್ತೇನೆ ಎಂದರೆ, ಹಿಂದೆ ಹಾಸನದ ಪ್ರಕರಣದಲ್ಲಿ ವಿಜಿಲೆನ್ಸ್ ಕಮಿಷನ್ ವರದಿಯನ್ನು ಸಭೆಯ ಮುಂದೆ ಇಡುವುದಕ್ಕೆ ಸಾಧ್ಯವಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದ್ದರು, ಆ ಕಾರಣದಿಂದ ನಾನು ಎಲ್ಲ ಮಾಹಿತಿಯನ್ನು ಕೊಡಬೇಕಾಗುತ್ತದೆ ಎಂದು ಹೇಳುತ್ತಿರುವುದು.

SRI H. M. CHANNABASAPPA.—Why should he presume that I am not going to give all these things. When is it that I have hidden anything from the House? I am not given to that kind of thing.

ಶ್ರೀ ಎಚ್. ಡಿ. ದೇವೇಗೌಡ. ಇಂದು ಬೇನಾಮಿ ವ್ಯವಹಾರಗಳು ಬೇಕಾದಷ್ಟು ನಡೆಯುತ್ತಿವೆ. ಮತ್ತು ಲಕ್ಷಾಂತರ ರೂಪಾಯಿಗಳಷ್ಟು ಹಣ ಲೂಟಿಯಾಗುತ್ತಿದೆ ಈ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರಿ ಮತ್ತು ಇದರ ಬಗ್ಗೆ ಸರ್ಕಾರದ ಧೋರಣೆ ಏನಿದೆ ಎಂಬುದನ್ನು ಸ್ಪಷ್ಟೀಕರಣ ಮಾಡಿ, ಇಲ್ಲದಿದ್ದರೆ ಇದೇ ರೀತಿ ನಡೆದುಕೊಂಡು ಹೋಗುವುದಕ್ಕೆ ಅವಕಾಶ ಕೊಡುತ್ತೇವೆಂದು ಹೇಳಿಬಿಡಿ. ನಾವು ಮಾತನಾಡುವುದನ್ನೇ ಬಿಟ್ಟುಬಿಡುತ್ತೇವೆ. ಗುಲ್ಬರ್ಗ ಪ್ರಕರಣದಲ್ಲಿ ಕಾಂಗ್ರೆಸ್ ಓ ನವರಿಗೆ ೧೫ ಕೋಟಿ ರೂಗಳು ಹೋಗಿವೆ ಎಂದು ಏನು ಹೇಳಲಾಗಿದೆ ಅದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು. ಈ ಬಗ್ಗೆ ಇನ್ನೊಂದು ಸಲ ಒತ್ತಿ ಹೇಳುತ್ತೇನೆ, ಮುಖ್ಯವಾಗಿ ದೇಶದ ಜನರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಕೆಲವು ವಿಷಯಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಪ್ರತಿ ತಾಲ್ಲೂಕಿನಲ್ಲಿಯೂ ೫೦ ಮೈಲಿಗಳಷ್ಟು ಕಮ್ಯುನಿಕೇಷನ್ ರೋಡ್ಸನ್ನು ಮಾಡುತ್ತೇವೆಂದು ಹೇಳಿದರು.

ಸ್ವಾಮಿ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಮೈಲಿ ರಸ್ತೆಯನ್ನು ಮಾಡಿದ್ದಾರೆ ಎಂಬುದನ್ನು ಈ ಸಭೆಗೆ ವಿವರಣೆ ಕೊಡಬೇಕು. ಶ್ರೀಮಾನ್ ಚನ್ನಬಸಪ್ಪನವರ ತಾಲ್ಲೂಕಿನಲ್ಲಿ ಎಷ್ಟು ಆಗಿದೆ, ಹಾಸನಾ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ರಸ್ತೆಯಾಗಿದೆ, ಹಾಗೆಯೇ ೨೧೬ ಅಸೆಂಬ್ಲಿ ಕ್ಷೇತ್ರದಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಮೈಲಿ ರಸ್ತೆಯಾಗಿದೆ ಎನ್ನುವ ವಿವರವನ್ನು ನಾಳೆ ಈ ಸಭೆಗೆ ಕೊಡಬೇಕು. ನನ್ನ ತಾಲ್ಲೂಕಿನಲ್ಲಿ ಗುದ್ದಲಿ ಪೂಜೆಯನ್ನು ಮಾಡಿರುವುದನ್ನು ಬಿಟ್ಟರೆ ಮತ್ತೆ ಏನೇನೂ ಮಾಡಿಲ್ಲ. ಕಳೆದ ವರ್ಷ ಯಾವ ಯಾವ ಪ್ರದೇಶದಲ್ಲಿ ಎಷ್ಟು ರಸ್ತೆಯನ್ನು ಆಸ್‌ಫಾಲ್ಟ್ ಮಾಡಿದ್ದಾರೆ ಎಂಬುದನ್ನು ಹೇಳಬೇಕು.

ಇನ್ನು ಹೊಸದಾಗಿ ಬ್ರಿಡ್ಜಸ್ಸ್ ಕಾರ್ಪೊರೇಷನ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ಒಂದು ಅಡಿಷನಲ್ ಬರ್ಡನ್ ಎಂದು ಹೇಳಬೇಕಾಗಿದೆ. ಒಂದು ಹೊಸ ಮಾರ್ಗದಲ್ಲಿ ಜನಗಳಿಂದ ಹಣವನ್ನು ವಸೂಲು ಮಾಡುವುದಕ್ಕೆ ಹೊರಟಿದ್ದಾರೆ, ಅದಕ್ಕೆ ಏನು ರೂಪರೇಖೆಗಳನ್ನು ಕೊಟ್ಟಿದ್ದಾರೆ ಎಂಬುದನ್ನು ತಿಳಿಸಬೇಕು. ಸರ್‌ಫೇಸ್ ಇಂಪ್ರೂವ್‌ಮೆಂಟ್ ತೆಗೆದುಕೊಂಡರೆ ನಿಲ್ ಎಂದು ಹೇಳಬಹುದು.

ಪವರ್ ಕಾರ್ಪೊರೇಷನ್ ಬಗ್ಗೆ ಹೇಳುವುದಾದರೆ ಕಾಳಿನದಿ ಪ್ರಾಜೆಕ್ಟಿಗೆ ೨೯ ಕೋಟಿ ರೂಪಾಯಿಗಳು ಕೇಂದ್ರದಿಂದ ಬರುತ್ತದೆ ಎಂದು ಮಾನ್ಯ ಹಣಕಾಸಿನ ಸಚಿವರು ಹೇಳಿದ್ದಾರೆ. ಈಗ ಇದಕ್ಕೆ ಎಷ್ಟು ಬಂದಿದೆ ಎಂಬುದನ್ನು ತಿಳಿಸಬೇಕು. ಅದಕ್ಕೋಸ್ಕರ ಅಡ್ಮಿನಿಸ್ಟ್ರೇಟೀವ್ ಮೆಷನರಿ ಮಾಡಿದ್ದಾರೆ. ಎರಡು ವರ್ಷಗಳಿಂದ ಅಲ್ಲಿ ಸಿವಿಲ್ ಚೀಫ್ ಇಂಜನಿಯರ್‌ನ್ನು ಹಾಕಿದ್ದಾರೆ, ಎಲೆಕ್ಟ್ರಿಕಲ್ ಚೀಫ್ ಇಂಜನಿಯರನ್ನು ಹಾಕಿದ್ದಾರೆ. ಎಗ್ಜಿಕ್ಯುಟೀವ್ ಎಂಜನಿಯರುಗಳು, ಸೂಪರಿಟೆಂಡಿಂಗ್ ಇಂಜನಿಯರು ಎಲ್ಲಾ ಅಧಿಕಾರಿ ಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಹಾಕಿದ್ದಾರೆ. ಅವರನ್ನು ಅದಕ್ಕೆ ನೇಮಕ ಮಾಡಿದ್ದಾರೆ. ಆದ್ದರಿಂದ ಕಾಳಿನದಿ ಪ್ರಾಜೆಕ್ಟಿಗೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ ಎಂಬುದನ್ನು ತಿಳಿಸಬೇಕು. ೧೯೭೪–೭೫ನೇ ಸಾಲಿನ ಅಲೋಕೇಷನ್ ಪ್ರಕಾರ ೩½ ಕೋಟಿ ೪ ಕೋಟಿಯ ಮೇಲೆ ಬಂದಿಲ್ಲ ಎಂದು ಗೊತ್ತಾಗಿದೆ. ಕೇಂದ್ರದಿಂದ ಈ ಪ್ರಾಜೆಕ್ಟಿಗೆ ೨೯ ಕೋಟಿ ರೂಪಾಯಿಗಳು ಬರುತ್ತದೆ. ೭೯ನೇ ಇಸವಿಗೆ ಈ ಪ್ರಾಜೆಕ್ಟಿನ ಕೆಲಸವನ್ನು ಮುಗಿಸುತ್ತೇವೆ ಎಂದು ಹೇಳಿದ್ದಾರೆ. ಆ ರೀತಿ ಮುಗಿಸುವುದಕ್ಕೆ ಸಾಧ್ಯವಾಗು ತ್ತದೆಯೋ ಹೇಗೆ ಎಂಬುದನ್ನು ತಿಳಿಸಬೇಕು.

ಮಾನ್ಯ ಮಂತ್ರಿಗಳು ಹುಬ್ಬಳ್ಳಿಯಲ್ಲಿ ಕಾಳಿಯೋಜನೆ ಟೇಕ್ ಅಪ್ ಮತ್ತು ಸಿಮೆಂಟ್ ಫ್ಯಾಕ್ಟರಿ ಅದಕ್ಕೋಸ್ಕರ ಮಂಜೂರಾತಿ ಇದೆಲ್ಲಾ ಹೇಳಿದ್ದಾರೆ. ಅವರ ಪ್ರತಿಯೊಂದು ಭಾಷಣವನ್ನೂ ನಾನು ಕೋಟ್ ಮಾಡುವುದಕ್ಕೆ ಹೋಗುವುದಿಲ್ಲ. ಪಿ.ಎಚ್.ಇ. ಬಗ್ಗೆ ಹೇಳಬೇಕಾಗುತ್ತದೆ. ಈ ಕೆಲಸಗಳು

(ಶ್ರೀ ಹೆಚ್. ಡಿ. ದೇವೇಗೌಡ)

೫ ವರ್ಷ, ೬ ವರ್ಷ ೮ ವರ್ಷಗಳಿಂದ ಹಾಗೆಯೇ ಇವೆ. ಗ್ರಾಮಾಂತರ ಪ್ರದೇಶಗಳವರು ೧೦ ಪರ್ಸೆಂಟ್ ಪಾಪ್ಯುಲರ್ ಕಾಂಟ್ರಿಬ್ಯೂಷನ್ ಕೊಡಬೇಕು ಎಂದು ಮಾಡಿದ್ದಾರೆ. ಇವೊತ್ತು ಯಾವುದೋ ಒಂದು ಕೆಲಸದ ಎಸ್ಟಿಮೇಟ್ ಒಂದು ಲಕ್ಷ ರೂಪಾಯಿಗಳಿರುವುದು ೫ ವರ್ಷಗಳಾದ ಮೇಲೆ ಎಂದರೆ ೫ ವರ್ಷ ಡಿಲೇ ಮಾಡಿದರೆ ಅದು ಒಂದೂವರೆ ಎರಡು ಲಕ್ಷ ರೂಪಾಯಿಗಳಿಗೆ ಹೋಗುತ್ತದೆ. ಆಗ ಮತ್ತೆ ೧೦ ಪರ್ಸೆಂಟ್ ರಿವೈಜ್ ಮಾಡಬೇಕಾಗುತ್ತದೆ. ಯಾವುದೋ ಕಾರಣಕ್ಕೋಸ್ಕರ ತ್ವರಿತವಾಗಿ ಆ ಕೆಲಸಗಳನ್ನು ಮಾಡದೇ ಇರುವ ಪ್ರಯುಕ್ತ ಹಲವಾರು ಗ್ರಾಮಾಂತರ ಪ್ರದೇಶಗಳಲ್ಲಿ ನಿರಪರಾಧಿ ಜನಗಳು ೧೦ ಪರ್ಸೆಂಟ್ ಜಾಸ್ತಿ ಹೊರೆಯನ್ನು ಹೊರಬೇಕಾಗುತ್ತದೆ. ಅದು ಸರಿಯಲ್ಲ. ಇದನ್ನು ಸರ್ಕಾರದವರು ಲಕ್ಷಕ್ಕೆ ತೆಗೆದುಕೊಳ್ಳಬೇಕು. ಒರಿಜಿನಲ್ ಎಸ್ಟಿಮೇಟ್ ಎಷ್ಟಾಗುತ್ತದೆಯೋ ಅಷ್ಟಕ್ಕೆ ಮಾತ್ರ ಗ್ರಾಮಾಂತರ ಪ್ರದೇಶದ ಜನಗಳು ಹೊರೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಯಾವುದೋ ಕಾರಣದಿಂದ ಎಸ್ಟಿಮೇಟ್ ರಿವೈಜ್ ಆದರೆ ಅದರ ಹೊರೆಯನ್ನು ರೈತರ ಮೇಲೆ ಜನತೆಯ ಮೇಲೆ ಹಾಕುವುದಕ್ಕೆ ಹೋಗಬಾರದು. ಈ ನಿರ್ಣಯವನ್ನು ಸರ್ಕಾರದವರು ತೆಗೆದುಕೊಳ್ಳಬೇಕು ಎಂದು ನಾನು ಸೂಚನೆ ಮಾಡುತ್ತೇನೆ.

ಮೈನರ್ ಇರಿಗೇಷನ್ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈ ಮೈನರ್ ಇರಿಗೇಷನ್ನಿಗೆ ಸಂಬಂಧಪಟ್ಟ ಹಾಗೆ ಬಡ್ಜೆಟ್ಟಿನಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಮೂದಿಸಿದ್ದರೋ ಅವುಗಳನ್ನು ಕಳೆದಸಾರಿ ಸ್ಟಾರ್ಟ್ ಮಾಡಿಲ್ಲ. ಅನೇಕ ಕೆಲಸಗಳನ್ನು ನಿಲ್ಲಿಸಿದ್ದಾರೆ ಬಡ್ಜೆಟ್ಟಿಗೆ ಈ ಸಭೆ ಒಪ್ಪಿಗೆ ಕೊಟ್ಟಮೇಲೆ ಎಷ್ಟು ಕೆಲಸಗಳನ್ನು ಪ್ರಾರಂಭ ಮಾಡಬೇಕಾಗಿತ್ತೋ ಅಷ್ಟು ಕೆಲಸಗಳನ್ನು ಪ್ರಾರಂಭ ಮಾಡಿಲ್ಲ. ಹಣ ಇಲ್ಲ ಎಂದು ಹೇಳಿ ಡಿಪಾರ್ಟ್‌ಮೆಂಟಿನ ಸುಪೀರಿಯರ್ ಆಫೀಸರುಗಳಿಗೆ ನಿರ್ದೇಶನ ಕೊಟ್ಟು ಆ ಕೆಲಸಗಳನ್ನು ತಡೆಯಿರಿ ಎಂದು ಹೇಳಿದ್ದಾರೆ. ಆದ್ದರಿಂದ ಈ ಕೆಲಸಗಳನ್ನು ಪ್ರಾರಂಭ ಮಾಡಿಲ್ಲ, ಮೈನರ್ ಇರಿಗೇಷನ್ ಪರಿಸ್ಥಿತಿ ಏನು ಎಂಬುದನ್ನು ತಿಳಿಸಬೇಕು. ಲಿಫ್ಟ್ ಇರಿಗೇಷನ್ನಿಗೆ ಸಂಬಂಧಪಟ್ಟಹಾಗೆ ನನ್ನ ಜಿಲ್ಲೆಯಲ್ಲಿ ೭-೮ ಕೆಲಸಗಳು ನಡೆಯುತ್ತಿವೆ. ಈ ಕೆಲಸಗಳಿಗೆ ಒಂದು ತಿಂಗಳಿಗೆ ೪ ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಆ ಕೆಲಸವನ್ನು ಡಿಪಾರ್ಟ್‌ಮೆಂಟಿನವರು ನಡೆಸುತ್ತಿದ್ದಾರೆ. ೮ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳಿಗೆ ಒಂದು ಸ್ಕೀಮಿಗೆ ಒಂದು ತಿಂಗಳಿಗೆ ೬ ಸಾವಿರ ರೂಪಾಯಿಗಳನ್ನು ಕೊಟ್ಟರೆ ಒಂದು ವರ್ಷಕ್ಕೆ ೭೨ ಸಾವಿರ ರೂಪಾಯಿ ಆಯಿತು. ೮ ಕೆಲಸಗಳಿಗೂ ೮-೧೦ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಇಷ್ಟು ಹಣದಲ್ಲಿ ಆ ೮ ಲಿಫ್ಟ್ ಇರಿಗೇಷನ್ ಕೆಲಸಗಳನ್ನು ಯಾವ ರೀತಿ ಕಂಪ್ಲೀಟ್ ಮಾಡಬೇಕು ? ಪ್ರತಿ ತಿಂಗಳು ೬ ಸಾವಿರ ರೂಪಾಯಿಗಳ ಡಿ.ಸಿ. ಬಿಲ್ಲನ್ನು ಮಾಡಿ ಆ ಕೆಲಸ ಮಾಡತಕ್ಕ ಕೂಲಿಗಾರರಿಗೆ ಪೇಮೆಂಟ್ ಮಾಡುತ್ತಾರೆ. ಎಷ್ಟು ಕೆಲಸ ಮಾಡಿದರೆ ಕೂಲಿಗಾರರು ಇಂಜನಿಯರ್ ಮನೆಯ ಮುಂದೆ ಬಂದು ಕುಳಿತುಕೊಳ್ಳುತ್ತಾರೆ. ಇವರು ಜಾಸ್ತಿ ಹಣವನ್ನು ಕೊಡುವುದಿಲ್ಲ. ಆದ್ದರಿಂದ ಈ ಕೆಲಸಗಳು ಕುಂಠಿತವಾಗಿವೆ. ಇದರಿಂದಾಗಿ ಲಿಫ್ಟ್ ಇರಿಗೇಷನ್ ಕೆಲಸಗಳು ಇವೊತ್ತಿನವರೆಗೂ ಏನೇನೂ ಆಗಿಲ್ಲ. ಇದು ಶ್ರೀಮಾನ್ ನಂಜೇಗೌಡರು ಪ್ರತಿನಿಧಿಸತಕ್ಕ ಜಿಲ್ಲೆ. ದಯಮಾಡಿ ಈ ಲಿಫ್ಟ್ ಇರಿಗೇಷನ್ ಸ್ಕೀಮಿನಲ್ಲಿ ಎಷ್ಟು ಕೆಲಸವನ್ನು ಮಾಡಿದ್ದಾರೆ, ನಿಖರವಾಗಿ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಅಥವಾ ಸಾಧ್ಯವಾಗುವುದಿಲ್ಲವೇ ಎಂಬುದನ್ನು ತಿಳಿಸಬೇಕು. ಡೋಲಾಯಮಾನವಾದ ಪರಿಸ್ಥಿತಿಯಲ್ಲಿ ಹೋಗಬಾರದು.

ಇನ್ನು ಚಿಕ್ಕಹೊಳೆ ಪ್ರಾಜೆಕ್ಟಿನ ದುರಂತಕ್ಕೆ ಸಂಬಂಧಪಟ್ಟಹಾಗೆ ಶ್ರೀಮಾನ್ ಮಾನೆ ಎನ್ನುವವರನ್ನು ಸ್ಪೆಷಲ್ ಎನ್‌ಕ್ವೈರಿ ಮಾಡಬೇಕೆಂದು ನೇಮಕ ಮಾಡಿದ್ದರು. ಆದರ ವರದಿ ಸರ್ಕಾರಕ್ಕೆ ಬಂದಿದೆ ಎಂದು ನಾನು ಕೇಳಿದ್ದೇನೆ. ಆ ಬಗ್ಗೆ ತಪ್ಪಿತಸ್ಥರಾದವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಈ ಸಭೆಯ ಮುಂದೆ ಇಡುವುದಕ್ಕೆ ಏನು ತೊಂದರೆ ? ಅದನ್ನು ಈ ಸಭೆಯ ಮುಂದೆ ಇಡಬೇಕು. ಅದರಲ್ಲಿ ೨½ ಕೋಟಿ ೩ ಕೋಟಿ ರೂಪಾಯಿಗಳ ಅನಾಹುತವಾಗಿ ಸಂಬಂಧಪಟ್ಟ ರೈತರಿಗೆ ಆಗಿರತಕ್ಕ ನಷ್ಟಕ್ಕೆ ಕಾರಣರಾದವರ ಮೇಲೆ ಕ್ರಮ ತೆಗೆದುಕೊಂಡು ಅವರಿಗೆ ಶಿಕ್ಷೆ ವಿಧಿಸುವ ಬಗ್ಗೆ ಸರ್ಕಾರದವರು ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ, ಯಾರ ಮೇಲೆ ಕ್ರಮ ತೆಗೆದುಕೊಂಡು ಶಿಕ್ಷೆಯನ್ನು ವಿಧಿಸಿದ್ದಾರೆ ಎನ್ನತಕ್ಕ ಪೂರ್ಣ ವಿವರಗಳನ್ನು ಕೊಡಬೇಕು. ಮತ್ತೆ ಆ ರಿಪೋರ್ಟನ್ನು ಸಪ್ರೆಸ್ ಮಾಡುವುದಕ್ಕೆ ರಾಜಕೀಯ ಶಕ್ತಿಗಳು ಕೆಲಸ ಮಾಡುತ್ತಿವೆ. ಆದ್ದರಿಂದ ದಯಮಾಡಿ ಅದರ ಪೂರ್ಣ ವಿವರಗಳನ್ನು ಈ ಸಭೆಯ ಮುಂದೆ ಇಡಬೇಕು ಎಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ತಮಿಳುನಾಡಿನಲ್ಲಿ ನಡೆದಂತಹ ಒಂದು ಘಟನೆಯನ್ನು ಇಲ್ಲಿ ಹೇಳಿದರೆ ತಪ್ಪಾಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ತಮಿಳುನಾಡು ಸರ್ಕಾರ ಭ್ರಷ್ಟ ಸರ್ಕಾರ ಅದನ್ನು ತೆಗೆಯಬೇಕು ಎಂದು

ಕಾಂಗ್ರೆಸ್ (ಆರ್) ಮತ್ತು ಕಾಂಗ್ರೆಸ್ (ಒ) ಎರೆಡು ಪಾರ್ಟಿಗಳು ಪ್ರಯತ್ನ ಮಾಡುತ್ತಿದ್ದಾರೆ, ಈ ತಮಿಳುನಾಡಿನಲ್ಲಿ ಕಾರ್ಪೊರೇಷನ್‌ನಲ್ಲಿ ಮಸ ರ್ ರೋಲ್ ಮಾಡಿ ತಪ್ಪು ಮಾಡಿದ್ದಕ್ಕೆ ಸಂಬಂಧಪಟ್ಟ ಇಂಜನಿಯರ್ ಮತ್ತು ಕಾರ್ಪೋರೇಟರಗಳನ್ನು ಆ ಸರ್ಕಾರದವರು ಪ್ರಾಸಿಕ್ಯೂಟ್ ಮಾಡಿದರು. ಇಲ್ಲಿ ತಪ್ಪು ಮಾಡಿರತಕ್ಕ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದರೆ ಡೀಮಾರಲೈಜ್ ಆಗುತ್ತದೆ ಹಾಗೆ ಮಾಡ ಬಾರದು ಎಂದು ಹೇಳುತ್ತಾರೆ ಅವರಿಗೆ ಏನು ಹೇಳಬೇಕೋ ಗೊತ್ತಾಗುವುದಿಲ್ಲ ಇದನ್ನು ಹೇಳುವುದಕ್ಕೆ ನನ್ನ ಮನಸ್ಸಿಗೆ ಎಷ್ಟು ನೋವಾಗುತ್ತದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ: ಸುಳ್ಳು ಬಿಲ್ ಮಾಡಿ ಹಣ ಡ್ರಾ ಮಾಡಿದ ಕಂಟ್ರಾಕ್ಟರಿಂದ ಹಣವನ್ನು ರೆಕವರ್ ಮಾಡುವ ಜೊತೆಗೆ ಅವರನ್ನು ಪ್ರಾಸಿಕ್ಯೂಟ್ ಮಾಡಿ ಜೈಲಿಗೆ ಕಳುಹಿಸುವ ಏರ್ಪಾಟು ಮಾಡಬೇಕು. ಕಂಟ್ರಾಕ್ಟರ್ ರೂಲ್ಸ್ ಅಂಡ್ ರೆಗ್ಯುಲೇಷನ್‌ನಲ್ಲಿ ಈ ರೀತಿ ಒಂದು ಪ್ರಾವಿಜನ್ ಮಾಡಿ ಎಂದು ೧೦ ಸಾರಿ ಹೇಳಿದರೂ ಅದನ್ನು ಮಾಡುವುದಕ್ಕೆ ಇವರು ತಯಾರು ಇಲ್ಲ. ಕಂಟ್ರಾಕ್ಟ್ ಸಿಸ್ಟಂ ತಗೆಯುತ್ತೇವೆ ಎಂದು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ತಂದಿದ್ದಾರೆ. ಅವರು ಏನು ಕೆಲಸ ಮಾಡುತ್ತಿದ್ದಾರೆ ? ನಾರಾಯಣಪುರ ಅಣೆಕಟ್ಟಿನಲ್ಲಿ ಮಾತ್ರ ಈ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಕೆಲಸ ಮಾಡುತ್ತಿದೆ, ಕಾಳಿನದಿಯು ಪ್ರಾಜೆಕ್ಟಿನ ಕೆಲಸವನ್ನು ಈ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ಏತಕ್ಕೆ ವಹಿಸಬಾರದಾಗಿತ್ತು ? ದಯಮಾಡಿ ಅವನ್ನು ತಿಳಿಸಬೇಕು. ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ಇವತ್ತು ಸಾಕಷ್ಟು ಹಣಕಾಸನ್ನು ಒದಗಿಸಿಕೊಟ್ಟು ನಿಮ್ಮದೇ ಆದಂಥ ಸಂಸ್ಥೆ ಏನಿದೆಯೋ ಅದರಲ್ಲಿ ಇವತ್ತು ಕ್ವಾಲಿಟಿ ಮೆಂಟೇನ್ ಮಾಡುವ ದೃಷ್ಟಿಯಿಂದ ಅಲ್ಲಿನ ಕಂಟ್ರಾಕ್ಟರ್ ಯಾರು ಇದ್ದಾರೆಯೋ ಅವರನ್ನು ಬದುಕಿಸುವ ದೃಷ್ಟಿಯಿಂದ ಈ ರೀತಿಯಾಗಿ ಮಾಡಿದ್ದೀರಿ. ಇದರಿಂದೇನು ಪ್ರಯೋಜನ ?

೩—೩೦ ಪಿ. ಎಂ.

ಇನ್ನು ರೈಲ್ವೆಗಳ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ, ಮೊನ್ನೆ ಇಲ್ಲಿಯೇ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ ಇವರು ಈಗಾಗಲೇ ೧೫–೨೦ ರೈಲ್ವೆಗಳನ್ನು ರೆಕಮೆಂಡ್ ಮಾಡಿದ್ದಾರೆ. ಇನ್ನು ಇವರ ಕೈಗೆ ಯಾವುದಾದರೂ ಸಿಕ್ಕಿದ್ದರೆ ಎಲ್ಲವನ್ನೂ ರೆಕಮೆಂಡ್ ಮಾಡುತ್ತಾ ಇದ್ದರು. ಕರ್ನಾಟಕದ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಕೇಂದ್ರದವರಿಗೆ ನಾವು ಯಾವ ಮಾರ್ಗದಿಂದ ಕಣ್ಣು ತೆರೆಸಬೇಕೋ ಗೊತ್ತಾಗಲಿಲ್ಲ. ಮಹಾರಾಷ್ಟ್ರದಿಂದ ಮಿರಾಜ್‌ವರೆಗೆ ಬ್ರಾಡಗೇಜ್ ಇದೆ. ಗುಂತಕಲ್ ವರೆಗೆ ಬ್ರಾಡ್‌ಗೇಜ್ ಇದೆ. ಮೈಸೂರು ಹತ್ತಿರ ಕರ್ನಾಟಕದ ಹತ್ತಿರ ಎಲ್ಲಾ ಕಡೆಯೂ ಬ್ರಾಡಗೇಜ್, ಕರ್ನಾಟಕದೊಳಗೆ ಬೆಂಗಳೂರು–ಮದ್ರಾಸ್ ಒಂದೇ ಒಂದು ಬ್ರಾಡ್‌ಗೇಜ್. ಈ ೨೦ ವರ್ಷಗಳಲ್ಲಿ ಹಾಸನ–ಮಂಗಳೂರು ಮತ್ತು ಬೆಂಗಳೂರು–ಸೇಲಂ ಇವೆರಡು ಲೈನ್ ಮಾತ್ರ ಸ್ಯಾಂಕ್ಷನ್ ಆಗಿರುವುದು ಅಂದಮೇಲೆ ನಾವೇನು ಪಾಪ ಮಾಡಿದ್ದೇವೆ? ಕೇಂದ್ರದವರಿಗೆ ಏನು ಹೇಳಬೇಕೋ ಗೊತ್ತಿಲ್ಲ, ಹಿಂದೆ ಒಂದು ಕಾಂಗ್ರೆಸ್ ಇದ್ದಾಗಲೂ ಇದೇ ಹಣೆಬರಹ, ಈಗ ಒಡೆದ ಕಾಂಗ್ರೆಸ್ ಬಂದರೂ ಇದೇ ಹಣೆಯ ಬರಹವಾಗಿದೆ. ಆದ್ದರಿಂದ ಕೇಂದ್ರ ಸರ್ಕಾರದವರನ್ನು ಯಾವರೀತಿಯಲ್ಲಿ ಕಣ್ಣು ತೆರೆಸಬೇಕೋ ನನಗಂತೂ ಅರ್ಥವಾಗುತ್ತಾ ಇಲ್ಲ ಇಷ್ಟೊಂದು ಅಲಕ್ಷ್ಯಭಾವನೆಯಿಂದ ಕೇಂದ್ರದವರು ನಮ್ಮ ರಾಜ್ಯವನ್ನು ಕಾಣುವುದಾದರೆ, ಬಹುಶ: ನಾನು ಈ ವಿಚಾರದಲ್ಲಿ ಅವರ ಬಗ್ಗೆ ಏನು ಹೇಳಬೇಕೋ ಗೊತ್ತಿಲ್ಲ, ಇದರಿಂದ ನಮ್ಮ ಈ ಕರ್ನಾಟಕದಲ್ಲಿ ರೈಲ್ವೆ ಪ್ರಗತಿ ಸಾಕಷ್ಟು ಆಗಲೇ ಇಲ್ಲ, ಏನೋನೂ ಆಗಿಲ್ಲವೆಂದು ಹೇಳಬಹುದು. ಇದಕ್ಕೆ ನಮ್ಮೆಲ್ಲರ ತೀವ್ರ ಅಸಮಾಧಾನವಿದೆ. ಕೇಂದ್ರ ಸರ್ಕಾರದವರು ನಮ್ಮನ್ನು ಇದರಲ್ಲಿ ಪೂರ್ಣವಾಗಿ ಕೈಬಿಟ್ಟಿದ್ದಾರೆ ಆದ್ದರಿಂದ ಇವತ್ತು ಈ ವಿಚಾರದಲ್ಲಿ ಸರ್ಕಾರದ [illegible] ಸಾಕಷ್ಟು ಹೋರಾಟ ಮಾಡಬೇಕು. ನಿಮಗಾಗಲೀ, ಮಾನ್ಯ ಮುಖ್ಯಮಂತ್ರಿಗಳಿಗಾಗಲೀ, ಅಥವಾ ಇನ್ನು ನಿಮ್ಮಲ್ಲಿ ಯಾರ್ಯಾರಿಗೆ ಏನೇನು ಮಾಡುವುದಕ್ಕೆ ಸಾಧ್ಯವೋ ಅದನ್ನು ಕೂಡಲೇ ಮಾಡಬೇಕು,

ಇನ್ನು ಎಲೆಕ್ಟ್ರಿಸಿಟಿ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ರೂರಲ್ ಎಲೆಕ್ಟ್ರಿಫಿಕೇಷನ್ ಲಿಸ್ಟನ್ನು ಅಪ್ರೂವ್ ಮಾಡಿದ್ದಾರೆ, ಒಂದೊಂದು ಕಂಬವನ್ನೇನೋ ಅಲ್ಲಿ ತಂದುಹಾಕುತ್ತಾರೆ ಅಷ್ಟೆ, ಹಾಸನದಿಂದ ಕೆಲವು ಎಲೆಕ್ಟ್ರಿಕ್ ಪೋಲ್ಸ್‌ನ್ನು ಈಗಾಗಲೇ ಎತ್ತಿಕೊಂಡು ಹೋಗಿಬಿಟ್ಟರು ನೀವು ಇದನ್ನು ಸರಿಯಾಗಿ ಮಾಡುವುದಾದರೆ, ಮಾಡುತ್ತೇವೆಂದು ಹೇಳಿ. ಇಲ್ಲದಿದ್ದರೆ ಆಗುವುದಿಲ್ಲವೆಂದು ಹೇಳಿದರೆ, ನಾವು ಜನ ಗಳಿಗೆ ನೀವು ಹೇಳುವ ಹಾಗೆಯೇ ಹೇಳಿಬಿಡುತ್ತೇವೆ. ಸುಮ್ಮನೆ ಅಲ್ಲಿಗೆ ಮಂಜೂರಾಗಿದೆ, ಇಲ್ಲಿಗೆ ಮಂಜೂರಾಗಿದೆಯೆಂದು ರೈತರಿಗೆ ಹೇಳಿದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಇದು ರೈತರಿಗೆ ಏನು ಗೊತ್ತಾಗುತ್ತದೆ ? ಪಂಪುಸೆಟ್ಟುಗಳಿಗೆ ಎನರ್ಜಿ ಯಾವರೀತಿಯಲ್ಲಿ ಕೊಡುತ್ತೀರಿ ಎಂಬುದನ್ನು ಹೇಳಿಬಿಡಿ. ಅದನ್ನು ಎಲ್ಲೆಲ್ಲಿ ಮಾಡುತ್ತೀರಿ ಎಂಬುದನ್ನಾದರೂ ಹೇಳಿ. ನಾವು ಆ ವಿಚಾರಗಳಿ ಎರಡು ವರ್ಷಗಳವರೆಗೆ ಇಲ್ಲಿ ಮಾತನಾಡುವುದೇ ಇಲ್ಲ. ಇಲ್ಲದಿದ್ದರೆ ಬೆಳಿಗ್ಗೆಯಿಂದ ಸಂಜೆಯ [illegible] ಗೇಕಿಂದ ಬೈಸಿಕೊಳ್ಳಬೇಕಾಗುತ್ತದೆ.

(ಶ್ರೀ ಹೆಚ್. ಡಿ. ದೇವೇಗೌಡ)

ಕೊನೆಯದಾಗಿ ನನ್ನ ಮಾತನ್ನು ಮುಗಿಸುವುದಕ್ಕೆ ಮುಂಚೆ ಪಿಡಬ್ಲ್ಯುಡಿ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನಿಮ್ಮ ಇಲಾಖೆಯ ಬಗ್ಗೆ ನಿಮ್ಮ ಧೋರಣೆ ಏನೆಂಬುದಕ್ಕೆ ನಿಮ್ಮಿಂದ ನಿರ್ದಿಷ್ಟವಾದ ಉತ್ತರ ಬರಬೇಕು. ಯಾವ ಅಧಿಕಾರಿಯ ಮೇಲಾಗಲೀ ಅಥವಾ ಯಾವ ಕಂಟ್ರಾಕ್ಟರ್ ಮೇಲೆಯೇ ಆಗಲಿ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು. ಅಧಿಕಾರಿಗಳನ್ನು ಶಿಕ್ಷೆ ಮಾಡಬೇಕೆಂದಲ್ಲ. ಯಾವರೀತಿಯಲ್ಲಿ ರಾಜಕಾರಣಿಯಾಗಿರುವವನು ಅಧಿಕಾರಿಗಳ ಆಶ್ರಯವನ್ನು ಕಟ್ಟಿಕೊಂಡು ತನ್ನ ಒಂದು ಸ್ವಾರ್ಥಸಾಧನೆ ಮಾಡಿಕೊಳ್ಳಬೇಕೆಂದು ಇರುತ್ತಾನೆಂಬುದನ್ನು ನೋಡಬೇಕು. ಇದು ಈಗ ರಾಜಕಾರಣಿಗಳಲ್ಲಿ ಬಹು ಹೆಚ್ಚಿಗೆ ನಡೆಯುತ್ತಿದೆ. ಅಂದಮೇಲೆ ಇದನ್ನು ಪೊಲಿಟಿಷಿಯನ್ಸ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಎಂಬುದಾಗಿ ಕರೆಯಬೇಕೇ ಏನೋ ಗೊತ್ತಿಲ್ಲ. ಒಬ್ಬ ಪಾರ್ಲಿಮೆಂಟ್ ಮೆಂಬರ್ ನನ್ನ ಬೋನಫೈಡ್ ಪ್ರಶ್ನೆ ಮಾಡುತ್ತಾನೆಂದರೇನು ? ಅದರಲ್ಲಿಯೂ ನಮ್ಮ ಜಿಲ್ಲೆಯ ಪಾರ್ಲಿಮೆಂಟ್ ಸದಸ್ಯರೊಬ್ಬರು ಆ ರೀತಿ ಕೇಳಿದರೆ ಹೇಗೆ ? ಹಾಸನ ಪ್ರಕರಣದಲ್ಲಿ ಯಾರ್‍ಯಾರು ಒಂದಿದ್ದಾರೆಂಬುದು ನನಗೆ ಗೊತ್ತಿದೆ. ಚುನಾಯಿತ ಪ್ರತಿನಿಧಿಗಳು ಕಂಟ್ರಾಕ್ಟರುಗಳಿಂದ ಚೆಕ್ ಮೂಲಕ ಹಣ ಪಡೆದಿರುವುದಕ್ಕೆ, ಚೆಕ್ ನಂಬರ್, ಡೇಟ್ ತಮಗೆ ಒದಗಿಸಿದರೆ, ತಾವು CBI ಮುಖೇನ ವಿಚಾರಣೆ ಮಾಡಿಸುತ್ತೀರಾ? ಅದರ ಆವಶ್ಯಕತೆ ಬಂದಾಗ ಎಲ್ಲವನ್ನೂ ಹೇಳುತ್ತೇನೆ. ದೇವೇಗೌಡರು ಏನಾದರೂ ಅವ್ಯವಹಾರ ಮಾಡಿದ್ದರೆ, ಮಾನ್ಯ ಶ್ರೀ ವೀರೇಂದ್ರ ಪಾಟೀಲರ ಕಾಲದಿಂದಲೂ ವಿಚಾರಮಾಡಲಿ. ನಾನು ಸಿದ್ಧ. ದೇವೇಗೌಡರು ಆಸ್ತಿಮಾಡಿರುವುದನ್ನೂ ಸಹ ವಿಚಾರಮಾಡಲಿ. ನಾನೇನು ಯಾರಿಗೂ ಮಕ್‌ಮಲ್ ಟೋಪಿ ಹಾಕಿಲ್ಲ. ಹಾಗೆ ನಾನೇದರೂ ಮಾಡಿದ್ದರೆ ವಿಚಾರಣೆ ಮಾಡಲಿ. ಸುಮಾರು ಎರಡು ವರ್ಷಗಳಿಂದ ಇವರು ಈ ಅಧಿಕಾರಕ್ಕೆ ಬಂದು ಏನೇನು ಮಾಡಿದ್ದಾರೆಂಬುದನ್ನು ಹೇಳಬೇಕು. ಪಿ ಡಬ್ಲ್ಯುಡಿಯಲ್ಲಿ ಡಿಸಿಪ್ಲಿನ್ ಮೇಂಟೇನ್ ಮಾಡುವ ಬಗ್ಗೆ ನಿಮ್ಮ ಧೋರಣೆ ಏನು, ಇವತ್ತು ನಿಮ್ಮ ಮೇಲೆ ಬಂದಿರತಕ್ಕ ಗುರುತರವಾದ ಆಪಾದನೆಗಳ ಬಗ್ಗೆ ನೀವು ಕ್ಲಿಯರ್‌ಕಟ್ಟಾಗಿ ವಿವರಣೆಯನ್ನು ಕೊಡುವುದಕ್ಕೆ ಸೂಕ್ತ ಪ್ರಯತ್ನಮಾಡದೆ ನಾಳೆ ಆಗತಕ್ಕ ವಿಕೋಪ ಪರಿಸ್ಥಿತಿಗೆ ತಾವು ಖಂಡಿತವಾಗಿ ಅವಕಾಶ ಕೊಡಬಾರದೆಂದು ಹೇಳಿ, ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

The Chairman (Smt. Winnifred F. Fernandes) in the Chair

SRI R. DAYANANDA SAGAR.—(Chamarajapet) Madam Speaker, I have been hearing the speech of the Hon. Leader of Opposition, firstly offered some very constructive suggestions for the Government to improve its administration and secondly, charged the Government with grave allegations. So far as the constructive suggestions are concerned I have very great pleasure indeed to welcome them because some of the suggestions are very constructive. The public works Department is a very big department, a very vast department a spending department, where crores of rupees are being spent all over the State in every district. This being so, this department has to be held with all discipline, authority and efficiency. We have, I am indeed proud, in Sri H. M. Channabasappa, a very able, enterprising, painstaging, hard working, honesty with integrity holding this department not only now but also in the past. This is one reason that we on this side feel prord of it. When the hon. Leader of Opposition suggested that there should be good discipline in the department with unified control I really welcome that suggestion. To-day, what is happening is, the department is cut into several pieces. We have the high-way section, we have minor irrigation section, we have Public Health and Engineering Section, buildings division and so on. In each district these several agencies

belonging to the same department function, not with economy but spending much more money than what was expected and of course with not that efficiency. Therefore I agree with the hon. Leader of Opposition that we have to dispense with the multi-Executive Engineers reigning in each district and that we could have one Executive Engineer assisted by able Assistant Engineers to carry out the different aspects of the department.

Similarly, this port folio is torn into four pieces. being held by four different Ministers, and the discipline being maintained by one or two. This is also a very anomalous position. Rajaji used to call this Department as 'Public enemy number One' This is a department which invites criticism now, before and always. Therefore, it is in the fitness of things that this very important department, on which there are various allegations time and again, is held by an able Minister, assisted, if need be, by some junior Ministers who could hold the different sections of the department. That is not being done so much so discipline is not being enforced.

ಶ್ರೀ ಎಚ್. ಡಿ. ದೇವೇಗೌಡ.—ಬಹುಶ: ಹಿಂದೆ ೧೯೫೯ರಲ್ಲೂ ಏನೋ ಇವರೇ ಮಂತ್ರಿಗಳಾಗಿದ್ದಾಗ ಇವರೊಬ್ಬರೇ ಈ ಇಲಾಖೆಯ ಎಲ್ಲ ಶಾಖೆಗಳ ಆಡಳಿತವನ್ನೂ ನೋಡಿಕೊಳ್ಳುತ್ತಿದ್ದರು. ಆಗ ಇಲಾಖೆಯಲ್ಲಿ ಕೆಲಸಕಾರ್ಯಗಳೆಲ್ಲಾ ಬಹಳ ದಕ್ಷತೆಯಿಂದ ನಡೆಯುತ್ತಿದ್ದವು, ಅಧಿಕಾರಿಗಳು ಮಂತ್ರಿಗಳನ್ನು ಜ್ಞಾಪಿಸಿಕೊಂಡರೆ ರಾತ್ರಿ ನಿದ್ರೆಬರುವುದಿಲ್ಲ ಎಂದು ಹೇಳುತ್ತಿದ್ದ ನಿದರ್ಶನಗಳು ನನಗೆ ಗೊತ್ತಿದೆ. ಆದು ಈ ದಿವಸ ಏಕೆ ಹೀಗಾಗಿದೆ?

SRI R, DAYANANDA SAGAR.—I am happy that the hon. the Leader of the Opposition agrees with me that our Minister Sri H. M. Channabasappa is an able Minister and was capable of handling the full department by himself in 1959. I am sure he will be able to do it now also. There should be a rethinking about this, and it is a correct suggestion, it is a constructive suggestion and it is a suggestion for action. While insisting discipline in the Department the officials who are in charge of spending tens, thousand, lakhs and crores of rupees have to be properly controlled and they can be properly controlled only when there could be deterrent punishment not as the hon. the Leader of the Opposition said that somebody punishing them, somebody else exonerating them, somebody saying good and bad. This way we cannot administer the department, Where we are handling public funds and spending from the Public Exchequer, every one of us, not only the Ministers, but members there and here all of us are responsible to every paise of the people that is being spent, and we want that it should be rightly spent. The hon the leader of the Opposition spoke with all vehemence that no paisa should be wasted he has made very grave charges. If they are true they are all very serious things We on this side, the Congress members, the Congress Party have pledged to the people that we are going to give them a good Government, a clean Government free from all corruption, a progressive Government, and a Government for the

(SRI R, DAYANADA SAGAR)

poor, the oppressed and the suppressed. The money of the Exchequer cannot be wasted. Even if 50 percent of the allegations made by the allegations made by the hon. the Leader of the Opposition are correct, we have got to introspect among ourselves and see whether this Party consists of able, honest and clean administrators, Ministers or not. I am sure the hon. the leader of the opposition will agree with me that this Party will not lag behind, if the calibre be it of the Chief Minister, be it of the P.W.D. Minister or any other Minister is found to be low. This Party has men of integrity and character, and if the allegations made by the hon. the Leader of the Opposition are proved they shall not continue in power, We on this side will not leave any stone unturned in keeping up the purity of the administration in the interest of what promises we have given to the people, in the interest of the policies and programmes we have enunciated and made known to the people at large we have a duty cast on us Madam, I have also heard that in one district something bad has gone on some of the officers, officials or politicians, I do not know who, perhaps the Hon'ble Minister knows and the hon. the Leader of the Opposition knows, but I have only heard that there is something wrong, that bills have been prepared without estimates, that false measurements have been made and payments to the tune of Rs. 30 lakhs or Rs. 40 lakhs have been made without any basis. If that be so, if that is a serious thing. I have also heard that the Hon'ble Minister Sri H. M. Channabasappa has passed orders suspending those responsible. If that is so, I want to ask the Hon'ble Minister who is a Minister of the Party, what has happened to his order? Why is he keeping quiet? is he sitting as a 'Bheema' with a 'gada' when Droupadi is being stripped of her vastra ? What makes him sit there. He has a duty to this House and the public at large to come out and tell us what the matter is. It may be Rs. 30 lakhs or Rs. 40 lakhs or it may Rs. 40 only, it is public money and it is sacred. We are the trustees. The Hon'ble Minister is not only a trustee, but a custodian of the public fund and he is a also answerable to this House. So, I would like to request him that while replying to the allegations of the Hon. the Leader of the opposition he has got to vindicate himself and ourselves and the public at large that this is a Party of integrity which has come out to serve the people. If we fail this time, there is no future for this Party. I, on behalf of the Party, am not prepared to meet that contingency. We on our part have always been doing the best and we have served the people. Therefore, I am sure the Hon'ble Minister and others concerned of my Party will clarify everything to the satisfaction of this House and of the Opposition and of the people at large outside that we have been clean people, we have been giving a good administration and we have been discharging our responsibilities to the common people, Thank you, Madam.

† ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).— ಮಾನ್ಯ ಅಧ್ಯಕ್ಷರೆ, ಏನು ಈ ದಿವಸ ನಮ್ಮ ಲೋಕೋಪಯೋಗಿ ಇಲಾಖೆ ಸಚಿವರು ಬೇಡಿಕೆ ಮಂಡಿಸಿದ್ದಾರೆ ಆ ಎಲ್ಲ ಬೇಡಿಕೆಗಳನ್ನೂ ಕೂಡ ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಬೇಕಾದ್ದು ನಮ್ಮ ಕರ್ತವ್ಯ. ಜ್ಯೋತಿಷ್ಯದ ಪ್ರಕಾರ ಏಳರಾಟದ ಶನಿಕಾಟ ಏಳೂವರೆ ವರ್ಷ ಮಾತ್ರ ಇರುವುದು ಆದರೆ ನಮ್ಮ ಗ್ರಹಚಾರ ವಿಚಿತ್ರವಾಗಿದೆ. ಮಲೆನಾಡಿನವರ ಕಷ್ಟ ಸುಮಾರು ೧೫ ವರ್ಷದಿಂದಲೂ ಕೇಳುವವರೇ ಇಲ್ಲ. ಆ ಪರಿಸ್ಥಿತಿಯಲ್ಲಿ ನಾವಿಂದು ಇದ್ದೇವೆ. ಯಾವ ಮಂತ್ರಿಗಳು ಬಂದರೂ ಸ್ವಾಭಾವಿಕವಾಗಿ ಹಿಂದೆ ಮಾಡಿದನ್ನೇ ಮುಂದುವರೆಸುವರು. ಇವತ್ತು ಬಜೆಟ್ ತಯಾರಿಸಿರುವುದನ್ನು ನೋಡಬಹುದು. ಎಲ್ಲಾ ಕೋಟಿಗಳು ಹೋಗಿ ಲಕ್ಷಕ್ಕೆ ಇಳಿದಿದೆ. ಪುಟ ೧೬ರಲ್ಲಿ ಕಟ್ಟಡ ಮುಂತಾದವುಗಳ ರಿಪೇರಿಯ ಬಗ್ಗೆ ತೊಂಬತ್ತೊಂಬತ್ತೂವರೆ ಲಕ್ಷ ರೂಪಾಯಿಗಳನು ಮಾತ್ರ ಇಡೀ ದೇಶಕ್ಕೆ ಒದಗಿಸಿದ್ದಾರೆ. ರೋಡಿಗೆ ೬೫ ಲಕ್ಷ ಪ್ಲಾನಿನಲ್ಲಿ ಮತ್ತು ನಾನ್‌ಪ್ಲಾನ್ದು ಐದೂವರೆ ಕೋಟಿ ರೂಪಾಯಿ ಒದಗಿಸಿದ್ದಾರೆ ನೋಡಿ ಇನ್‌ವೆಸ್ಟಿಗೇಷನ್ ಮಾಡಿ ಕೆಲಸಮಾಡುವರು, ಈ ಪದ್ಧತಿ ಇದೆ, ಹಿಂದಿದ್ದ ಪದ್ಧತಿಯಲ್ಲಿ ಬದಲಾವಣೆಯಾಗಿಲ್ಲ. ಇದು ಅಭ್ಯಾಸವಾಗಿದೆ. ಸುಮಾರು ೨೫ ವರ್ಷಗಳಿಂದ ಒಳಗೆ ಮತ್ತು ಹೊರಗೆ ಒಂದೇ ರೀತಿಯ ಮಾತನ್ನು ಕೇಳಿದ್ದೇವೆ. ಬಜೆಟ್ಟಿನಲ್ಲಿ ವಿವರ ಕೊಟ್ಟಿದ್ದಾರೆ. ಕ್ಷಾಮ ಪ್ರದೇಶಕ್ಕೆ ವಿವರ ಮುಂತಾದ್ದು ನೋಡಿದರೆ ೬೩ ಕೋಟಿ ರೂಪಾಯಿ ಖರ್ಚುಮಾಡಿದ್ದಾರೆ, ನಿಜ. ಅಭಾವ ಬಂದಾಗ ಕೆಲಸ ಕೊಡಲೇಬೇಕು, ಇಲ್ಲದಿದ್ದರೆ ಸಾಧ್ಯವಿಲ್ಲ, ಜನರಿಗೆ ಕೆಲಸ ಕೊಟ್ಟು ಮಾಡಿಸಿದ್ದಾರೆ. ಪೇಜು ೫೬೧ರಲ್ಲಿ ಜಿಲ್ಲಾ ರಸ್ತೆಗೆ ಸುಮಾರು ೧ ಕೋಟಿ ೨೦ ಲಕ್ಷ ರೂಪಾಯಿ ಟಾರಿಂಗ್ ಬಗ್ಗೆ ಒದಗಿಸಲಾಗಿದೆ. ಇಡೀ ದೇಶಕ್ಕೆ ಸುಮ್ಮನೆ ೫ ಲಕ್ಷ ರೂಪಾಯಿ ಒದಗಿಸಿದೆ. ಜನರಿಗೆ ನಾವು ಈ ತಪಶೀಲನ್ನು ಹೇಳುವುದು ತಪ್ಪು. ಇಡೀ ರಾಜ್ಯಕ್ಕೆ ೫ಲಕ್ಷ ಕೊಡುವುದಾದರೆ ಜನರಿಗೆ ಇದು ತಿಳಿದರೆ ಅವರು ನಮ್ಮನ್ನು ಸುಮ್ಮನೆ ಬಿಡುವುದಿಲ್ಲ. ನಾವು ಜನರು ಕೇಳುವುದಕ್ಕೆ ಉತ್ತರ ಕೊಡಬೇಕಾಗುತ್ತದೆ.

ಮೈನರ್ ಇರಿಗೇಷನ್‌ಗೆ ಇಂದು ಬೇಕಾದಷ್ಟು ಅವಕಾಶವಿದೆ. ೬೧೭ ಮತ್ತು ೬೧೩ನೇ ಪುಟ ನೋಡುವುದಾದರೆ ಶಿವಮೊಗ್ಗ ಸರ್ಕಲಿಗೆ ೧೧ ಲಕ್ಷ ೯೮ ಸಾವಿರ ರೂಪಾಯಿ, ಗುಲ್ಬರ್ಗ ಸರ್ಕಲ್ಲಿಗೆ ೧ ಕೋಟಿ ೧೭ ಲಕ್ಷದ ೧೬ ಸಾವಿರ ಒದಗಿಸಿದ್ದಾರೆ. ಹಾಗಾದರೆ ೬೩ ಕೋಟಿ ಎಲ್ಲಿ ಹೋಯಿತು ? ಎಲ್ಲೆಲ್ಲಿ ಖರ್ಚಾಯಿತು ಎಂಬುದು ಯೋಚನೆ ಮಾಡಬೇಕಾಗಿದೆ. ಪ್ರತಿ ವರ್ಷ ಒದಗಿಸಿದರೂ ಕೆಲಸವಾಗುತ್ತಿಲ್ಲ ಅದೆಲ್ಲಿ ಹೋಗುವುದು ಎಂಬುದನ್ನು ಯೋಚನೆಮಾಡಬೇಕಾಗಿದೆ. ಪುಟ ೬೨೩ ರಿಂದ ೬೪೧ ರವರೆಗೆ ನೋಡಿದರೆ ಬೆಳಗಾಂ ಸರ್ಕಲ್ಲಿಗೆ ೧೭೨ ಕೆಲಸ, ಶಿವಮೊಗ್ಗ ಸರ್ಕಲ್ಲಿಗೆ ೮೫ ಕೆಲಸ ತೋರಿಸಿದೆ. ಇದು ಮೈನರ್ ಇರಿಗೇಷನ್ ಕೆಲಸ. ಆದರೆ ಇದರಿಂದ ಅನುಕೂಲವಾಗುವುದೇ ಎಂದರೆ ಇಲ್ಲ. ಇದೇರೀತಿಯಲ್ಲಿ ಬ್ರಿಡ್ಜ್ ಲ್ಯಾಂಕ್ಸ್‌ಗೆ ೬೪೫ನೆಯ ಪುಟದಲ್ಲಿ ಹಣ ಒದಗಿಸಿದ್ದಾರೆ ೩೫ ಲಕ್ಷದ ೯೬ ಸಾವಿರ ರೂಪಾಯಿಗಳನ್ನು ಕೊಡಲಾಗಿದೆ. ಶಿವಮೊಗ್ಗ ಸರ್ಕಲಿಗೆ ೫ ಲಕ್ಷ ೪೭ ಸಾವಿರ ರೂಪಾಯಿ ಒದಗಿಸಿದೆ. ಆದರೆ ನಮಗೆ ಯಾವರೀತಿಯ ಅನುಕೂಲವೂ ಆಗುತ್ತಿಲ್ಲ. ಪಿಕಪ್ಸ್ ಎಂದು ಒಂದು ಹೆಡಿಂಗ್ ಇದೆ, ಅದರಲ್ಲಿ ಶಿವಮೊಗ್ಗ ಸರ್ಕಲಿಗೆ ೭೭೦೦ ರೂಪಾಯಿ ಇದೆ, ಮಂಗಳೂರು ಸರ್ಕಲಿಗೆ ೧೮ ಲಕ್ಷ ೪೮ ಸಾವಿರ ರೂಪಾಯಿ ಕೊಡಲಾಗಿದೆ. ಸಣ್ಣ ಹಳ್ಳ ಹರಿಯುವ ಕಡೆಗಳಲ್ಲಿ ಪಿಕಪ್ ಹಾಕಲು ಇವನ್ನು ಉಪಯೋಗ ಮಾಡಬೇಕು. ಆದರೆ ಚೀಫ್ ಎಂಜಿನಿಯರಿರುವ ಕಡೆ, ಮಂತ್ರಿಗಳಿರುವ ಕಡೆ, ಮತ್ತೊಬ್ಬ ಚೀಫ್ ಎಂಜಿನಿಯರು ಬಂದರೆ ಅವರಿರುವ ಕಡೆ ಅನುಕೂಲಮಾಡುವರು. ಇದನ್ನು ನೋಡಿ ಆಶ್ಚರ್ಯವಾಗುತ್ತಿದೆ. ಫ್ಲಡ್ ಕಂಟ್ರೋಲ್ ಎಂದು ಹೆಡಿಂಗ್ ಇದೆ. ಇದರ ಕೆಳಗೆ ಮೈಸೂರು ಸರ್ಕಲ್ಲಿಗೆ ೨೦ಲಕ್ಷ ೮೬ ಸಾವಿರ ರೂಪಾಯಿ, ಶಿವಮೊಗ್ಗ ಸರ್ಕಲಿಗೆ ೪ ಲಕ್ಷ ೬೦ ಸಾವಿರ ರೂಪಾಯಿ ಒದಗಿಸಿದ್ದಾರೆ, ನಾನು ಸರ್ಕಲ್ ವಿಚಾರ ಹೇಳುವುದು. ಹೀಗೆ ಯಾವುದೇ ಐಟಂ ತೆಗೆದುಕೊಳ್ಳಿ, ಮಲೆನಾಡನ್ನು ಪೂರ್ಣವಾಗಿ ಕೈಬಿಡುವುದು ಕಂಡುಬರುವುದು ಆದುದರಿಂದ ಇದನ್ನು ಸ್ವಲ್ಪ ವಿಮರ್ಶೆಮಾಡಿ ಮಲೆನಾಡಿಗೆ ಕೊಡಬೇಕಾದ ಹಣ ಕೊಟ್ಟು ಲೋಪವನ್ನು ಸರಿಪಡಿಸುವುದು ಬಹಳ ಅಗತ್ಯವಾಗಿದೆ.

ಇನ್ನು ಜನರಲ್ಲಾಗಿ ಕೆಲವು ವಿಷಯಗಳನ್ನು ಪ್ರಸ್ತಾಪಮಾಡಬೇಕಾಗಿದೆ. ೫ ಲಕ್ಷದಿಂದ ೧೫ ಲಕ್ಷದ ವರೆಗಿನ ಕೆಲಸಕ್ಕೆ ಕೊಟ್ಟರೂ ಮಲೆನಾಡಿಗೆ ಕಡಿಮೆ ಕೊಡುವ ಪದ್ಧತಿ ಇದೆ, ಕೊಟ್ಟರೂ ಕೆಲಸವಾಗುವುದಿಲ್ಲ. ಶಿವಮೊಗ್ಗಕ್ಕೆ ೨ ಲಕ್ಷ ೭೦ ಸಾವಿರ ಕೊಟ್ಟರೆ ಗುಲ್ಬರ್ಗಕ್ಕೆ ೭೫ ಲಕ್ಷ ೨೩ ಸಾವಿರ ಕೊಡುವರು. ೬೩ ಕೋಟಿ ಏನಾಯಿತೋ ಎಂಬ ಹೆದರಿಕೆ ಇದೆ, ಅದರಲ್ಲಿ ೬ ಕೋಟಿ ನಮ್ಮ ಜಿಲ್ಲೆಗೆ ಒಂದು ವರ್ಷ ಕೊಟ್ಟರೆ ಎರಡನೆಯ ವರ್ಷ ಬಹುಶಃ ಆಹಾರದ ಕೊರತೆಯಲ್ಲಿ ಕಾಲು ಭಾಗ ನಿವಾರಣೆಯಾಗುವುದು, ಚಿಕ್ಕಮಗಳೂರು ಜಿಲ್ಲೆಗೆ ಸಾಕಷ್ಟು ಸಹಾಯ ಒದಗುತ್ತಿಲ್ಲ. ಈಗ ಲೆಟರ್ ಆಫ್ ಕ್ರೆಡಿಟ್ ಎಂಬ ಹೊಸ ಸಿಸ್ಟಂ ಜಾರಿಗೆ ಬಂದಿದೆ. ಇಂದು ಲೋಕೋಪಯೋಗಿ ಇಲಾಖೆಯಲ್ಲಿ ಸರಿಯಾಗಿ ಕೆಲಸವಾಗುತ್ತಿಲ್ಲ, ಯಾವುದಾದರೂ ಕೆಲಸವಾಗಬೇಕಾದರೆ ಹಣಕಾಸಿನ ಇಲಾಖೆಗೆ ಹೋಗಬೇಕು, ಅಲ್ಲಿ ಸಂಬಂಧಪಟ್ಟ ಬ್ರಾಂಚಿನವರನ್ನು ಹಿಡಿದು ನಮಗೆ ಅನುಕೂಲವಾಗುವಂತೆ ನೋಟ್ ಹಾಕಿಸಿದರೆ ಸ್ವಲ್ಪ ಒಳ್ಳೆಯದಾಗುವುದು, ಈ ಹೊಸ ಸಿಸ್ಟಂ ಸರಿಯಾಗಿ ಅರ್ಥವಾಗಿಲ್ಲ, ಸುಮಾರು ೨೫ ವರ್ಷಗಳಿಂದಲೂ

(ಶ್ರೀ ಕೆ. ಎನ್. ವೀರಪ್ಪಗೌಡ)

ನಮ್ಮ ಮಲೆನಾಡಿಗೆ ಅನುಕೂಲವಾಗಿಲ್ಲ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು ೬ ತಿಂಗಳು ಮಳೆಗಾಲ ಆಗ ಕೆಲಸಮಾಡುವುದಕ್ಕಾಗುವುದಿಲ್ಲ. ಹೋದ ಸಾರಿ ಜುಲೈ ತಿಂಗಳಿನಲ್ಲಿ ಮೈನರ್ ಇರಿಗೇಷನ್ನಿಗೆ ೩ ಲಕ್ಷ ಕೊಡಲಾಯಿತು, ಅದನ್ನು ಖರ್ಚುಮಾಡುವುವಕ್ಕಾಗಿಲ್ಲ, ಅದನ್ನು ಬೇರೆ ಕೆಲಸಗಳಿಗೆ ಖರ್ಚುಮಾಡುವುದಕ್ಕೆ ಅವಕಾಶವಿಲ್ಲ. ಅದುದರಿಂದ ೩ ಲಕ್ಷ ರೂಪಾಯಿ ಕೊಟ್ಟಿದ್ದು ವಾಪಸು ಬಂತು. ಹಣಕಾಸಿನ ಇಲಾಖೆ ಹೊಸ ಪದ್ಧತಿಯನ್ನು ಜಾರಿಗೆ ತಂದು ಎಲ್ಲವನ್ನೂ ಅದು ಕಂಟ್ರೋಲ್ ಮಾಡುತ್ತಿದೆ. ಯಾವ ಮಂತ್ರಿಗೂ ನೇರವಾಗಿ ಆರ್ಡರು ಮಾಡಿ ಇದನು ಮಾಡಿ ಎಂದು ಹೇಳಲು ಅವಕಾಶವಿಲ್ಲ.

೪-೦೦ ಪಿ. ಎಂ.

ಅವರು ಹೇಳಬೇಕು, ಇವರು ಕೆಲಸ ಮಾಡಬೇಕು. ಒಂದು ತರಹ ಏಜೆನ್ಸಿ ಟೈಪ್ ಇದ್ದ ಹಾಗೆ ಇದೆ. ಹಣಕಾಸು ಇಲಾಖೆ ಇಷ್ಟೊಂದು ಮುಂದೆ ಹೆಜ್ಜೆ ಇಟ್ಟಿರುವುದರಿಂದ ದೇಶ ಆಡಳಿತದ ದೃಷ್ಟಿಯಿಂದ ಸಂಪೂರ್ಣವಾಗಿ ನಿರ್ನಾಮವಾಗುತ್ತದೆ ಎಂದು ಖಡಾಖಂಡಿತವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಬಜೆಟ್ಟಿಗೆ ಮೀರ ಬಾರದು ಎಂದು ಬೇಕಾದರೆ ಹೇಳಬಹುದು, ಅನೇಕ ಸಂದರ್ಭಗಳಲ್ಲಿ ಒಂದು ಡಿವಿಜನ್ನಿಗೆ ಕೊಟ್ಟಿರುವ ಹಣ ಪೂರ್ತಿಯಾಗಿ ಖರ್ಚಾಗಿರುತ್ತದೆ. ಇನ್ನೊಂದು ಕಡೆ ಟೆಂಡರ್ ಕರೆಯುವುದು, ಎಸ್ಟಿಮೇಟ್ ಅಪ್ರೂವ್ ಮಾಡುವುದು ಇತ್ಯಾದಿ ಕಾರಣಗಳಿಂದ ಹಣ ಖರ್ಚಾಗಿರುವುದಿಲ್ಲ. ಮಾರ್ಚಿ ಅಖೈರಿನಲ್ಲಿ ಒಂದು ಡಿವಿಜನ್ನಿನಲ್ಲಿ ಉಳಿದಿರುವ ಹಣವನ್ನು ಮತ್ತೊಂದು ಡಿವಿಜನ್ನಿಗೆ ವರ್ಗಾಯಿಸಿ ಹಣ ಉಳಿಯದಂತೆ ಖರ್ಚು ಮಾಡಿ ಅಜಸ್ಟ್ ಮಾಡಿ ಕೊಳ್ಳುತ್ತಿದ್ದರು. ಕಂಟ್ರಾಕ್ಟರುಗಳು ಕೂಡ ಕೆಲವು ಸಾರಿ ಆ ರೀತಿಯಾಗುತ್ತದೆ ಎನ್ನುವ ನಂಬಿಕೆಯ ಮೇಲೆ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು. ಈ ಹೊತ್ತು ಏನಾಗಿದೆ ಎಂದರೆ ಲೆಟರ್ ಆಫ್ ಕ್ರೆಡಿಟ್ ಸಿಸ್ಟಂ ಬಂದಿರುವುದು, ಪತ್ರಿಕೆಗಳಲ್ಲಿ ಬರುವ ವಿಚಾರಗಳು ಇವನ್ನೆಲ್ಲ ನೋಡಿ ಯಾವ ಕಂಟ್ರಾಕ್ಟರೂ ಹಣ ಬಂದಿದೆಯೋ ಇಲ್ಲವೋ ಎಂದು ಕೇಳಿ ಕೆಲಸ ಪ್ರಾರಂಭ ಹೇಗೆ ಮಾಡುತ್ತಾನೆ. ಹಾಗೆ ಕೆಲಸ ಮಾಡಬೇಕಾದರೆ ಟೆಂಡರ್ ಕರೆಯುವುದು ಇವೆಲ್ಲ ಪ್ರಾರಂಭವಾಗುತ್ತದೆ. ಇದರಿಂದಾಗಿ ಯಾವ ಕೆಲಸವೂ ಕೂಡ ಆಗುವುದಕ್ಕೆ ಅನಾನುಕೂಲವಾಗಿದೆ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಕೆಲಸವಾಗುವುದಕ್ಕೆ ಅವಕಾಶವೇ ಇಲ್ಲದಂತಾಗಿದೆ. ಒಂದೊಂದು ಎಕರೆ ಜಮೀನಿಗೆ ನೀರನ್ನು ಕೊಡಲು ಆರೇಳು ಸಾವಿರ ರೂಪಾಯಿ ಖರ್ಚಾಗತಕ್ಕ ಮೇಜರ್ ಇರಿಗೇಷನ್ ಕೆಲಸಗಳನ್ನು ತೆಗೆದುಕೊಂಡು ಅವುಗಳು ಪೂರ್ತಿ ಆಗುತ್ತಿಲ್ಲ. ಅಲ್ಲಿ ಬೆಟರ್‌ಮೆಂಟ್ ಲೆವಿ ವಸೂಲು ಮತ್ತು ವಾಟರ್ ಟ್ಯಾಕ್ಸ್ ವಸೂಲಿ ಮಾಡಿಲ್ಲ. ನಮಗೆ ಕೊಟ್ಟಿರುವ ವರದಿಯಲ್ಲಿ ಅವರೇ ಹೇಳಿದ್ದಾರೆ, ಸುಮಾರು ೪೬ ಕೋಟಿ ಚಿಲ್ಲರೆ ವೆಚ್ಚದಲ್ಲಿ ೧,೭೭೭ ಕೆಲಸಗಳಾಗಿ ಅದರಿಂದ ೫೧೭ ೨೦೧ ಎಕರೆಗೆ ನೀರಾವರಿಯಾಗುತ್ತದೆಂದು. ಹೀಗೆ ಒಂದು ಎಕರೆಗೆ ೯೫೦ ರೂಪಾಯಿ ಅಥವಾ ಸಾವಿರ ರೂಪಾಯಿ ಖರ್ಚಾಗತಕ್ಕ ಕೆಲಸಗಳಿಗೆ ಹಣವನ್ನು ಒದಗಿಸುತ್ತಿಲ್ಲ. ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಫೌಂಡೇಷನ್ ಹಾಕಿ ಹತ್ತು ಹದಿನೈದು ವರ್ಷದ ತನಕ ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲದೆ ಇರುವುದಕ್ಕೆ ಆರೇಳು ಸಾವಿರ ರೂಪಾಯಿ ಒಂದು ಎಕರೆ ಜಮೀನಿಗೆ ಖರ್ಚಾಗುವುದಕ್ಕೆ ಹಣವನ್ನು ಒದಗಿಸುವುದು, ಕೆಲಸವನ್ನು ತೆಗೆದುಕೊಳ್ಳುತ್ತೇವೆಂದು ಹೇಳುವುದು ಹೀಗಾಗಿದೆ. ಮಾದರಿಗಾಗಿ ಹೇಳುವುದಾದರೆ, ಮಾನ್ಯ ಚನ್ನಬಸಪ್ಪನವರು ಕರೆದುಕೊಂಡು ಹೋಗಿ ತುಂಗಭದ್ರ ಪ್ರಾಜೆಕ್ಟ್ ಆಗಬೇಕೆಂದು ಸ್ವಲ್ಪ ಹೆಚ್ಚಾಗಿ ಮಾತನಾಡಿದರೆ ಅಲ್ಲಿಯೇ ಭರವಸೆಯನ್ನು ಕೊಟ್ಟು ಅದಕ್ಕೆ ಫೌಂಡೇಷನ್ ಸ್ಟೋನ್ ಹಾಕುತ್ತಾರೆ. ಇನ್ನೊಂದು ಕಡೆ ಇದೇ ರೀತಿ ಮಾಡುತ್ತಾರೆ. ನಾವು ಪಬ್ಲಿಕ್ ಅಕೌಂಟ್ಸ್ ಸಮಿತಿಯಲ್ಲಿ ನಮ್ಮ ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ನೋಡಿದ್ದರಲ್ಲಿ ಎಲ್ಲವೂ ಅರ್ಧ ಕ್ಷೌರ ಮಾಡಿದಂತಿವೆ. ಪೂರ್ತಿಯಾಗಿ ಒಂದು ಕೆಲಸವನ್ನು ಮಾಡುವುದಕ್ಕೆ ದುಡ್ಡು ಇಲ್ಲದೆ ಇರುವಾಗ ತೆಗೆದುಕೊಂಡ ಕೆಲಸವನ್ನು ಮಾಡಿ ಮುಗಿಸಿದರೆ ಪ್ರಯೋಜನವಾಗುತ್ತದೆ ಎನ್ನುವುದನ್ನು ಯೋಚನೆ ಮಾಡದೆ ಎಲ್ಲ ಕಡೆಗೂ ಹಣ ಹಾಕುತ್ತಿದ್ದಾರೆ. ಇನ್ನೊಂದು ಕಡೆ ಪ್ರಾಜೆಕ್ಟ್‌ಗಳು ಪೂರ್ತಿಯಾಗಿದ್ದರೂ ಆ ನೀರನ್ನು ಸರಿಯಾಗಿ ಉಪಯೋಗ ಮಾಡುತ್ತಿಲ್ಲ. ಇಂಥ ತಪ್ಪನ್ನು ಹಿಂದೆ ಇದ್ದ ಸರ್ಕಾರ ಮಾತ್ರ ಮಾಡಿಲ್ಲ ಈ ಸರ್ಕಾರವೂ ಮಾಡಿದೆ ಎಂದು ನಾನು ಹೇಳ ಬೇಕಾಗಿರುತ್ತದೆ. ಅನೇಕ ಕಡೆಗಳಲ್ಲಿ ಫೌಂಡೇಷನ್ ಸ್ಟೋನ್ ಹಾಕಿ ಅದನ್ನು ಪೂರ್ತಿ ಮಾಡಲು ಹಣಕಾಸು ಇಲ್ಲದೆ ಹೋದಾಗ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ,

ಕಂಟ್ರಾಕ್ಟರುಗಳ ವಿಷಯದಲ್ಲಿ ಬಹಳ ಸಲ ಹೇಳಿದ್ದೇನೆ. ನಮ್ಮದು ಸಮತಾವಾದದ ರೂಪರೇಖೆಯನ್ನು ಸಂಪೂರ್ಣವಾಗಿ ಜಾರಿಗೆ ಕೊಡತಕ್ಕ ಸರ್ಕಾರ ಎಂದು ಒಪ್ಪಿಕೊಂಡು ಬಂದಿದ್ದೇವೆ. ಕಂಟ್ರಾಕ್ಟರುಗಳಲ್ಲಿ ಲೈಸೆನ್ಸ್ ಪದ್ಧತಿಯನ್ನು ತಂದು ಫಸ್ಟ್ ಕ್ಲಾಸ್, ಸೆಕೆಂಡ್ ಕ್ಲಾಸ್, ಥರ್ಡ್‌ಕ್ಲಾಸ್, ಫೋರ್ತ್ ಕ್ಲಾಸ್

ಎಂದು ಮಾಡಿದ್ದಾರೆ. ಈ ಫೋರ್ತ್ ಕ್ಲಾಸ್ ಕಂಟ್ರಾಕ್ಟರುಗಳೇ ಕೆಲಸ ಮಾಡುವುದು. ಬಾಕಿ ಮೂರು ವರ್ಗದವರೂ ಸೇರಿಕೊಂಡು ನೀನು ಆ ಕೆಲಸಕ್ಕೆ ಹಾಕು, ನಾನು ಈ ಕೆಲಸಕ್ಕೆ ಹಾಕುತ್ತೇನೆ, ಇಷ್ಟಿಷ್ಟು ಪರ್ಸೆಂಟೇಜ್ ಜಾಸ್ತಿ ಹಾಕೋಣ ಎಂದು ಅವರೇ ಟೆಂಡರುಗಳನ್ನು ಹಾಕಿ, ಇನ್ನು ಯಾರದೂ ಟೆಂಡರ್ ಬರಲಿಲ್ಲವೆಂದು ಇಲಾಖೆಯವರು ರೆಕಮೆಂಡ್ ಮಾಡಿ ಅದಕ್ಕೆ ಒಪ್ಪಿಗೆಯನ್ನು ಕೊಡುವುದು. ಅವರು ಎಸ್ಟಿಮೇಟ್ ರೇಟಿಗೆ ೩೩ ಪರ್ಸೆಂಟ್ ಜಾಸ್ತಿ ಕೊಟ್ಟಿರುತ್ತಾರೆ. ಅವರು ಕೆಲಸ ಮಾಡುವ ಕಡೆಗೆ ಕಾರಿನಲ್ಲಿ ಬಂದು ಬಿಲ್ಲಿಗೆ ಸೈನ್ ಹಾಕಿ ದುಡ್ಡು ತೆಗೆದುಕೊಂಡು ಹೋಗುತ್ತಾರೆ ಆದರೆ ಈ ಕೆಲಸವನ್ನು ಮಾಡುವವನು ಕ್ಲಾಸ್ ೪ ಕಂಟ್ರಾಕ್ಟರ್ ಅದೂ ಎಸ್ಟಿಮೇಟ್ ರೇಟಿಗೆ. ದಾಸರ ಹಳ್ಳಿ ಕೆರೆ ಇದೆ, ಅದಕ್ಕೆ ೧೫ ಲಕ್ಷ ರೂಪಾಯಿ ಖರ್ಚಾಯಿತು. ಒಂದು ತೊಟ್ಟು ನೀರೂ ಅವರಲ್ಲಿಲ್ಲ. ಇಂಥ ಕೆಲಸಗಳಾಗುತ್ತಿವೆ. ಎಸ್ಟಿಮೇಟಿಗೆ ಸಾಮಾನ್ಯ ಕಂಟ್ರಾಕ್ಟರುಗಳು ಬಂದು ಕೆಲಸ ಮಾಡುತ್ತಾರೆ. ದೊಡ್ಡ ಕಂಟ್ರಾಕ್ಟರು ಬೆಂಗಳೂರಿನಲ್ಲಿದ್ದು ಏನು ಹೆಚ್ಚು ರೇಟನ್ನು ಹಾಕಿರುತ್ತೇನೆಯೋ ಅದನ್ನು ತೆಗೆದುಕೊಳ್ಳುತ್ತಾನೆ. ಬಿಲ್ಲಿಗೆ ಮತ್ತು ಚೆಕ್ಕಿಗೆ ರುಜು ಮಾಡಿ ತನ್ನ ಪಾಲಿನ ಹಣವನ್ನು ತೆಗೆದುಕೊಂಡು ಬರುತ್ತಾನೆ. ನಮ್ಮ ರಾಜ್ಯದಲ್ಲಿ ಎಸ್ಟಿಮೇಟ್ ರೇಟಿಗೇ ಕೆಲಸಗಳಾಗುತ್ತವೆ. ಒಂದೊಂದು ವೇಳೆ ಐದು ಅಥವಾ ಹತ್ತು ಪರ್ಸೆಂಟ್ ಜಾಸ್ತಿ ಕೊಡಬೇಕಾಗಬಹುದು. ಎಲ್ಲ ದೊಡ್ಡ ದೊಡ್ಡ ಕಂಟ್ರಾಕ್ಟರುಗಳೂ ನಗರಗಳಲ್ಲಿರುವುದು, ಕಾರುಗಳಲ್ಲಿ ಓಡಾಡುವುದು, ಬೆಂಗಳೂರಿನಲ್ಲಿ ಅಂತಸ್ತಿನ ಮೇಲೆ ಅಂತಸ್ತಿನ ಮೇಲೆ ಅಂತಸ್ತು ಮನೆ ಕಟ್ಟುವುದು. ಇದಕ್ಕೆ ಲೈಸೆನ್ಸ್ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ೧೯೬೭ರಿಂದಲೂ ನಾನು ಹೇಳುತ್ತಿದ್ದರೂ ಇದರ ಕಡೆ ಗಮನ ಕೊಟ್ಟಿಲ್ಲ. ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ದಯವಿಟ್ಟು ಈ ಪದ್ಧತಿಯನ್ನು ತೆಗೆದು ಹಾಕಬೇಕು. ಮಾನ್ಯ ಮಂತ್ರಿಗಳು ಈ ಬಗ್ಗೆ ಈಗಲಾದರೂ ಯೋಜನೆ ಮಾಡುತ್ತಾರೆಂದು ನಂಬಿದ್ದೇನೆ.

ಎನ್‌ಕ್ವೈರಿ ಮಾಡುವಾಗ ರೂಲ್ಸ್ ಪ್ರಕಾರವಾಗಿ ಮಾಡಲಾಗುತ್ತದೆಂದು ಬಹಳ ಸುಲಭವಾಗಿ ಹೇಳಬಹುದು. ಈ ಹೊತ್ತು ಯಾರೂ ಕೂಡ ಜಾತಿಯಿಂದ ಹೊರಗೆ ಹೋಗಿಲ್ಲ. ಬಯಲಲ್ಲಿ ಮಾತ್ರ ಜಾತಿ ಭಾವನೆ ಇಲ್ಲ ಎಂದು ಹೇಳಬಹುದು. ನಮ್ಮವರು ಯಾರಿಗಾದರೂ ಕೆಲಸ ಬೇಕಾದರೆ, ಪ್ರಮೋಷನ್ ಬರಬೇಕಾದರೆ ಹೇಳುವುದು ಮಾಮೂಲಾಗಿದೆ, ಆ ರೀತಿ ಮಾಡಿ ಈ ಹೊತ್ತು ೨೦–೨೧ ಜನ ಚೀಫ್ ಇಂಜನಿಯರುಗಳಿದ್ದಾರೆ. ಎಷ್ಟೋ ಜನ ಯಾರು ಯಾರಿಗಾದರೂ ಕೊಟ್ಟರೆ ಸಿಟ್ಟು ಬರುತ್ತದೆ, ಅವರಿಗೆ ಕೊಡದೆ ಇದ್ದರೆ ಆಗುವುದಿಲ್ಲ ಎಂದು ಕೊಡುವುದು, ಈ ರೀತಿ ನಡೆಯುತ್ತದೆ. ಅಕಸ್ಮಾತ್ ಪಬ್ಲಿಕ್ ವರ್ಕ್ಸ್ ಮಂತ್ರಿಗಳ ಹತ್ತಿರ ಪ್ರಮೋಷನ್ನಿಗೆ ಒಂದು ಪ್ರಸಂಗ ಬಂದರೆ, ಇನ್ನು ಯಾರು ಯಾರಿಗೆ ಯಾವ ಕಮ್ಯೂನಿಟಿಗೆ ಸಿಕ್ಕಿಲ್ಲ ಎಂದು ನೋಡಿ ಕೆಲವು ಕಾಲ ನಿಧಾನ ಮಾಡಿ 'ಇನ್ನೂ ಒಂದೆರಡು ಹುದ್ದೆ ಖಾಲಿ ಯಾದಾಗ ಅವರಿಗೂ ಇವರಿಗೂ ಪ್ರಮೋಷನ್ ಕೊಟ್ಟು' ಯಾವ ಯಾವ ಪೋಸ್ಟ್ ಯಾರಿಗೆ ಕೊಡಬೇಕು ಎಂದು ಲೆಕ್ಕ ಹಾಕುವುದು ಈ ರೀತಿ ಮಾಡಿದರೆ ಎಲ್ಲಿಯವರೆಗೆ ನಿಲ್ಲುತ್ತದೆ? ಪ್ರಮೋಷನ್ ವಿಚಾರ ಬಂದಾಗ, ಯಾರಿಂದಲಾದರೂ ಅರ್ಜಿಯನ್ನು ತರಿಸುತ್ತಾರೆ ಕಂಟ್ರಾಕ್ಟರುಗಳಿಂದ ಇಂಥ ಸೂಪರಿಂಟೆಂಡಿಂಗ್ ಇಂಜನಿಯರ್ ಇಂಥ ಕಡೆ ಹೀಗೆ ಮಾಡಿದ್ದಾನೆ, ಇಂಥ ಎಕ್ಸಿಕ್ಯೂಟಿವ್ ಇಂಜನಿಯರ್ ಹಾಗೆ ಮಾಡಿದ್ದಾನೆ ಎಂದು ಬಂದ ಅರ್ಜಿಗಳ ಮೇಲೆ ಪಬ್ಲಿಕ್ ವರ್ಕ್ಸ್ ಮಿನಿಸ್ಟರ್ ಅಥವಾ ಚೀಫ್ ಮಿನಿಸ್ಟರು ಎನ್‌ಕ್ವೈರಿ ಆಗಬೇಕೆಂದು ಬರೆಯುವುದು ಇನ್ನೊಂದು ಕಡೆ ಅರ್ಜಿಗಳನ್ನು ಸುಮ್ಮನೆ ಇಟ್ಟುಬಿಡುವುದು. ಈ ರೀತಿ ತಕರಾರು ಅರ್ಜಿಗಳನ್ನು ತರಲೆ ಅರ್ಜಿಗಳನ್ನು ಬರೆದು ದೂರು ಕೊಡುವುದು ಜಾಸ್ತಿಯಾಗಿದೆ. ಆಂಧ್ರದಲ್ಲಿ ಒಂದು ಪದ್ಧತಿ ಮಾಡಿದ್ದಾರೆಂದು ಕೇಳಿದ್ದೇನೆ ಯಾರಾದರೂ ಆ ರೀತಿ ದೂರು ಕೊಡಬೇಕಾದರೆ ಸ್ವಲ್ಪ ಹಣವನ್ನು ಮೊದಲು ಡಿಪಾಜಿಟ್ ಕಟ್ಟಬೇಕು. ಹಾಗೆ ಮಾಡುವುದರಿಂದ ಸ್ವಲ್ಪಮಟ್ಟಿಗಾದರೂ ಒಳ್ಳೆಯದಾಗಬಹುದು. ಇದನ್ನು ಯೋಚನೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀಮಾನ್ ದೇವೇಗೌಡರು ಎಲ್ಲ ವಿಚಾರಗಳನ್ನೂ ಮಾತನಾಡುತ್ತ ಮಧ್ಯೆ ಒಂದು ಕಡೆ ಡಿಪ್ಲೊಮಾ ಹೋಲ್ಡರ್ಸ್ ವಿಚಾರ ನುಗ್ಗಿಸಿದರು ಈಗಿರುವ ರಾಜಕೀಯ ಏನು ಎಂದರೆ ಡಿಪ್ಲೊಮಾ ಹೋಲ್ಡರ್ಸ್ ವಿಚಾರ ಒಬ್ಬರು ತರುವುದು, ನಾನ್ ಗೆಜೆಟೆಡ್ ನೌಕರರ ವಿಚಾರ ಒಬ್ಬರು ತರುವುದು, ಕ್ಲಾಸ್ ೪ ನೌಕರರ ವಿಚಾರ ಮತ್ತೊಬ್ಬರು ತರುವುದು, ಇನ್ನೊಂದು ಕಡೆ ೫೫ ಕಮಿಟಿಗಳನ್ನು ಮಾಡಿದ್ದು ತರುವುದು. ಆಮೇಲೆ ಅಪಾಯಿಂಟ್ ಮೆಂಟ್ಸ್ ವಿಚಾರ. ಅಪಾಯಿಂಟುಮೆಂಟುಗಳನ್ನು ಮಾಡಬೇಕಾದರೆ ನಮ್ಮ ಪಿ ಡಬ್ಲ್ಯು ಡಿ ಬಡ್ಜೆಟ್ಟಿನಲ್ಲಿ ಏನೂ ಯೋಜನೆ ಮಾಡಬೇಕಾಗಿಲ್ಲವೇ? ಎಷ್ಟು ಜನ ರಿಟೈರಾಗುತ್ತಾರೋ ಅದಕ್ಕನುಗುಣವಾಗಿ ಅಲ್ಲವೇ ನೇಮಕಗಳನ್ನು ಮಾಡಿ ಆ ಸ್ಥಾನಗಳಿಗೆ ನೇಮಿಸುವುದು. ಉದಾಹರಣೆಯಾಗಿ ಒಬ್ಬರು ಚೀಫ್ ಇಂಜನೀಯರ್‌ರವರು ಹೊಸದಾಗಿ ನೇಮಕವಾದಾಗ ಅವರಲ್ಲಿ ಕೇವಲ ೨೫ ಜನರು ಮಾತ್ರ ಅಧಿಕಾರಿಗಳು ಇದ್ದರು ಎಂದು ಹಿಂದೆ ಇದ್ದ ಚೀಫ್ ಇಂಜನೀಯರ್‌ರವರಿಗೆ ನೂರು ಜನ ಅಧಿಕಾರಿಗಳಿದ್ದರೂ ನಾವೇಕೆ ಇನ್ನೂ ೭೫ ಜನರನ್ನು ನೇಮಕ ಮಾಡಬಾರದು ಎಂದು ಅದಕ್ಕೆ ಮಂಜೂರಾತಿ ಪಡೆದು ನೇಮಕ ಮಾಡಿಕೊಳ್ಳುತ್ತಾರೆ. ಇದೇಕೆ ಹೀಗೆ ಮಾಡಬೇಕು? ಇದನ್ನು ಸರಿಮಾಡಬೇಡವೇ?

(ಶ್ರೀ ಕೆ. ಎನ್. ವೀರಪ್ಪಗೌಡ)

ಈಗ ಇರತಕ್ಕ ಬಜೆಟ್ಟಿನಲ್ಲೇ ಲೆಕ್ಕ ಮಾಡಿ ನೋಡಿದರೆ ಈಗ ಕೊಡುತ್ತಿರುವ ವೇಜಸ್ ಸುಮಾರು ಶೇಕಡಾ ನಲವತ್ತೆರಡರಷ್ಟು ಇದೆ. ಇದರ ಬಗ್ಗೆ ಹಿಂದೆ ಕೂಡ ನಾನು ಬೇಕಾದಷ್ಟು ಮಾತನಾಡಿದ್ದೇನೆ. ಇದರ ಬಗ್ಗೆ ಇನ್ನೂ ಹೆಚ್ಚು ಹೇಳಲು ಹೋಗುವುದಿಲ್ಲ. ಇನ್ನು ನಿಮ್ಮ ಹತ್ತಿರ ಇಟ್ಟುಕೊಂಡಿರುವ ಮೋಟಾರು ವಹಿಕಲ್ಸುಗಳಿಗಾಗಿ ಹಾಗೂ ಇವುಗಳ ರಿಪೇರಿಗಾಗಿ ಎಷ್ಟು ಖರ್ಚಾಗಿದೆ ಯಾವ ಯಾವ ಪ್ರಮಾಣದಲ್ಲಿ ಖರ್ಚಾಗುತ್ತಿದೆ ಎಂದು ಯಾರಾದರೂ ಸರಿಯಾಗಿ ಲೆಕ್ಕ ಮಾಡಿದ್ದಾರೆಯೇ ? ಇವೊತ್ತು ಕೆಲವು ಇಲಾಖೆಗಳಿಗೆ ಕೊಟ್ಟಿರುವ ವಾಹನಗಳನ್ನು ನೋಡಿದರೆ 1 ಗ್ಯಾಲನ್ನಿಗೆ ಏಳೆಂಟು ಮೈಲಿಗಳಷ್ಟು ದೂರ ಕೂಡ ಓಡಲಾರದಂತಿವೆ. ಮತ್ತು ಎಲ್ಲೆಲ್ಲಿ ಎಷ್ಟು ವಾಹನಗಳಿವೆ ಹಾಗೂ ಇವುಗಳು ಎಲ್ಲಿ ಓಡಾಡುತ್ತಿವೆ ಎನ್ನುವ ಲೆಕ್ಕವೇನಾದರೂ ಇದೆಯೇ ಎಂದರೆ ಅವು ಕೂಡ ತಿಳಿಯುವಂತಿಲ್ಲ. ಇದು ಹೇಗಿದೆ ಎನ್ನುವುದಕ್ಕೆ ಇಂದು ಪೇಪರಿನಲ್ಲಿ ಒಂದು ವಿಚಾರ ಬಂದಿದೆ. ಯಾವುದೋ ರಾಜ್ಯದಲ್ಲಿರುವ ಪಿಡಬ್ಲ್ಯುಡಿ ಅಧಿಕಾರಿಗಳ ಸೀನಿಯಾರಿಟಿ ಲಿಸ್ಟು ತಯಾರು ಮಾಡುವಾಗ ಅವರಲ್ಲಿ ಸುಮಾರು ಎಪ್ಪತ್ತು ಎಪ್ಪತ್ತೈದು ಜನರ ಹೆಸರುಗಳು ಇದ್ದವಂತೆ. ಅವರು ಎಲ್ಲಿ ಯಾವ ಕಡೆಯಲ್ಲಿ ಕೆಲಸ ಮಾಡುತ್ತಿದ್ದಾರೆಂದು ಆ ಸರಕಾರಕ್ಕೆ ಇದುವರೆಗೆ ಗೊತ್ತಾಗದೆ ಅವರ ಎಲ್ಲ ಹೆಸರುಗಳನ್ನೂ ಈಚೆಗೆ ತೆಗೆಯಲಾಯಿತಂತೆ. ಹಾಗೆ ನಮ್ಮ ಈ ಇಲಾಖೆಯಲ್ಲಿರುವ ವಾಹನಗಳ ಸಂಖ್ಯೆ ಇತಿ ಮಿತಿಯಿಲ್ಲದೆ ಇದ್ದರೂ ಇವುಗಳು ಎಲ್ಲಿ ಕೆಲಸ ಮಾಡುತ್ತಿವೆ ಮತ್ತು ಎಷ್ಟು ವಾಹನಗಳು ಇವೆ ಎನ್ನುವುದನ್ನು ಯಾರಾದರೂ ತನಿಖೆ ಮಾಡಿದ್ದಾರೆಯೇ ಎಂದರೆ ಯಾವುದೂ ಕಾಣುತ್ತಿಲ್ಲ. ನಮ್ಮ ಕರ್ಣಾಟಕ ರಾಜ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಆರ್‌ಸಿ ರೋಡುಗಳಿಗಾಗಿ ಸುಮಾರು ಆರು ಲಕ್ಷ ರೂಪಾಯಿಗಳು ಪೇಮೆಂಟು ಆಗಬೇಕು. ತಾವೇನೋ ಇಲ್ಲಿ ಗೋ ಎಹೆಡ್ ಎಂದು ಹೇಳಿದಂತೆ ನಾವು ಕೂಡ ನಮ್ಮ ಕ್ಷೇತ್ರಕ್ಕೆ ಹೋಗಿ ಭಾಷಣ ಮಾಡಿ ಇದರ ಕೆಲಸಗಳನ್ನು ಬೇಗನೆ ಮಾಡಿ ಎಂದು ಮಾಡಿಸಿದ್ದರೂ ಇದುವರೆಗೆ ಇವರಿಗೆ ಪೆಮೆಂಟು ಆಗದೇ ಇದ್ದರೆ ಅವರು ಹೇಗೆ ತಾನೇ ಬದುಕಬೇಕು. ಇವರಿಗೆ ನಿಮ್ಮ ಕೈಯಲ್ಲಿ ದುಡ್ಡು ಕೊಡುವುದಕ್ಕೆ ಆಗಲಿಲ್ಲ. ಇನ್ನೂ ಸುಮಾರು 33 ಕೋಟಿ ಬಾಕಿ ಇದೆ. ಇದರಲ್ಲಿ ಕಂಟ್ರಾಕ್ಟರುಗಳ ದಾಕ್ಷಿಣ್ಯವೂ ಕೂಡ ಇರುತ್ತದೆ. ಹೀಗೆ ಇವರನ್ನೆಲ್ಲ ನೀವು ಸರಿಯಾಗಿ ಕಂಟ್ರೋಲು ಮಾಡದೇ ಹೋದರೆ ಇವರ ಲೆಕ್ಕವೇ ಸುಮಾರು ನೂರು ಕೋಟಿಯವರೆಗೆ ಬರಬಹುದೇನೋ ? ನಿಮ್ಮ ಡಿಪಾರ್ಟುಮೆಂಟಿನ ಮೇಲೆ ನೀವು ಸರಿಯಾದ ಹತೋಟಿ ಇಟ್ಟುಕೊಂಡು ಎಷ್ಟು ವಾಹನಗಳಿವೆ ಮತ್ತು ಎಷ್ಟು ಹೊಸದಾಗಿ ಖರೀದಿ ಮಾಡಿದ್ದಾರೆ ಮತ್ತು ಇವುಗಳು ಎಲ್ಲೆಲ್ಲಿ ಕೆಲಸ ಮಾಡುತ್ತಿವೆ ಇದರಲ್ಲಿ ಕರ್ಣಾಟಕ ರಾಜ್ಯದಲ್ಲಿ ಎಷ್ಟು ವಾಹನಗಳು ಓಡಾಡುತ್ತಿವೆ ಮತ್ತು ಎಷ್ಟು ವಾಹನಗಳಿಗೆ ರಿಪೇರಿ ಮಾಡಲಾಗಿದೆ ಇವನ್ನೆಲ್ಲಾ ತರಿಸಿಕೊಂಡು ನಮ್ಮ ಸರಕಾರ ಇದಕ್ಕೆ ಸರಿಯಾದ ಒಂದು ರೆಮಿಡಿಯನ್ನು ಕಂಡುಹಿಡಿಯ ಬೇಕೆಂದು ಸಲಹೆ ಮಾಡುತ್ತೇನೆ. ನಮ್ಮ ಸರಕಾರದಲ್ಲಿ ಇಂದು ಹಳ್ಳಿಯ ಒಂದು ರಸ್ತೆ ಮಾಡಲು ದುಡ್ಡಿಲ್ಲ, ಒಂದು ಕುಡಿಯುವ ನೀರಿನ ಬಾವಿ ಮಾಡಿಕೊಡಲು ದುಡ್ಡಿಲ್ಲ. ಹೀಗಿರುವಾಗ ರಸ್ತೆಗಳಿಗಾಗಿ ಕೊಟ್ಟಿರುವುದು ಕೇವಲ ಒಂಬತ್ತು ಕೋಟಿ ರೂಪಾಯಿ ಮಾತ್ರ,

ಇನ್ನು ನಮ್ಮ ಲೆಜಿಸ್ಲೇಟರ್ಸ್ ಹೋಂ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಈಚೆಗೆ ಇದು ಮಾನ್ಯ ಶ್ರೀ ಚನ್ನಬಸಪ್ಪನವರ ವಶಕ್ಕೆ ಬಂದಿರುವುದರಿಂದ ಇಲ್ಲಿ ಇದನ್ನು ಹೇಳಬೇಕಾಗಿದೆ. ಇಲ್ಲಿನ ಖರ್ಚನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ, ಇಲ್ಲಿ ಒಬ್ಬೊಬ್ಬ ಮೆಂಬರಿಗೂ ಎರಡು ಮೂರು ಜವಾನರು ಒಂದೊಂದು ರೂಮಿಗೂ ದಾಮಾಷಾ ಇರುತ್ತಾರೆ. ಮತ್ತು ಇರುವ ರೂಂಗಳಿಗೆ ಹೊಸದಾಗಿ ಹಾಕಿರುವ ಕಾರ್ಪೆಟ್ಸ್‌ಗಳು ಹಾಗೂ ಕಿಟಿಕಿಗೆ ಹಾಕಿರುವ ಬಣ್ಣದ ಬಟ್ಟೆ ಇವುಗಳಿಗಾಗಿ ಎಷ್ಟು ಖರ್ಚು ಇವನ್ನು ನೋಡಬಹುದು. ನಮಗೆ ಇಷ್ಟು ದೊಡ್ಡ ಖರ್ಚೇನೂ ಬೇಕಾಗಿರಲಿಲ್ಲ. ಇದಕ್ಕಾಗಿ ಈಗಾಗಲೇ ಎಷ್ಟು ಲಕ್ಷ ಖರ್ಚಾಗಿದೆಯೋ ಗೊತ್ತಾಗಲಿಲ್ಲ. ಇದಕ್ಕೆ ಲೆಜಿಸ್ಲೇಟರ್ಸ್ ಹೋಂನ ಮೇಂಟೆನೆನ್ಸ್ ಲಿಸ್ಟನ್ನು ತರಿಸಿಕೊಂಡು ನೋಡಿದರೆ ಇವರ ಖರ್ಚುಗಳು ತಿಳಿಯಬಹುದು. ಇದರಲ್ಲಿ ನಮ್ಮಂತಹ ಎಂ ಎಲ್ ಎ ಗಳ ಹೆಸರು ತೆಗೆದುಕೊಂಡು ಸುಮಾರು ಹತ್ತು ಸಾವಿರದವರೆಗೆ ಎಂದು ಮಾಡುವುದು ಬೇಡ. ನಮಗೆ ನಡೆಯಲು ಅಭ್ಯಾಸವಿದೆ. ಬೇಕಾದರೆ ನಾವು ಹೋಟಲುಗಳಿಗೆ ಹೋಗಿ ಊಟ ಮಾಡಿಕೊಂಡು ಬರುತ್ತೇವೆ. ಅಂತೂ ಲೆಜಿಸ್ಲೇಟರ್ಸ್ ಹೋಂನಲ್ಲಿ ಸುಮಾರು ಮೂರು ಲಕ್ಷದಷ್ಟು ಲುಕ್ಸಾನು ಆಯಿತು ಎನ್ನುವ ಮಾತುಗಳು ಬರುವುದು ಬೇಡ. ಯಾರು ಯಾರು ಇಲ್ಲಿಯೇ ಸುಖವಾಗಿ ಬಾಳಬೇಕು ಎಂದು ಬರುತ್ತಾರೋ ಅಂತಹವರಿಗೆ ಬೇಕಾದರೆ ಹೊಸದಾಗಿ ಒಂದು ಮನೆ ಅವರಿಗೆ ಕಟ್ಟಿ ಅವರಿಗೆ ಒಬ್ಬ ಅಡಿಗೆಯವರನ್ನೂ ಒದಗಿಸಿಕೊಡಿ. ಆದರೆ ಪಿ ಡಬ್ಲ್ಯು ಡಿ ಸ್ಕೀಂನಲ್ಲಿ ಸಣ್ಣ ಕೆಲಸ ಮಾಡಿ ಜಾಸ್ತಿ ಮಾಡುವುದು ಬೇಡ. ಇದು ಮಾನ್ಯ ಮಂತ್ರಿಗಳ ಗಮನಕ್ಕೆ ಇನ್ನೂ ಬಂದಿಲ್ಲದಿರಬಹುದು. ಒಟ್ಟಿನಲ್ಲಿ ಇಂತಹ ದೊಡ್ಡ ಲೆಜಿಸ್ಲೇಟರು ಹೋಂ ಇರುವುದಕ್ಕೆ ಬದಲಾಗಿ ಒಂದು ಹೋಟೆಲು ಇದ್ದರೆ ಅದೇ ಒಳ್ಳೆಯದು ಎಂದು ನಮಗೆ ತೋರುತ್ತೆ. ಇದರ ಬಗ್ಗೆ ಪಿ ಡಬ್ಲ್ಯು ಡಿ ಇಲಾಖೆಯವರ ಸರಿಯಾದ ಕಂಟ್ರೋಲು ಇಲ್ಲ

ಇದಕ್ಕೆ ಬದಲು ನಮ್ಮ ಮಾನ್ಯ ಮಂತ್ರಿಗಳೇ ಹಿಂದೆ ೮೫೦೦ ಕಿಲೋಮೀಟರು ರಸ್ತೆಗಳನ್ನು ಪ್ರತಿಹಳ್ಳಿಯಲ್ಲಿಯೂ ಮಾಡುತ್ತೇನೆಂದು ಹೇಳಿಕೆ ಕೊಟ್ಟಿದ್ದರು. ಆ ರೀತಿಯಾದರೂ ಮಾಡಿದ್ದರೆ ನಾವು ಪಡೆದಿರುವ ಸಾಲಗಳಿಗೆ ಬಡ್ಡಿಯಾದರೂ ಬರುತ್ತಿತ್ತು. ಇದಕ್ಕೆ ಹಣ ಪಡೆಯಲು ಮಾನ್ಯ ಫೈನಾನ್ಸ್ ಮಿನಿಸ್ಟರವರ ಜೊತೆ ಮಾತಾಡಿ ಸ್ಥಲ ಮಟ್ಟಿಗೆ ಇಂತಹ ರಸ್ತೆ ಕೆಲಸಗಳು ಬೇಗ ಆಗಲು ಅವಕಾಶ ಮಾಡಿಕೊಡಿ ಎಂದು ಹೇಳುತ್ತೇನೆ ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ಹೆಚ್ಚು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧ ಮಾಡುತ್ತಾ ಕೆಲವು ಮಾತುಗಳನ್ನಾಡಲು ಇಚ್ಛೆಪಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಸ್ಪಷ್ಟವಾಗಿ ಹಾಗೂ ಜವಾಬುದಾರಿಯುತವಾಗಿ ತಮ್ಮ ಭಾಷಣದಲ್ಲಿ ಗುರುತರವಾದ ಅಪಾದನೆಗಳನ್ನು ಸರಕಾರದ ಮೇಲೆ ಮಾಡಿದ್ದಾರೆ. ಹಾಸನದ ಬಗ್ಗೆ ನಡೆದಿರುವಂತ ಪ್ರಕರಣಗಳು, ಬಿಜಾಪುರ ಭಾಗದಲ್ಲಿ ನಡೆದಿರುವ ಪ್ರಕರಣಗಳು ಹಾಗೂ ಹಿಂದೆ ಒಂದು ಸಾರಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಬರಗಾಲದಲ್ಲಿ ಖರ್ಚು ಮಾಡಿರುವ ೧೫ ಕೋಟಿ ರೂಪಾಯಿಗಳ ವಿಚಾರವನ್ನೂ ಹಾಗೂ ಇನ್ನೂ ಅನೇಕ ವಿಧವಾದ ಅಪಾದನೆಗಳನ್ನು ಸರಕಾರದ ಮೇಲೆ ಮಾಡಿದ್ದಾರೆ. ನಾನು ಆ ವಿಷಯಗಳ ಬಗ್ಗೆ ವಿಮರ್ಶೆ ಮಾಡಲು ಇಚ್ಛೆ ಪಡುವುದಿಲ್ಲ. ಆದರೆ ಒಂದೆರಡು ಅಂಶಗಳನ್ನು ಹಾಸನದ ಬಗ್ಗೆ ಇಲ್ಲಿ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ. ಯಾವ ಎಸ್ಟಿಮೇಟುಗಳೂ ಇಲ್ಲದೆ ಯಾವ ಸ್ಯಾಂಕ್ಷನ್ನೂ ಇಲ್ಲದೆ ಹಣವನ್ನು ಇಲ್ಲಿ ಹೇಗೆ ಕೊಟ್ಟರು ? ಉದಾಹರಣೆಗಾಗಿ ಸುಮಾರು ೮೦೦ ಚಿಲ್ಲರೆ ರೂಪಾಯಿನ ಕೆಲಸ ಎನ್ನುತ್ತಾರೆ. ಇದರ ಅಂಕ ಅಂಶಗಳು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಇವೆಲ್ಲಾ ಹಾಸನದ ಕರ್ಮಕಾಂಡದಲ್ಲಿ ಬರುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಹಿಂದೆ ಕೂಡ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ತಪ್ಪನ್ನು ತಿಳಿಸಬೇಕಾದ್ದು ವಿರೋಧ ಪಕ್ಷದ ಕರ್ತವ್ಯ ಅದರಂತೆ ಅವರು ತಮ್ಮ ಕರ್ತವ್ಯವನ್ನು ಮಾಡಿದ್ದಾರೆ. ೮೦೦ ರೂಪಾಯಿಗಳ ಒಂದು ಸಣ್ಣ ಕಾಮಗಾರಿ ಎಂದು ಹೆಸರಿನಲ್ಲಿದ್ದರೆ ಇದಕ್ಕೆ ಸುಮಾರು ೬೦೦೦ ದಿಂದ ೮೦೦೦ ದವರೆಗೂ ಕೊಟ್ಟುಬಿಟ್ಟಿದ್ದಾರೆ. ಹೀಗೆ ಆರು ಸಾವಿರದ ಇನ್ನೊಂದು ಕೆಲಸಕ್ಕೆ ಅಂದಾಜಿಲ್ಲದೆ ಸುಮಾರು ೨೦– ಸಾವಿರದವರೆಗೆ ಕೊಟ್ಟುಬಿಟ್ಟಿದ್ದಾರೆ. ಇಂತಹ ನೂರಾರು ಪ್ರಕರಣಗಳಿವೆ.

ಶ್ರೀ ಹೆಚ್. ಡಿ. ದೇವೇಗೌಡ.—ಇಂತಹ ಕೆಲಸಗಳು ಹತ್ತಲ್ಲ, ಇಪ್ಪತ್ತು ಕೆಲಸಗಳಲ್ಲ. ಯಾವುದಕ್ಕೂ ಇದರಲ್ಲಿ ಸ್ಯಾಂಕ್ಷನ್ ಇಲ್ಲ ಪಿ ಡಬ್ಲ್ಯು ಡಿ ಕೋಡ್‌ನಲ್ಲಿ ಕೂಡ ಇಲ್ಲದೇ ಇರುವಂತಹ ಕೆಲಸಗಳಿಗಾಗಿ ಸುಮಾರು ೨೦ ಲಕ್ಷದವರೆಗೆ ಕೊಡಲಾಗಿದೆ. ಇದಕ್ಕೆ ಯಾವ ರೇಟುಗಳೂ ಇಲ್ಲ. ಇದರ ಬಗ್ಗೆ ದೊಡ್ಡ ಕಥೆಯೇ ಇದೆ. ಇವನ್ನೆಲ್ಲಾ ನಾನು ರಾಜಕೀಯ ಮಾಡುತ್ತೇನೆಂದು ನನ್ನ ಮೇಲೆ ಬಿದ್ದು ಬಿಟ್ಟರು. ಆ ಕ್ಷೇತ್ರದ ಪಾರ್ಲಿಮೆಂಟು ಮೆಂಬರು ಇದರ ಬಗ್ಗೆ ಬೇಕಾದ ಹಾಗೆ ಹೇಳಿದರು. ಇದರ ಹಿನ್ನೆಲೆ ಕೂಡ ಬೇರೆ ಇದೆ.

ಶ್ರೀ ಎಸ್. ಬಂಗಾರಪ್ಪ .—ಮಾನ್ಯ ಅಧ್ಯಕ್ಷರೆ, ಇದು ಬಹಳ ಗುರುತರವಾದಂಥ ಆಪಾದನೆ. ಇತ ತಕ್ಕ ಸತ್ಯ ಸಂಗತಿ ಹೌದು ಎಂದು ನಮಗೆ ನಂಬಿಕೆ ಬಂದುಬಿಟ್ಟಿದೆ. ಮಾನ್ಯ ಸಚಿವರಾದ ಶ್ರೀ ಎಚ್.ಎಂ. ಚನ್ನಬಸಪ್ಪನವರ ಬಗ್ಗೆ ಒಂದು ನಂಬಿಕೆ ಇಟ್ಟುಕೊಂಡಿದ್ದೆವು. ಹಾಸನ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ದೇವೇಗೌಡರಿಂದ ಮತ್ತು ಇನ್ನೂ ಅನೇಕ ಮಾನ್ಯ ಸದಸ್ಯರಿಂದ ಅಪಾದನೆ ಏನು ಬಂತು, ಅದು ಬಗ್ಗೆ ತನಿಖೆ ಮಾಡಿರಬಹುದು.

ಶ್ರೀ ಹೆಚ್. ಡಿ. ದೇವೇಗೌಡ .- ಕೇರಳದಿಂದ ಒಬ್ಬ ಮಂತ್ರವಾದಿಯನ್ನು ಕರೆಸಿ, ಹಾಸನದಲ್ಲಿ ಮನೆ ಮಾಡಿ, ಚನ್ನಬಸಪ್ಪನವರು ಮತ್ತು ದೇವೇಗೌಡರು ಇಬ್ಬರೂ ಹೋಗಬೇಕು ಎಂದು ಮಾಯಾ ಮಂತ್ರ ಎಲ್ಲಾ ನಡೆಸಿದ್ದಾರೆ.

ಶ್ರೀ ಎಸ್. ಬಂಗಾರಪ್ಪ .—ಅಲ್ಲಿರತಕ್ಕ ಶ್ರೀ ಕೆ. ಎಚ್ ಪಾಟೀಲರ ಫಾರೆಸ್ಟ್ ಲಾಡ್ಜಿನಲ್ಲಿ ಸಂಬಂಧಪಟ್ಟ ಪ್ರಮುಖ ಜನರೆಲ್ಲಾ ಬರೀ ಮಾಯಾ ಮಂತ್ರ ಮಾಡಿಸುವುದಕೋಸ್ಕರ ಸೇರಿದ್ದರು ಎನ್ನುವ ಅಂಶವನ್ನು ನಾನು ನಂಬತಕ್ಕವನಲ್ಲ. ಅದೂ ಕೂಡ ಒಂದು ವಿಷಯ ಇತ್ತು. ರಾತ್ರಿ ಬಹಳ ಹೊತ್ತಿನವರೆಗೆ ಆ ಫಾರೆಸ್ಟ್ ಲಾಡ್ಜ್‌ನಲ್ಲಿ ಎಲ್ಲರೂ ಸೇರಿ, ಹಾಸನ ಪ್ರಕರಣದಲ್ಲಿ ಏನೇನು ವಿಷಯಗಳು ಹೊರಬಿದ್ದಿವೆ, ಅವುಗಳನ್ನು ಹೇಗೆ ಮುಚ್ಚಿ ಹಾಕಬೇಕು, ಯಾರು ಯಾರನ್ನು ಹಿಡಿಯಬೇಕು, ಇದಕ್ಕೆ ಎಷ್ಟೆಷ್ಟು ಲಕ್ಷ ರೂಪಾಯಿಗಳನ್ನು they must set apart for this purpose to meet the exigencies ....ಮುಂತಾದ ವಿಷಯಗಳು ಚರ್ಚೆಯಾಗಿದ್ದುವು. ಎ ಕ್ಲಾಸ್, ಬಿ ಕ್ಲಾಸ್ ಮತ್ತು ಸಿ

ಕ್ಲಾಸ್ ಕಂಟ್ರಾಕ್ಟರುಗಳು ಹೇಗೆ ಸರಿಪಡಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಲಕ್ಷಾಂತರ ರೂಪಾಯಿಗಳನ್ನು ಜೋಡಿಸಿದ್ದರು ಮತ್ತು ಮಾತುಕತೆ ನಡೆದಿದೆ. ಯಾರು ಯಾರನ್ನು ತೆಗೆಯಬೇಕೋ ಅವರನ್ನು ತೆಗೆಯುವುದಕ್ಕೆ ಮಾಯಾ ಮಂತ್ರವನ್ನು ಕೂಡ ಮಾಡುವುದಕ್ಕೆ ಕೇರಳದಿಂದ ಒಬ್ಬ ಮಂತ್ರವಾದಿಯನ್ನು ಕರೆಸಿದ್ದು ನಿಜ. ಇವರ ಬಗ್ಗೆ ವಿಪುಲವಾಗಿ ಚರ್ಚೆ ಮಾಡಿ ತೀರ್ಮಾನಕ್ಕೆ ಬಂದು ಮಾಟವನ್ನು ಕೂಡ ಮಾಡಿಸಿದರು. ಇದಾದಮೇಲೆ ಏನಾಯಿತು ಎಂಬುದರ ಕಡೆಗೆ ನಾನು ಹೋಗುವುದಿಲ್ಲ

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ರುದ್ರಪ್ಪನವರಿಗೆ ಈ ವಿಷಯ ಗೊತ್ತಿದೆ; ಅವರು ಹೇಳುವುದಿಲ್ಲ.

ಶ್ರೀ ಬಿ ಪುಟ್ಟಸ್ವಾಮಯ್ಯ.—ಗುರುತರವಾದ ಆಪಾದನೆಯನ್ನು ನಮ್ಮ ಸ್ನೇಹಿತರು ಸರಕಾರದ ಮೇಲೆ ಹೊರಿಸಿದ್ದಾರೆ. ಇದನ್ನು ಬೇಜವಾಬ್ದಾರಿಯಿಂದ ಹೇಳುತ್ತಾ ಇಲ್ಲ. ಸಿ.ಐ.ಡಿ. ಇಲಾಖೆ ಇದೆ, ಪೋಲೀಸ್ ಇಲಾಖೆ ಇದೆ, ರಾಜ್ಯದ ಮುಖ್ಯ ಮಂತ್ರಿಗಳು ಈ ಖಾತೆಯನ್ನು ವಹಿಸಿಕೊಂಡಿದ್ದಾರೆ, ಈ ಖಾತೆಯ ಡಿಮ್ಯಾಂಡ್ ಬಂದಾಗ, ಈ ವಿಷಯದ ಬಗ್ಗೆ ದಯಮಾಡಿ ವಿವರಣೆ ಕೊಡಬೇಕು. ಮಾಯಾ ಮಂತ್ರ ಮಾಡಿ ನಮ್ಮವರನ್ನು ತೆಗೆದು ಹಾಕಬೇಕೆಂದು ಮಾಡಿದ್ದೀರಿ. ಇದರಲ್ಲಿ ವಿರೋಧ ಪಕ್ಷದ ನಾಯಕರ ಪ್ರಾಣದ ಪ್ರಶ್ನೆ ಇದೆ, ಮಾನ್ಯ ಮಂತ್ರಿಯೊಬ್ಬರ ಪ್ರಾಣದ ಪ್ರಶ್ನೆ ಇದೆ, ಬಂಗಾರಪ್ಪನವರ ಪ್ರಾಣದ ಪ್ರಶ್ನೆ ಇದೆ, ಜಿ.ಬಿ. ಪುಟ್ಟಸ್ವಾಮಯ್ಯ ಪ್ರಾಣದ ಪ್ರಶ್ನೆಯೂ ಇದೆ. ಇದನ್ನೆಲ್ಲಾ ತಾವು ತೀವ್ರವಾಗಿ ಯೋಚನೆ ಮಾಡಬೇಕು. ಮಾನ್ಯ ಅಧ್ಯಕ್ಷ ಯವರು ಈ ಬಗ್ಗೆ ಸರಕಾರಕ್ಕೆ ಸ್ಪಷ್ಟವಾಗಿ ಸೂಚನೆ ಕೊಡಬೇಕು.

ಶ್ರೀ ಎಸ್ ಬಂಗಾರಪ್ಪ.—ಹಾಸನ ಪ್ರಕರಣದ ಅನೇಕ ವಿಷಯಗಳಿಗೆ ನಾನು ಹೋಗುವುದಿಲ್ಲ. ಮಾನ್ಯ ಚನ್ನಬಸಪ್ಪನವರನ್ನು ಈ ವಿಷಯವಾಗಿ ನಾನು ಅಭಿನಂದಿಸುತ್ತೇನೆ ಬೇರೆ ವಿಷಯಗಳಿಗೆ ತಮ್ಮನ್ನು ತರಾಟೆಗೆ ತೆಗೆದುಕೊಳ್ಳುವ ಸಂದರ್ಭ ಬಂದಾಗ ತೆಗೆದುಕೊಳ್ಳುತ್ತೇನೆ. ಈ ವಿಷಯದಲ್ಲಿ ಆಪಾದನೆಗಳನ್ನು ವಿರೋಧ ಪಕ್ಷದವರೇ ಮಾಡಿರಲಿ, ಆಡಳಿತ ಪಕ್ಷಕ್ಕೇ ಸೇರಿದವರೇ ಮಾಡಿರಲಿ, ಲಕ್ಷಗಟ್ಟಲೆ ಹಣ ದುರುಪಯೋಗವಾಗಿದೆ ಮತ್ತು ಅನ್ಯಾಯಗಳು ನಡೆದಿವೆ ಎಂದು ಆಪಾದನೆ ಬಂದಾಗ ವಿಚಾರಣೆಗೋಸ್ಕರ ವಿಜಿಲೆನ್ಸ್‌ಗೆ ವಹಿಸಿ, ಅವರಿಂದ ಒಂದು ವರದಿಯನ್ನು ತರಿಸಿಕೊಂಡಿದ್ದೀರಿ ಎಂಬ ವಿಷಯ ಗೊತ್ತಾಗಿದೆ. ನಾನು, ಇವತ್ತು ನೇರವಾಗಿ ಅಧ್ಯಕ್ಷರ ಮೂಲಕ ತಮಗೆ ಪ್ರಶ್ನೆ ಮಾಡುತ್ತೇನೆ. ಜಾಗೃತಿ ಆಯೋಗದವರು ಯಾವ ವರದಿಯನ್ನು ಸರಕಾರಕ್ಕೆ ಕೊಟ್ಟಿದ್ದಾರೆ ? ಯಾವಾಗ ಕೊಟ್ಟಿದ್ದಾರೆ ? ತಾವು ಅದರ ಮೇಲೆ ಇಷ್ಟು ದಿವಸ ಸುಮ್ಮನೆ ಇದ್ದುದು ಏತಕ್ಕಾಗಿ ? ಇದರ ಬಗ್ಗೆ ಯಾವ ಕಾರ‍್ಯಕ್ರಮ ತೆಗೆದುಕೊಂಡಿದ್ದೀರಿ ? ಎನ್ನುವ ವಿಷಯಕ್ಕೆ ಸ್ಪಷ್ಟವಾದ ಉತ್ತರವನ್ನು ನಾಳೆ ನಾನು ನಿರೀಕ್ಷಣೆ ಮಾಡುತ್ತೇನೆ. ನಾನು ಆಯೋಗವನ್ನು ನೇಮಕ ಮಾಡಿದ್ದೇವೆ ಎಂದು ಹೇಳುವ ನಿಮ್ಮ ಪ್ರವೃತ್ತಿಯನ್ನು ನಾವು ಇನ್ನು ಸಹಿಸುವುದಕ್ಕಾಗುವುದಿಲ್ಲ. ಈ ಹಗರಣ ಹಾಸನ, ಬಿಜಾಪುರ ಮತ್ತು ಡ್ರಾಟ್ ಏರಿಯಾಗಳಲ್ಲಿ ಮತ್ತು ಹಲವಾರು ಇತರ ಕಡೆಗಳಲ್ಲಿ ಏನು ನಡೆದಿದೆ ಅವು ಬೆಳಕಿಗೆ ಬರಬೇಕು. ತಾವು ಗಟ್ಟಿಮುಟ್ಟಿನ ಮಾನ್ಯ ಮಂತ್ರಿಗಳೆಂದು ಅನೇಕ ಜನ ಹೇಳಿದ್ದಾರೆ, ನಾನೂ ಕೂಡ ಅಪ್ಪಿತಪ್ಪಿ ಹೇಳಿದ್ದೆ, ತಾವು ಸಸ್ಪೆನ್‌ಷನ್ ಮಾಡತಕ್ಕ ಆಫೀಸರುಗಳನ್ನು ಕೂಡಲೇ ಕೆಲಸಕ್ಕೆ ವಾಪಸು ತೆಗೆದುಕೊಂಡಿರತಕ್ಕದ್ದನ್ನು ನೋಡಿದರೆ ತಾವು ಗಟ್ಟಿಮುಟ್ಟಿನ ಮಂತ್ರಿಗಳಲ್ಲ ಎಂದು ನಾನು ಸ್ಪಷ್ಟಪಡಿಸಬೇಕಾಗಿದೆ. ಹಾಸನ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ. ಲೋಕೋಪಯೋಗಿ ಇಲಾಖೆಯಲ್ಲಿ ಎಕ್ಸಿಕ್ಯೂಟೀವ್ ಇಂಜನಿಯರ್, ಸೂಪರಿನ್‌ಟೆಂಡೆಂಟಿಂಗ್ ಇಂಜನಿಯರ್, ಜೂನಿಯರ್ ಇಂಜನಿಯರ್‌ಗಳನ್ನು ಏತಕ್ಕೆ ಸಸ್ಪೆನ್‌ಷನ್‌ನಲ್ಲಿ ಇಟ್ಟಿಲ್ಲ ? ಇದೇ ರೀತಿ ಬಿಜಾಪುರ ಮತ್ತು ಕಬಿನಿ ಸಂಬಂಧದಲ್ಲಿ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ? ಮಾನ್ಯ ಮಂತ್ರಿಗಳಾಗಿದ್ದ ಶ್ರೀ ನಂಜೇಗೌಡರು ಒಂದೆ ಕೃಷ್ಣಾ ಪ್ರಕರಣದ ಬಗ್ಗೆ ಹೇಳಿಕೆ ಕೊಡುತ್ತಾ excess payment to the tune of rupees 34 lakhs ಆಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇವನ್ನು ವಿಚಾರಣೆ ಮಾಡಿ, ಯಾವ ಉಗ್ರವಾದ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಹೇಳಬೇಕು. ನಾನು ಇಲ್ಲಿ ಇನ್ನೊಂದು ಮಾತನ್ನು ಈ ಇಲಾಖೆ ಬಗ್ಗೆ ಹೇಳುತ್ತೇನೆ. ಅದೇನೆಂದರೆ, ೧೯೭೨ರ ಚುನಾವಣೆ ಆದ ಮೇಲೆ, ತಾವು ಒಂದು ಹೊಸ ಆಡಳಿತವನ್ನು ಕೊಡುತ್ತೇವೆ ಎನ್ನುವ ದೃಷ್ಟಿಯಿಂದ ಅನೇಕ ಚೀಫ್ ಇಂಜನಿಯರುಗಳನ್ನು, ಪ್ರಾಮುಖ್ಯವಾಗಿ ಇಂಜನಿಯರ್-ಇನ್-ಚೀಫ್ ಎಂದು ಮಾಡಿದ್ದೀರಿ. ಇದನ್ನು ಯಾವ ಉದ್ದೇಶಕ್ಕಾಗಿ ಮಾಡಿದ್ದು ? ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಬೆಳವಣಿಗೆಯಾಗಿದೆ, ಏನು ಅಭಿವೃದ್ಧಿಯಾಗಿದೆ ಎನ್ನುವ ಅಂಶಗಳನ್ನು ದಯಮಾಡಿ ತಿಳಿಸುತ್ತೀರೆಂಬ ನಂಬಿಕೆ ನಾನು ಇಟ್ಟುಕೊಂಡಿದ್ದೇನೆ. ಇಲ್ಲಿ ಇನ್ನೊಂದು ಅಂಶವನ್ನು ಪ್ರಾಮುಖ್ಯವಾಗಿ ಪ್ರಸ್ತಾಪ ಮಾಡಬೇಕಾಗಿದೆ. ಹಿಂದೆ, ೧೯೭೨ರ ಚುನಾವಣೆ ಕಳೆದ ಕೂಡಲೇ ಶರಾವತಿ ಕರ್ಮಕಾಂಡದ ಬಗ್ಗೆ ಪತ್ರಿಕೆಗಳಲ್ಲಿ ಸತತವಾಗಿ ಹೇಳಿಕೆಗಳು ಬಂದವು. ಇದಕ್ಕೆ ರಾಜ್ಯದ ಮಾಜಿ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲರಿಂದ ಉತ್ತರಗಳು ಬಂದವು.

ಎಷ್ಟು ಕೋಟಿ ರೂಪಾಯಿ ಲುಕ್ಸಾನು ಆಗಿದೆ, ಇದಕ್ಕೆ ವೀರೇಂದ್ರ ಪಾಟೀಲರಕ್ಷೊಣೆ, ಅವ ಗಳಾದ ಶ್ರೀ ನಿಜಲಿಂಗಪ್ಪನವರ ಸರಕಾರ ಹೊಣೆ ಎಂದು ಹೇಳಿಕೆ ಕೊಟ್ಟಾಗ, ಅಶೀಘ್ರವಾಗಿ ಕಾರ್ಯಗಳನ್ನು ತೆಗೆದು ಕೊಳ್ಳುತ್ತಾರೆ, ಶರಾವತಿ ಕರ್ಮಕಾಂಡದ ಬಗ್ಗೆ ಎಲ್ಲಾ ಬಿಚ್ಚಿ ಇಡುತ್ತಾರೆಂದು ತಿಳಿದುಕೊಂಡಿದ್ದೆವು. ಎಷ್ಟು ರಭಸದಿಂದ ಹೇಳಿಕೆಗಳು ಬಂದುವು, ಅಷ್ಟೇ ರಭಸದಿಂದ ಯಾ ಒಂದು ಕಾರ್ಯಕ್ರಮ ವನ್ನೂ ಕೂಡ ಹಾಕಿಕೊಳ್ಳಲಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ.

4-30 P. M

(MADAM SPEAEKER IN THE CHAIR)

ಇಲ್ಲದೇ ಹೋದರೆ ಹೇಳಿಕೆ ಕೊಡುವುದಕ್ಕೆ ಹೋಗಬಾರದು. ಶರಾವತಿ ಕರ್ಮಕಾಂಡದ ಬಗ್ಗೆ ಏತಕ್ಕೆ ಹೇಳಿಕೆ ಕೊಟ್ಟರಿ ? ಜವಾಬ್ದಾರಿ ಸ್ಥಾನದಲ್ಲಿ ಇದ್ದಮೇಲೆ ಹೇಳಿಕೆ ಪುಷ್ಟೀಕರಿಸುವ ಕಾರ್ಯಕ್ರಮ ಏತಕ್ಕೆ ತೆಗೆದುಕೊಳ್ಳಲಿಲ್ಲ ಎಂದು ಅಧ್ಯಕ್ಷರ ಮೂಲಕ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಚೆಪಡುತ್ತೇನೆ. ವೀರೇಂದ್ರ ಪಾಟೀಲರ ಸರ್ಕಾರ ತಪ್ಪು ಮಾಡಿದರೆ ಏನು ಕಾನೂನು ಪ್ರಕಾರ ಕ್ರಮ ತೆಗುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬಹುದಿತು. ತಮ್ಮ ಸರ್ಕಾರದ ಮೇಲೆ ಕೂಡ ಅವರು ಅಪಾದನೆ ಮಾಡಿದ್ದಾರೆ, ಅದಕ್ಕೆ ತಾವು ಕೂಡ ಹೊಣೆಯಾಗುತ್ತೀರೆಂದು ಹೇಳುವುದಕ್ಕೆ ಇಚ್ಚೆಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಎರಡು ಹಾಸ್ಟಲುಗಳ ವಿಷಯದಲ್ಲಿ ಒಂದು ದೊಡ್ಡ ಕರ್ಮಕಾಂಡ ನಡೆದು ಹೋಗಿದೆ. ಈ ಎರಡು ಹಾಸ್ಟಲಿನಲ್ಲಿ ಸಿಮೆಂಟ್ ಮತ್ತು ಕಬ್ಬಿಣ ಕಳುವಾದ ಅಪಾದನೆಗಳು ಇದ್ದು ಜಾಗ್ರತ ಆಯೋಗದವರು ತನಿಖೆ ಮಾಡುತ್ತಿದ್ದರು. ಈ ವಿಷಯದ ಬಗ್ಗೆ ವರದಿ ಏತಕ್ಕೆ ಬರಲಿಲ್ಲ ಎಂದು ವಿರೋಧ ಪಕ್ಷದ ನಾಯಕರು ಕೇಳಿದ್ದಾರೆ. ಆದ್ದರಿಂದ ಆ ವಿಷಯ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು —ನನ್ನೆ ದಿವಸ ವರದಿ ತಯಾರಾಗಿದೆ, ಮುಖ್ಯ ಮಂತ್ರಿಗಳು ಬಂದಮೇಲೆ ವರದಿ ಇಡುತ್ತಾರೆ ಎಂದು ಮಂತ್ರಿಗಳು ಹೇಳಿದರು.

ಶ್ರೀ ಬಿ. ಪುಟ್ಟಸ್ವಾಮಯ್ಯ .—ರಾಜ್ಯದಲ್ಲಿ ಮುಖ್ಯ ಮಂತ್ರಿಗಳಿಗೆ ಒಂದು ಸ್ಥಾನ ಇದೆ. ಸಭೆ ಯಲ್ಲಿ ಬಹಳ ಗುರುತರವಾದ ಅಂಶ ಚರ್ಚೆ ಆಗುತ್ತ ಇರುವಾಗ ಅವರು ಸಭೆಯಲ್ಲಿ ಇರುವ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು .—ಇವೊತ್ತು ಪಿ. ಡಬ್ಲ್ಯು. ಡಿ. ಡಿಮ್ಯಾಂಡ್ ಇದೆ, ಪಿ ಡಬ್ಲ್ಯು. ಡಿ. ಮಂತ್ರಿಗಳು ಸಹ ಇದ್ದಾರೆ.

ಶ್ರೀ ಎಸ್. ಬಂಗಾರಪ್ಪ .—ಜಾಗ್ರತಾ ಆಯೋಗದವರು ವರದಿಯನ್ನು ಸದನದ ಮುಂದೆ ಇಟ್ಟಾಗ ಚರ್ಚೆ ಮಾಡೋಣ. ನನಗೆ ತಿಳಿದು ಬಂದಿರತಕ್ಕ ಕೆಲವಾರು ಅಂಶಗಳು ಇವೆ. ಇದರಲ್ಲಿ Design for these two buildings have been approved during the month of May 1973. ೧೯೭೩ರ ಜೂನ್ ತಿಂಗಳಿನಲ್ಲಿ ಎಸ್ಟಿಮೇಟ್ ಸ್ಯಾಂಕ್ಷನ್ ಆಗಿದೆ. ಜುಲೈ ತಿಂಗಳಿನಲ್ಲಿ ಕಂಟ್ರಾಕ್ಟರನ್ನು ಫಿಕ್ಸ್ ಮಾಡಿದ್ದಾರೆ.

ಅಧ್ಯಕ್ಷರು .—ಮುಖ್ಯಮಂತ್ರಿಗಳು ಇವೊತ್ತು ವರದಿಯನ್ನು ಇಡಬೇಕಾಗಿತ್ತು, I will read out the telegram sent by Sri Konandur Lingappa and Kagodu Thimmappa. It is like this.

" I request you to postpone the statement about the misuse of Cement and Steel relating to SC/ST hostel buildings for two days" ಈ ಟೆಲಿಗ್ರಾಂ ನನಗೂ ಬಂದಿದೆ, ಮತ್ತು ಚೀಫ್ ಮಿನಿಸ್ಟರ್ ಕಡೆಗೂ ಹೋಗಿದೆ.

ಶ್ರೀ ಹೆಚ್. ಡಿ. ದೇವೇಗೌಡ .—ನಾಳೆ ಪಿ. ಡಬ್ಲ್ಯು. ಡಿ. ಮಂತ್ರಿಗಳು ರಿಪ್ಲೈ ಮಾಡಬೇಕಾಗುತ್ತದೆ. He cannot be guided by that telegram.

ಅಧ್ಯಕ್ಷರು .—ನಾಳೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ, ನನ್ನದು ಏನೂ ಅಡ್ಡಿ ಇಲ್ಲ.

SRI H. M. CHANNABASAPPA.—Whether the Hon. Member comes not I am going to reply.

ಶ್ರೀ ಎಸ್. ಬಂಗಾಪ್ಪ.—೧೯೭೩ನೇ ಇಸವಿ ಜುಲೈ ತಿಂಗಳ ಮೊದಲ ವಾರದಲ್ಲಿ ಕಂಟ್ರಾಕ್ಟರ್ ಫಿಕ್ಸ್ ಆಗಿರುವುದು but, unfortunately much earlier to this when there was no sanction of estimate or the approval of the design. On 30th March 1973 purchase indent has been issued by the Assistant Engineer. Not only he gave that indent on that day, but he acknowledged on the same day for having taken delivary of the steel indented. ಎಸ್ಟಿಮೇಟ್ ಸ್ಯಾಂಕ್ಷನ್ ಆಗಿಲ್ಲ, ಡಿಸೈನ್ ಅಪ್ರೂವ್ ಆಗಿಲ್ಲ ಅಷ್ಟೊತ್ತಿಗೇ ಪರ್ಚೇಸ್ ಇಂಡೆಂಟ್ ಹಾಕಿ ೩೦ನೇ ತಾರೀಖು ಅಕ್‌ನಾಲೆಡ್ಜ್‌ಮೆಂಟ್ ತೆಗೆದುಕೊಂಡಿದ್ದಾರೆ. Then they have delivered the material to the concerned Officer. Purchases has been done on 31st March. ನಮ್ಮ ಪ್ರಶ್ನೆ ಇಷ್ಟು How could a person take delivery of the materials when no such purchase was there? ಹೇಗೆ ಡೆಲಿವರಿ ತೆಗೆದುಕೊಳ್ಳುವುದು? ಅಕ್‌ನಾಲೆಡ್ಜ್‌ಮೆಂಟ್ ಮಾರ್ಚಿ ೩೦ನೇ ತಾರೀಖಿಗೆ ಹೇಗೆ ಬಂತು? How could any body indent when there is no sanctioned plan & estimates or designs? ಏನು, ಏನು, ಪ್ರೊಸೀಜರ್ ಇದೆ all that has to be gone into. ಎಲ್ಲಾ ಪ್ರೊಸೀಜರ್ ಆದಮೇಲೆ ಇಂಡೆಂಟ್ ಮಾಡಬೇಕಾಗಿತ್ತು. ಹೇಗೆ ಇಂಡೆಂಟ್ ಮಾಡಿದರು ಎನ್ನುವ ಪ್ರಶ್ನೆ ಇಲ್ಲಿ ಇದೆ. ಇದು ಎಲ್ಲಾ ಆದನಂತರ ಅವರವರಲ್ಲೇ ಅನುಮಾನ ಬಂದು ಗಲಾಟೆಯಾಗಿ again the same Assistant Engineer has put up a returning indent on 13—4—1973. ೩೦ನೇ ಮಾರ್ಚಿ ದುಡ್ಡು ಕೊಟ್ಟು ಪರ್ಚೇಸ್ ಇಂಡೆಂಟ್ ಹಾಕಿ ಮತ್ತೆ ೧೩—೪—೧೯೭೩ರಂದು ರಿಟರ್ನಿಂಗ್ ಇಂಡೆಂಟ್ ಹಾಕಿದ್ದಾರೆ. ಒಂದು ವೇಳೆ ಕೆಲಸಕ್ಕೆ ಆ ಮೆಟೀರಿಯಲ್ ಬೇಕಾಗಿದ್ದರೆ ೧೩—೪—೧೯೭೩ರಲ್ಲಿ ರಿಟರ್ನಿಂಗ್ ಇಂಡೆಂಟ್ ಹಾಕುವುದಕ್ಕೆ ಅಸಿಸ್ಟೆಂಟ್ ಇಂಜನಿಯರ್‌ರವರಿಗೆ ಏನು ಕಾರಣ ಇತ್ತು, ಎನ್ನುವುದು ಬಹಳ ಪ್ರಮುಖವಾದ ಪ್ರಶ್ನೆ.

From A.G's. Office, they have put up objection that this is fictitious purchase. ಅವರು, ನಾವು ಒಪ್ಪುವುದಕ್ಕೆ ಆಗುವುದಿಲ್ಲ ಎನ್ನುವ ದೃಷ್ಟಿಯಿಂದ ಇದಕ್ಕೆ ಆಬ್ಜೆಕ್ಷನ್ ಹಾಕಿದ್ದಾರೆ Because there was no approval of the design nor the sanction of the estimates. So, I want to know from the Government what is the procedure to put up purchasing indent or returning indent? ರಿಟರ್ನಿಂಗ್ ಇಂಡೆಂಟ್ ಹಾಕುವುದಕ್ಕೆ ಪ್ರೊಸೀಜರ್ ಏನು? ಅಸಿಸ್ಟೆಂಟ್ ಇಂಜನಿಯರ್‌ರವರು ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜನಿಯರ್‌ರವರು ಪ್ರೊಸೀಜರ್ ಫಾಲೋ ಮಾಡಿದ್ದಾರೆಯೇ? ಎನ್ನುವ ಅಂಶ ನಮಗೆ ಬೇಕಾಗಿದೆ. ಇನ್ನೂ ಒಂದು ಅಂಶವನ್ನು ತಿಳಿದುಕೊಳ್ಳಬೇಕು. Within 24 hours, I want to know whether there was any necessity to put up this indent for all the material required. ಒಂದು ವೇಳೆ ಇಂಡೆಂಟ್ ಹಾಕಬೇಕು ಅಂದರೆ stage by stage foundation ಗೆ ಎಷ್ಟು ಬೇಕು, ಫಸ್ಟ್ ಫ್ಲೋರ್‌ಗೆ ಎಷ್ಟು ಬೇಕು ಎಂದು ಅದರ ಪ್ರಕಾರ ಇಂಡೆಂಟ್ ಹಾಕಿದ್ದಾರೆಯೋ ಎನ್ನುತಕ್ಕ ಅಂಶ ಕೂಡ ನಮಗೆ ಬೇಕಾಗಿದೆ. ಏತಕ್ಕೆ ಅಂದರೆ ಇವತ್ತಿನ ದಿವಸ for these two hostel buildings at the same time entire material has been issued to the Contractor. Cement ಮತ್ತು Steel ನ್ನು ಒಂದೇ ಸಾರಿ ಕೊಟ್ಟು ಬಿಟ್ಟಿದ್ದಾರೆ.

ಒಂದೇ ಸಾರಿ ಮೆಟೀರಿಯಲ್ ಕೊಡುವುದಕ್ಕೆ ಪ್ರಾವಿಜನ್ ಇದೆಯೋ ಇಲ್ಲವೇ ಎನ್ನುವುದು ನನ್ನ ಪ್ರಶ್ನೆ. ಇಲ್ಲಿ ವರ್ಕಿಂಗ್ ಶೀಟ್ಸ್, ಕ್ಯಾಲಿಕ್ಯುಲೇಷನ್ ಶೀಟ್ಸ್ ಎಂದು ಇರುತ್ತವೆ. ಏನೇನು ಕೆಲಸ ಆಯಿತು, ಎಂದು ಶೀಟ್ಸ್ ನೋಡಿ ಅಸಿಸ್ಟೆಂಟ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್, ಯಾರು ಸಂಬಂಧಪಟ್ಟ ಅಧಿಕಾರಿಗಳು ಇರುತ್ತಾರೆ. ಅವರು ಸಪ್ಲೈ ಆಗಿರತಕ್ಕ ಮೆಟೀರಿಯಲ್ಸ್ ಬಿಟ್ಟು ಉಳಿದಿರತಕ್ಕಂಥ ಮೆಟೀರಿಯಲ್ ಬಗ್ಗೆ ಇಂಡೆಂಟ್ ಹಾಕುತ್ತಾರೆ. Meterial site ಎಷ್ಟಿದೆ ಎಂದು ಹೇಳಿ ಅದರ ಅಕೌಂಟ್ ಸ್ಟೇಜ್ ಬೈ ಸ್ಟೇಜ್ ಕೊಡಬೇಕು. ಇದೆಲ್ಲಾ ಪ್ರೊಸಿಜರ್ ಇರುತ್ತದೆ. ಇವರು ಯಾವ ಪ್ರೊಸಿಜರನ್ನು ಫಾಲೋ ಮಾಡಿದ್ದಾರೆ ಎನ್ನುವುದು ನನ್ನ ನೇರವಾದ ಪ್ರಶ್ನೆ. ಅಧ್ಯಕ್ಷರೆ, ಇನ್ನೊಂದು ಪ್ರಕರಣ ನಡೆದಿದೆ. Angle Iron and B. P. Sheets ಡಿಪಾರ್ಟ್‌ಮೆಂಟಿನವರು ಕಂಟ್ರಾಕ್ಟರಿಗೆ ಕೊಟ್ಟಿ

ದ್ದಾರೆ. He issued to the contractor nearly 9½ tonnes. I want to know from the Government whether all the contractors in the State are supplied these angle iron and B. P. Sheets. ಬಿ.ಪಿ ಷೀಟ್ಸ್ ಅವರಿಗೆ ಕೊಡಬೇಕು ಎನ್ನುವ ಪ್ರೊಸೀಜರ್ ಸರ್ಕಾರದಲ್ಲಿ ಇಟ್ಟಿದ್ದೀರಾ ? ಒಂದು ವೇಳೆ ಹಾಗಿಲ್ಲದೆ ಇದ್ದರೆ ಇವರಿಬ್ಬರಿಗೇ ಸ್ಪೆಷಲ್ಲಾಗಿ ಕೊಟ್ಟಿರುವುದು ಏತಕ್ಕಾಗಿ ಎನ್ನುವುದು ನಾನು ಇವತ್ತು ತಿಳಿದುಕೊಳ್ಳಬೇಕಾಗಿದೆ. ಅಧ್ಯಕ್ಷರೇ, ಒಂದು ವೇಳೆ ಕಂಟ್ರಾಕ್ಟರಿಗೆ ಆಂಗಲ್ ಮತ್ತು ಬಿ. ಪಿ. ಷೀಟ್ಸ್ ಕೊಟ್ಟಿದ್ದರೆ ಅಗ್ರಿಮೆಂಟ್ ಆಗಿರುತ್ತದೆ. I also want to know from the Government whether the supply of those meterials is included in the agreement between the contractor and the Department. ವಿಜಿಲೆನ್ಸ್ ಕಮಿಷನ್ ವರದಿ ನಾಳೆ ತಾವು ಸಭೆಯ ಮುಂದೆ ಇಡುತ್ತೀರಿ, ಕೂಲಂಕಷವಾಗಿ ವಿಮರ್ಶೆ ಮಾಡೋಣ ಈ ಮಧ್ಯೆ ನಾನು ಏನು ಅಂಶಗಳನ್ನು ತಾರೀಖುಗಳನ್ನು ಕೊಟ್ಟಿದ್ದೇನೆ, ಅದನ್ನು ವೆರಿಫೈ ಮಾಡಿ, ತಮ್ಮ ಉತ್ತರದಲ್ಲಿ ಇದು ಸತ್ಯವೇ, ಸತ್ಯಕ್ಕೆ ದೂರವಾಗಿರತಕ್ಕ ಅಂಶವೇ ಎಂದು ತಿಳಿಸಬೇಕು. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಈ ಅಂಶಗಳನ್ನೊಳಗೊಂಡ ಕಾರ್ಯಕ್ರಮ ಏನು ತೆಗೆದುಕೊಳ್ಳುತ್ತೀರಿ ಎಂದು ವಿರೋಧಪಕ್ಷ ಮತ್ತು ಈ ಸದನ ಸಂಪೂರ್ಣವಾಗಿ ನಂಬಿಕೆ ಇಟ್ಟುಕೊಂಡಿದೆ ಎಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ರೋಡ್ಸ್ ಅಂಡ್ ಬ್ರಿಡ್ಜಸ್ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಒಂದು ತಾಲ್ಲೂಕಿಗೆ ೫೦ ಮೈಲಿ ರೋಡ್ ಕೊಡುತ್ತೇವೆಂದು ಕೇಂದ್ರಸರ್ಕಾರದ ಯೋಜನೆಯನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿದ್ದೀರಿ ಇಲ್ಲ ಎಂದು ಹೇಳುವುದಿಲ್ಲ. ಕೆಲವು ಕಡೆ ಮಾಡಿಯೇ ಇಲ್ಲ. ಕೆಲವು ಕಡೆ ಮಣ್ಣು ಕಾಮಗಾರಿಗಳನ್ನು ಮಾಡುವ ಸ್ಕೀಂ ಇದೆ. ಸಂಪೂರ್ಣವಾಗಿ ಕೇಂದ್ರದಿಂದ ಹಣ ಪಡೆದು ಕೂಡಲೇ ಕೆಲಸ ಆಗಬೇಕು ನಾನು ತಮಗೆ ಒಂದು ಪತ್ರ ಬರೆದಿದ್ದೇನೆ. ಸೊರಬ ಕ್ಷೇತ್ರದಲ್ಲಿ ಪವನಂಗಿ ಕಾರವಾರ ಶಿವಮೊಗ್ಗ ಜಿಲ್ಲೆಯಲ್ಲಿ ಕನೆಕ್ಟ್ ಮಾಡುವ ರೋಡ್ ಆಸ್ಫಾಲ್ಟ್ ಮಾಡಬೇಕು. ಮಲೆನಾಡು ಭಾಗದಲ್ಲಿ ಹೆಚ್ಚಿಗೆ ಮಳೆ ಬೀಳುವುದರಿಂದ ರೋಡುಗಳು ಉಳಿಯುವುದಿಲ್ಲ, ಹಾಳಾಗಿ ಹೋಗುತ್ತವೆ. ಮಣ್ಣು ಹಾಕಿದ ರೋಡುಗಳಲ್ಲಿ ಒಂದು ಸಾರಿ ಮಳೆ ಹೊಡೆದರೆ ಕೊಚ್ಚಿಕೊಂಡು ಹೋಗುತ್ತವೆ. ಕಾರು ಹೋಗುವುದಕ್ಕೂ ಆಗುವುದಿಲ್ಲ ಹೊಸಹಾಳಿ ಮೇಲೆ ಹೋಗುವ ಉಳುವಿ, ಸೊರಬ ರೋಡನ್ನು ಆಸ್ಫಾಲ್ಟ್ ಮಾಡಬೇಕು ಎಂದು ಪತ್ರ ಬರೆದಿದ್ದೇನೆ. ಅನೇಕ ಬಡ್ಜೆಟ್ ವರ್ಕ್ಸ್‌ನ್ನು ತೆಗೆದುಕೊಂಡಿಲ್ಲ ಪಿಲ್‌ಗ್ರಿಮೇಜ್ ಸೆಂಟರ್ ಸೊರಬ ಟು ಚಂದ್ರಗುತ್ತಿ ರೋಡು, ೧೨-೧೦ ಮೈಲಿ ಆಗುತ್ತದೆ. ಅದರ ಕೆಲಸ ಕೂಡ ತೆಗೆದುಕೊಂಡಿಲ್ಲ. ಅದರ ಬಗ್ಗೆ ನಾನು ಪತ್ರ ಬರೆದಿದ್ದೇನೆ. ಮಲೆನಾಡು ಭಾಗದಲ್ಲಿರುವ ರೋಡ್‌ಗಳ ಬಗ್ಗೆ ಹೆಚ್ಚಿನ ಗಮನ ಕೊಡುವುದು ಅತ್ಯಗತ್ಯ. ಆಸ್ಫಾಲ್ಟ್ ರೋಡ್ಸ್ ಮಾಡುವುದಕ್ಕೆ ಹೆಚ್ಚಿನ ಗಮನ ಕೊಡದೇ ಇದ್ದರೆ, ಮಲೆನಾಡಿನ ರೋಡುಗಳು ಉಳಿಯುವುದಿಲ್ಲ ಎನ್ನುವುದು ನನ್ನ ಮಾತು. ಬ್ರಿಡ್ಜ್ ಕಾರ್ಪೊರೇಷನ್ ಮಾಡುತ್ತೇವೆ ಎಂದು ಹಿಂದೆ ತಿಳಿಸಿದ್ದೀರಿ. ಬ್ರಿಡ್ಜ್ ಕಾರ್ಪೊರೇಷನ್ ಯಾವಾಗ ಮಾಡುವುದು ? ಇದಕ್ಕೆ ಎಷ್ಟು ಕೋಟಿ ರೂಪಾಯಿ ಹಣ ಇದೆ ? ಇದರಲ್ಲಿ ಕೇಂದ್ರ ಸರ್ಕಾರದ ಹಣ ಎಷ್ಟು? ರಾಜ್ಯಸರ್ಕಾರದ ಹಣ ಎಷ್ಟು? ಮಲೆನಾಡು ಪ್ರದೇಶದಲ್ಲಿ ಅನೇಕ ಭಾಗದಲ್ಲಿ ಬ್ರಿಡ್ಜ್ ಹಾಕುವ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಕತವಾಯಿಹಳ್ಳದ ಬಗ್ಗೆ ಬರೆದಿದ್ದೇನೆ. ೧೯೬೭ ರಿಂದ ಪತ್ರ ಬರೆದಿದ್ದೇನೆ. ಅದು ೨೫-೩೦ ವರ್ಷದಿಂದ ನಿಂತಿರತಕ್ಕ ಪ್ರಶ್ನೆ. ಅದು ಒಂದು ಚಿಕ್ಕ ಹಳ್ಳ. ಅದು ಕಾರವಾರ ಶಿವಮೊಗ್ಗ ಡಿಸ್ಟ್ರಿಕ್ಟನ್ನು ಸೇರಿಸುತ್ತದೆ. ಲೋಕಲ್ ಪಾಲಿಟಿಕ್ಸ್ ಬಂದಿದೆ ಎಂದು ಹಾಗೆ ನಿಲ್ಲಿಸಿದ್ದಾರೆ. ಇದನ್ನು ಯಾರಿಗೆ ಕೇಳುವುದು ? ಇದನ್ನು ಮಾಡಿದರೆ ಕಾರವಾರ ಶಿವಮೊಗ್ಗಕ್ಕೆ ನೇರವಾದ ಸಂಪರ್ಕ ಆಗುತ್ತದೆ. ಈ ಕೆಲಸ ಹಾಗೆ ನಿಂತಿರುವುದರಿಂದ ದಯಮಾಡಿ ಇದನ್ನು ಮಾಡಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಮೈನರ್ ಇರಿಗೇಷನ್ ಬಗ್ಗೆ ಅನೇಕ ಸಾರಿ ಒತ್ತಡ ತಂದಿದ್ದೇನೆ. ಮಲೆನಾಡು ಪ್ರದೇಶದಲ್ಲಿ ಕೆರೆಗಳಲ್ಲಿ ಹೂಳು ತುಂಬಿಬಿಡುತ್ತದೆ. ಅದನ್ನು ಎತ್ತುತಕ್ಕ ಕಾರ್ಯಕ್ರಮ ಹಾಕಬೇಕು ಎಂದರೆ ಒಪ್ಪಲಿಲ್ಲ. ಅನ್‌ಎಕನಾಮಿಕ್ ಎಂದು ಹೇಳಿದ್ದಾರೆ ಅಲ್ಲಿ ವ್ಯಾಪಕವಾಗಿ ಬೋರ್‌ವೆಲ್ ರಿಗ್ಸ್ ಕರೆಸಿ ನೀರಾವರಿ ಸೌಕರ್ಯ ಮಾಡಿಕೊಡಬೇಕು ಡ್ಯಾಮ್ಸ್ ಕಟ್ಟಿದ್ದೀರಿ. ಶರಾವತಿ ವ್ಯಾಲೀ ಪ್ರಾಜೆಕ್ಟ್ ಕಡೆ ತೋಟಗಳು ಭತ್ತದ ಗದ್ದೆಗಳು ಲಕ್ಷಾಂತರ, ಕೋಟಿಗಟ್ಟಲೆ ಬೆಲೆಬಾಳುವ ಆಸ್ತಿಯನ್ನು ಜನ ಕಳೆದುಕೊಂಡಿದ್ದಾರೆ. ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ. ಮಲೆನಾಡು ನೈಸರ್ಗಿಕ ಸಂಪತ್ತನ್ನು ಹೊಂದಿರುವುದರಿಂದ, ಅದರ ಉಪಯೋಗ ರಾಜ್ಯಕ್ಕೆ ಆಗುತ್ತದೆ. ಅದರ ಯೋಗಕ್ಷೇಮ ನೋಡಿಕೊಳ್ಳುವ ಜವಾಬ್ದಾರಿ ತಮ್ಮ ಮೇಲೆ ಇದೆ. ತುಂಗ, ಭದ್ರ ಡ್ಯಾಂ ಕಟ್ಟಿದ್ದೀರಿ. ಅಲ್ಲಿ ಲಕ್ಷಾಂತರ ಎಕರೆ ಜಮೀನು ಕಳೆದುಕೊಂಡಿದ್ದಾರೆ ನೀರನ್ನು ಬೇರೆ ಕಡೆ ಕೊಡುತ್ತೀರಿ. ಇಲ್ಲಿ ಕುಡಿಯುವುದಕ್ಕೆ ನೀರಿಲ್ಲ. ನೀರಾವರಿ ಇಲ್ಲ. ಮಳೆ ಬಂದರೆ ಉಂಟು ಇಲ್ಲದಿದ್ದರೆ ಇಲ್ಲ. ಮಲೆನಾಡು ಪ್ರದೇಶದಲ್ಲಿ ಬೇರೆ ಕಡೆ ಶಾಶ್ವತವಾದ ನೀರಾವರಿ ಯೋಜನೆಗಳನ್ನು ಮಾಡುವಂತೆ ಇಲ್ಲಿಯೂ ಕೂಡ ಮಾಡುತ್ತೀರಿ ಎಂದು ನಂಬಿಕೆ ಇಟ್ಟುಕೊಂಡಿದ್ದೇನೆ. ಇನ್ನು ಒಂದು

(ಶ್ರೀ ಎಸ್. ಬಂಗಾರಪ್ಪ)

ಮಾತು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ರೈಲ್ವೇಸ್ ಚರ್ಚೆಗೆ ಇದೆ. ಹುಬ್ಬಳ್ಳಿ-ಕಾರವಾರಕ್ಕೆ ನೇರವಾದ ಸಂಪರ್ಕ ಏನು ಇದೆ, ಅದು ಅನೇಕ ವರ್ಷಗಳಿಂದ ನೆಲಗುಂದಿ ಬಿದ್ದಿರತಕ್ಕ ಸಮಸ್ಯೆ. ಒಂದು ಸಂತೋಷದ ಸಂಗತಿ ಏನೆಂದರೆ, ಇವತ್ತಿನ ಪತ್ರಿಕೆಯಲ್ಲಿ ಹೊಸ ಮಂಗಳೂರು ಪೋರ್ಟನ್ನು ನೇ ಮಹಾ ಬಂದರು ಎಂದು ಕೇಂದ್ರಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಇದು ಬಹಳ ಸಂತೋಷ. ಆದರೆ ಕಾರವಾರ ಬಂದರು ಬಹಳ ಪ್ರಮುಖವಾದ ಬಂದರು ಎನ್ನುವ ಅಂಶವನ್ನು ಮರೆಯಬಾರದು. ಇದು ಅಭಿವೃದ್ಧಿಯಾಗಬೇಕು. ಮ್ಯಾಂಗನೀಸ್ ಬೇಕಾದಷ್ಟು ಹೋಗುತ್ತದೆ. ಲಾರಿಗಳ ಮೇಲೆ ಕಳಿಸುತ್ತಾರೆ. ಈ ದೃಷ್ಟಿಯಿಂದ ಹುಬ್ಬಳ್ಳಿ ಮತ್ತು ಕಾರವಾರಕ್ಕೆ ಒಂದು ರೈಲ್ವೆ ಮಾರ್ಗವನ್ನು ಹಾಕುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತೀರಿ ಎಂದು ನಂಬಿಕೆ ಇಟ್ಟುಕೊಂಡಿದ್ದೇನೆ. ನ್ಯಾಚುರಲ್ ಕಲಾಮಿಟೀಸ್‌ಗೆ ಕಾರವಾರ ಜಿಲ್ಲೆ ತುತ್ತಾಗಿದೆ. ಕಾರವಾರ ಜಿಲ್ಲೆ ಕರಾವಳಿ ಪ್ರದೇಶವಾಗಿದೆ. ಸಮುದ್ರದ ನೀರು ಬಂದು ಕೊಚ್ಚಿಕೊಂಡು ಹೋಗುತ್ತೆ. ಲಕ್ಷಾಂತರ ರೂಪಾಯಿ ಲಾಸ್ ಆಗಿದೆ. ಸೀ ಷೋರ್‌ಗೆ ರಿವೆಟ್‌ಮೆಂಟ್ ಹಾಕಬೇಕು.

ಪೋರ್ಟ್ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಾ ಇಲ್ಲ. ಪೋರ್ಟ್ ಮಾನ್ಯ ಸಚಿವರ ಖಾತೆಗೆ ಸಂಬಂಧ ಪಟ್ಟಿದೆಯೋ ಇಲ್ಲವೋ ಗೊತ್ತಿಲ್ಲ. ಪೋರ್ಟ್ ಈ ಇಲಾಖೆಗೇ ಸೇರಿದ್ದರೆ ಬಹಳ ಅನುಕೂಲವಾಗುತ್ತದೆ. ರೈಲ್ವೇಸ್‌ಗೂ ಪೋರ್ಟಿಗೂ ಒಂದಕ್ಕೊಂದಕ್ಕೂ ಹೆಣೆದುಕೊಂಡು ಬಿಟ್ಟಿದೆ. ಇವತ್ತು ಹುಬ್ಬಳ್ಳಿ ಕಾರವಾರ ರೈಲ್ವೆ ಲಿಂಕ್ ಬಗ್ಗೆ ಹೇಳುವಾಗ, "ನ್ಯಾಚುರಲ್ ಕಲಮಿಟೀಸ್" ಪ್ರಕೃತಿ ವಿಕೋಪಕ್ಕೆ ಸಿಕ್ಕಿ ಕರಾವಳಿ ಪ್ರದೇಶ ಸಂಪೂರ್ಣವಾಗಿ ಕೆಟ್ಟುಹೋಗಿರುತ್ತದೆ. ಅದಕ್ಕೋಸ್ಕರ ಶಾಶ್ವತವಾದ ಪರಿಹಾರ ಮಾಡುವುದ ಕ್ಕಾಗಿ ಹಲವು ಕೋಟಿ ರೂಪಾಯಿಗಳನ್ನು ಇಡದಿದ್ದರೆ ಕರಾವಳಿ ಪ್ರದೇಶ ಹಾಳಾಗುತ್ತದೆಯೋ ಇಲ್ಲವೋ ಎಂಬುದನ್ನು ಮಾನ್ಯ ಸಚಿವರುಗಳು ಕಣ್ಣಾರೆ ನೋಡಿಕೊಂಡು ಬಂದಿರಬಹುದು.

ಈ ಸಂದರ್ಭದಲ್ಲಿ ಇಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿ, ಇನ್ನೂ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದ್ದರೂ ಕೂಡ ಕಾಲಾವಧಿಯ ಅಭಾವವಿರುವುದರಿಂದ ನಾನು ಇಷ್ಟು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಎಂ. ಬಂಗಿ, (ಜಮಖಂಡಿ). - ಮಾನ್ಯ ಅಧ್ಯಕ್ಷಣೀಯುವರೇ, ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಇವತ್ತಿನ ದಿವಸ ಮಂಡಿಸಿದ ಯಾವತ್ತೂ ಬೇಡಿಕೆಗಳಿಗೆ ನಾನು ಸಂಪೂರ್ಣವಾಗಿ ನನ್ನ ಬೆಂಬಲವನ್ನು ನೀಡುತ್ತಿದ್ದೇನೆ. ಇದೇ ಸಮಯದಲ್ಲಿ ಈ ಇಲಾಖೆಯ ಬಗ್ಗೆ ಕೆಲವು ಸೂಚನೆಗಳನ್ನು ಕೂಡ ಮಾಡಬಯಸುತ್ತೇನೆ.

ಈ ಇಲಾಖೆಯ ಪರವಾಗಿ ಇನ್‌ಲ್ಯಾಂಡ್ ನಾವಿಗೇಷನ್‌ನ ಒಂದು ಕೆಲಸ ಸಾಗುತ್ತಿದೆ. ನಮ್ಮ ಭಾಗದಲ್ಲಿ ಭೀಮಾ, ಕೃಷ್ಣಾ, ಘಟಪ್ರಭಾ ಈ ಎಲ್ಲಾ ನದಿಗಳೆಲ್ಲಾ ಮಳೆಗಾಲದಲ್ಲಿ ಸಂಪೂರ್ಣವಾಗಿ ನೀರು ತುಂಬಿ ಹರಿಯುತ್ತಿರುತ್ತದೆ. ಮೇಲಾಗಿ ಅಲ್ಲಿ ಸಾಕಷ್ಟು ದೋಣಿಗಳು ಇರುವುದಿಲ್ಲ. ಇದ್ದ ದೋಣಿಗಳು ಸಾಕಷ್ಟು ವ್ಯವಸ್ಥಿತವಾಗಿ, ಸರಿಯಾಗ ಉತ್ತಮ ಸ್ಥಿತಿಯಲ್ಲಿರುವುದಿಲ್ಲ. ಆದುದರಿಂದ ಜನಗಳ ಪ್ರಾಣಹಾನಿ ಎಷ್ಟೋ ಸಂದರ್ಭದಲ್ಲಿ ಆಗಿದೆ. ಆ ದೃಷ್ಟಿಯಿಂದ ನಾವು ಇವತ್ತಿನ ದಿವಸ ಹೇಳಬಯಸುವುದು ಏನೆಂದರೆ ಇನ್‌ಲ್ಯಾಂಡ್ ನ್ಯಾವಿಗೇಷನ್‌ಗೆ ಭೀಮಾ, ಕೃಷ್ಣಾ, ಘಟಪ್ರಭಾ ಮತ್ತು ಮಲಪ್ರಭಾ ಈ ನಾಲ್ಕು ನದಿ ಗಳಿಗೂ ಅನ್ವಯಿಸುವಂಥ ಬ್ರ್ಯಾಂಚ್ ಇಡಿ. ಈ ಬ್ರ್ಯಾಂಚ್‌ನ ಮುಖಾಂತರ ಈ ನಾಲ್ಕು ನದಿಗಳಿಗೂ ಲಿಂಕ್ ಮಾಡಿ ಆ ಒಂದು ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಪಿ.ಡಬ್ಲ್ಯೂ.ಡಿ. ಬಗ್ಗೆ ಹೇಳುವುದಾದರೆ, ಅನ್‌ಎಂಪ್ಲಾಯ್ಡ್ ಇಂಜಿನಿಯರ್ಸ್‌ಗೆ ಪ್ರಾಶಸ್ತ್ಯ ಕೊಡಬೇಕು. ಅವರಿಗೆ ಕಂಟ್ರ್ಯಾಕ್ಟ್‌ಗಳನ್ನು ಕೊಟ್ಟು ಅನ್‌ಎಂಪ್ಲಾಯ್‌ಮೆಂಟನ್ನು ದೂರ ಮಾಡುವುದಕ್ಕೋಸ್ಕರ ಮಾನ್ಯ ಮಂತ್ರಿಗಳು ಈ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕಳೆದ ವರ್ಷ ಬಹಳ ಫ್ಯಾಮಿನ್‌ಗೆ ಸಾಕಷ್ಟು ಹಣವನ್ನು ಖರ್ಚುಮಾಡಿ, ಎಷ್ಟೋ ಕೆಲಸಗಳನ್ನು ಮಾಡಿಸಿದ್ದೀರಿ. ರಸ್ತೆಯ ಆದಿ ಬದಿಯಲ್ಲಿ ಮೆಟಲ್ ಬ್ರೇಕಿಂಗ್ ಹಾಕಿಬಿಟ್ಟಿದ್ದೀರಿ, ಅದನ್ನು ಉಪಯೋಗ ಮಾಡಬೇಕು ಮತ್ತು ರಸ್ತೆಗಳನ್ನು ದುರಸ್ತಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಮೇಜರ್ ಇರಿಗೇಷನ್ ಬಗ್ಗೆ ಸಾಮಾನ್ಯವಾಗಿ ಹೇಳಬೇಕಾದರೆ ಕೃಷ್ಣಾ, ಘಟಪ್ರಭಾ, ಮಲಪ್ರಭಾ, ಭೀಮಾ ಈ ನಾಲ್ಕು ನದಿಗಳಲ್ಲೂ ಮಹಾರಾಷ್ಟ್ರ ಸರ್ಕಾರ ಮಾಡಿದಂತೆ ಸಣ್ಣಸಣ್ಣ ಟೆರಸಿಂಗ್ ಹಾಕಿ ನೀರನ್ನು ಸ್ಟಾಕ್ ಮಾಡಿ ಸರ್ಕಾರದವರು ಅನುಕೂಲತೆಯನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ರಸ್ತೆಗಳ ಅಕ್ಕಪಕ್ಕದಲ್ಲಿ ಗಿಡಗಳನ್ನು ನೆಡೆಸುವ ಕೆಲಸ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರಿಗೆ ಸೇರಿದ್ದು. ಈಗ ಸಧ್ಯಕ್ಕೆ ೩ ವರ್ಷಗಳಿಂದ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರಿಗೆ ವಹಿಸಿಕೊಟ್ಟಿಲ್ಲ, ಇದು ಸರಿಯಲ್ಲ. ಈ ಕೆಲಸ ಮೊದಲು ಲೋಕೋಪಯೋಗಿ ಇಲಾಖೆಯ ಪರವಾಗಿ ಸಾಗುತ್ತಿತ್ತು. ಈಗ ಸಧ್ಯಕ್ಕೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ಲೋಕೋಪಯೋಗಿ ಇಲಾಖೆಗೆ ಒಪ್ಪಿಸಿದ ಮೂಲಕ ಈ ಕೆಲಸ ಸರಿಯಾಗಿ ಸಾಗಿಲ್ಲ. ರಸ್ತೆಗಳ ಪಕ್ಕದಲ್ಲಿ ಗಿಡಗಳನ್ನು ಹಾಕುವುದಕ್ಕಾಗಿ ಗುಂಡಿಗಳನ್ನು ತೋಡಿದ್ದಾರೆ ಆದರೆ ಗಿಡಗಳು ಇಲ್ಲದೇ ಇರುವುದರಿಂದ ಮಣ್ಣು ಹಾಳಾಗಿ ಹೋಗಿದೆ. ಈ ಪ್ರಕಾರವಾಗಿ ಅದು ಉಪಯೋಗುತ್ತಿಲ್ಲವೆಂದು ಅನುಭವ ಬಂದುದರಿಂದ, ನಾನು ಈ ವಿಷಯದಲ್ಲಿ ಹೇಳುವುದು ಏನೆಂದರೆ ಲೋಕೋಪಯೋಗಿ ಇಲಾಖೆಯವರು ಮೊದಲನೆಯದಾಗಿ ರಸ್ತೆಯ ಎರಡೂ ಬದಿಗೆ ಗಿಡಗಳನ್ನು ಹಚ್ಚು ರಕ್ಷಣೆ ಮಾಡುವ ಕೆಲಸವನ್ನು ವಹಿಸಿಕೊಂಡಿದೆ ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಇನ್ನು ರೈಲ್ವೆ ಬಗ್ಗೆ ಹೇಳಬೇಕೆಂದರೆ ಮಿರಜ್, ಹುಬ್ಬಳ್ಳಿ ಮತ್ತು ಕೊರಡಗಿ, ಬಾಗಲಕೋಟೆ, ಗದಗ್ ಈ ಪ್ರಕಾರವಾಗಿ ಪ್ಯಾರಲಲ್ ಲಿಂಕನ್ನು, ಒಂದಕ್ಕೊಂದಕ್ಕೆ ಲಿಂಕನ್ನು ಹಾಕಬೇಕೆಂದು ಆಗಿನ ಜಮಖಂಡಿಯ ಸಂಸ್ಥಾನದ ಮಹಾರಾಜರು ಸರ್ವೇ ಕೂಡ ಮಾಡಿಸಿದ್ದರು ರಾಯಬಾಗ್‌ಗೆ ಕನೆಕ್ಟ್ ಮಾಡುವುದಕ್ಕಾಗಿ ಪ್ರಯತ್ನ ಪಟ್ಟಿದ್ದರು. ಆ ದೃಷ್ಟಿಯಿಂದ ಕೇಂದ್ರಸರ್ಕಾರದವರು ರೈಲ್ವೆ ಲಿಂಕನ್ನು ತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರದವರ ಪರವಾಗಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಮುಂದೆ ಲೋಕೋಪಯೋಗಿ ಇಲಾಖೆ ನಿರ್ಮಲ ರೀತಿಯಲ್ಲಿ ನಡೆಯಲಿ ಎಂದು ವಿರೋಧ ಪಕ್ಷದ ಸದಸ್ಯರುಗಳು ಹೇಳಿದ ವಿಷಯವನ್ನು ನಾನು ಸಂಪೂರ್ಣವಾಗಿ ಬೆಂಬಲಿಸಿ ಅದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ. ಈ ಇಲಾಖೆಯಲ್ಲಿ ಹಾಸನ, ಬಳ್ಳಾರಿ, ಬಿಜಾಪುರ, ಗುಲ್ಬರ್ಗಾ ಇನ್ನು ಹಲವು ಕಡೆಗಳಲ್ಲಿ ಸಾಕಷ್ಟು ಹಣ ಪೋಲಾಗಿ ಹೋಗಿದೆ ಎಂದು ಸ್ಪಷ್ಟವಾಗಿ ವಿಜಿಲೆನ್ಸ್‌ನಿಂದ ರಿಪೋರ್ಟ್ ಬಂದಿದೆ ಎಂದು ತಿಳಿದುಕೊಂಡಿದ್ದೇನೆ. ಇದ್ದಾಗ್ಯೂ ಕೂಡ ಮಾನ್ಯ ಮಂತ್ರಿಗಳು, ಯಾರ ಬಗ್ಗೆ ೧೫ ವರ್ಷಗಳ ಹಿಂದೆ ಜನರು ಹೆದರುತ್ತಿದ್ದರೋ, ಅಂಥ ಮಂತ್ರಿಗಳು ಈಗ ದುರ್ಬಲರಾಗಿದ್ದಾರೆ. ಅಷ್ಟು ಹಣ ಪೋಲಾಗಿದ್ದರೂ ಏತಕ್ಕೆ ಸುಮ್ಮನೆ ಕೂತಿದ್ದೀರಿ. ಹಣವನ್ನೆಲ್ಲಾ ಲೂಟಿ ಮಾಡಿ ನಮ್ಮ ನಮ್ಮಲ್ಲಿ ಡಿಸ್ಟ್ರಿಬ್ಯೂಟ್ ಮಾಡಿಕೊಂಡಿದ್ದೇವೆ ಎನ್ನತಕ್ಕಂಥ ರೀತಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದರು. ಇದು ದುರ್ದೈವದ ಸಂಗತಿ ನಾವು ಹಣವನ್ನು ಹುಚಿಕೊಳ್ಳುವುದಕ್ಕೋಸ್ಕರವಾಗಿ ಇಲ್ಲಿಗೆ ಬಂದಿಲ್ಲ. ನಾವು ಕೂಡ ಜನಗಳ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿದ್ದೇವೆ. ನಿರ್ಮಲ ರಾಜ್ಯಭಾರ ನಡೆಯಬೇಕೆಂಬುದೇ ನಮ್ಮ ಹಂಬಲ. ಆ ದೃಷ್ಟಿಯಿಂದ, ನಮ್ಮ ಪಕ್ಷದವರೇ ಆಗಲಿ, ವಿರೋಧ ಪಕ್ಷದವರೇ ಆಗಲಿ, ಯಾರೇ ಆಗಲಿ ತಪ್ಪು ಮಾಡಿದ್ದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಈ ಖಾತೆ ನಿರ್ಮಲ ರೀತಿಯಿಂದ ನಡೆಯಬೇಕೆಂಬುದೇ ನಮ್ಮೆಲ್ಲರ ಆಶಯ. ಮಾನ್ಯ ಚನ್ನಬಸಪ್ಪನವರ ಖ್ಯಾತ ಹೆಸರಿಗೆ ಅವರ ಪಕ್ಷದವರಿಂದ ತೊಂದರೆ ಬಂದಿದೆಯೋ, ವಿರೋಧ ಪಕ್ಷದವರಿಂದ ತೊಂದರೆ ಬಂದಿದೆಯೋ ? ಯಾರಿಂದ ತೊಂದರೆ ಬಂದಿದೆ ? ಏತಕ್ಕೆ ಅವರು ಸಿಂಹಘರ್ಜನೆ ಮಾಡಿದಂಥ ವೀರರು ಸುಮ್ಮನೆ ಕೂತುಕೊಂಡಿದ್ದಾರೆ. ಇದರಿಂದ ಅವರ ಹೆಸರನ್ನು ಕೆಡಿಸಿಕೊಳ್ಳುವುದಕ್ಕೆ ಹತ್ತಿದ್ದಾರೆ. ಅವರಿಗೆ ನಮ್ಮ ಸದನದ ಸಂಪೂರ್ಣ ಬೆಂಬಲವಿದೆ. ಯಾರಾದರೂ ಮನೆಗೆ ಕನ್ನ ಹಾಕುವವರು ಮೊದಲು ಮನೆಯ ನಾಯಿಯ ಕೊರಳಿಗೆ ಸಂಕೋಲೆ ಹಾಕುತ್ತಾರೆ, ಅದರಿಂದ ನಾಯಿಗೆ ಬೊಗಳುವುದಕ್ಕೆ ಬರುವುದಿಲ್ಲ ಮತ್ತು ಕಚ್ಚುವುದಕ್ಕೂ ಬರುವುದಿಲ್ಲ. ಮುಖ್ಯವಾದ ಸಮಸ್ಯೆ ಪರಿಹಾರವಾದ ಮೇಲೆ ಲೂಟಿ ಪ್ರಾರಂಭ ಮಾಡುತ್ತಾರೆ. ಆ ಪ್ರಕಾರವಾಗಿ ಮಾನ್ಯ ಚನ್ನಬಸಪ್ಪನವರಿಗೇನಾದರೂ ಬಂದಿದೆಯೋ ? ಹಾಗೆ ತೊಂದರೆ ಬಂದಿದ್ದರೆ ಯಾವಾಗಿನಿಂದ ಬಂದಿದೆ, ಎಂದು ಅದನ್ನು ಸ್ಪಷ್ಟವಾಗಿ ನಾಳೆ ದಿವಸ ಈ ಸದನದಲ್ಲಿ ಉತ್ತರ ಕೊಡುವಾಗ ಹೇಳಬೇಕು.

ಹಾಸನದಲ್ಲಿ ಎಷ್ಟು ದುಡ್ಡು ಪೋಲು ಆಗಿದೆಯೆಂಬುದನ್ನು ಹೇಳುವುದಕ್ಕೂ ಆಗುವುದಿಲ್ಲ. ಹಾಸನದಲ್ಲಿ ರಾತ್ರಿ ಗ್ಯಾಸ್‌ಲೈಟನ್ನು ಹಚ್ಚಿಸಿ ಕೆರೆ ಅಗಿಯುವ ಕೆಲಸ ನಡೆದಿದೆಯೆಂದು ಕೇಳಿದ್ದೇನೆ. ಈ ಎಲ್ಲಾ ಪ್ರಕರಣಗಳ ಬಗ್ಗೆ ನಮ್ಮ ಮಾನ್ಯ ಮಂತ್ರಿಗಳಿಗೆ ಏನೇನು ವಿವರಣೆಗಳು ಬಂದಿರುತ್ತವೆ ಮತ್ತು ವಿಜಿಲೆನ್ಸ್ ಕಮಿಷನ್ನಿನ ರಿಪೋರ್ಟ್ ಬಂದು ೧-೨ ತಿಂಗಳು ಆದಾಗ್ಯೂ ಕೂಡ, ಏನೊಂದು ಕಾರ್ಯಕ್ರಮವನ್ನು ಇವತ್ತು ತೆಗೆದುಕೊಳ್ಳದೇ ಸುಮ್ಮನೇ ನೋಡುತ್ತಾ ಕುಳಿತಿದ್ದಾರೆ. ಏತಕ್ಕೆ ಸುಮ್ಮನೆ ಕುಳಿತಿದ್ದೀರಿ ಎಂಬುದು ನಮಗೆ ಅರ್ಥವಾಗುವುದಿಲ್ಲ. ಅದರಿಂದ ತಪ್ಪಿತಸ್ಥರು ಯಾರೇ ಇರಲಿ, ಅವರು ಶಾಸಕರು ಇರಲಿ, ಗೌವರ್ನಮೆಂಟ್ ಸರ್ವೆಂಟ್ ಇರಲಿ, ಅಥವಾ ಅವರು ಯಾರೇ ಇರಲಿ, ಬೇಕಾದವರು ಇರಲಿ, ಪ್ರಭಾವಕ್ಕೆ ಒಳಗಾಗದೆ ಸ್ಪಷ್ಟವಾದ ರೀತಿಯಲ್ಲಿ ನಾಳೆ ದಿವಸ ಉತ್ತರವನ್ನು ಸಭೆಯಲ್ಲಿ ಮಂಡಿಸಿ. ಇದಕ್ಕೆ ಸಹಾಯ ಬೇಕಾದರೆ ವಿರೋಧ ಪಕ್ಷದವರಿಂದ, ನಮ್ಮೆಲ್ಲರಿಂದಲೂ ನಿಮಗೆ ಸಂಪೂರ್ಣವಾದ ಬೆಂಬಲ ಇದೆ ಎಂದು ನಾನು ಇವತ್ತಿನ ದಿವಸ ಹೇಳಬಯಸುತ್ತೇನೆ.

(ಶ್ರೀ ಪಿ. ಎ . ಬಂಗಿ)

ನಾನು ಸ್ವಲ್ಪದರಲ್ಲಿ ಹೇಳಬೇಕಾದರೆ ನಿರ್ಮಲವಾದ ಆಡಳಿತ ಜನಗಳಿಗೂ ಬೇಕು, ಆಡಳಿತ ಪಕ್ಷದವರಿಗೂ ಬೇಕು ಮತ್ತು ವಿರೋಧ ಪಕ್ಷದವರಿಗೂ ಬೇಕು. ನಾನು ಶ್ರೀಮಾನ್ ಹೆಚ್. ಎಂ. ಚೆನ್ನಬಸಪ್ಪನವರ ಬಗ್ಗೆ ಹೇಳಬೇಕಾದರೆ ಅವರು ಬಹಳ ಪ್ರಾಮಾಣಿಕರು ಯಾವಾಗಲೂ ಉತ್ಕೃಷ್ಟವಾದ ರೀತಿಯಲ್ಲಿ ಕೆಲಸವನ್ನು ಸಾಗಿಸುತ್ತಾರೆ. ಈವಾಗಲೂ ಸಹ ಅವರು ವಿಸಿಟ್ ಎಲ್ಲಿಯಾದರೂ ಹೋದರೆ ಅಧಿಕಾರಿಗಳು ಹೆದರುತ್ತಾರೆ. ಹೀಗಿದ್ದಾಗ್ಯೂ ಕೂಡ ಅವರು ಈ ವಿಜಿಲೆನ್ಸ್ ಕಮೀಷನ್ ರಿಪೋರ್ಟ್ ಬಂದಾಗ್ಯೂ ಕೂಡ ಏತಕ್ಕೆ ಸುಮ್ಮನೆ ಇದ್ದಾರೋ ಗೊತ್ತಿಲ್ಲ. ಆದುದರಿಂದ ಅವರು ಈ ಬಗ್ಗೆ ನಾಳೆ ದಿವಸವೇ ಈ ಸದನಕ್ಕೆ ಅದರ ಸಂಪೂರ್ಣ ಚಿತ್ರವನ್ನು ಕೊಡಬೇಕು. ಮತ್ತು ಈ ಬಗ್ಗೆ ಅವರ ಮೇಲೆ ಏನು ಒಂದು ಕ್ಲೌಡ್ ಇದೆ ಅದನ್ನು ಬಗೆಹರಿಸುತ್ತಾರೆಂದು ನಾನು ಬಯಸಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

ಶ್ರೀ ಹೆಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ).— ಮಾನ್ಯ ಅಧ್ಯಕ್ಷಿಣಿಯವರೇ, ಈಪೊತ್ತಿನ ದಿವಸ ಪಿ.ಡಬ್ಲ್ಯು.ಡಿ ಇಲಾಖಾ ಮಂತ್ರಿಗಳು ಈ ಸಭೆಯ ಮುಂದೆ ತಮ್ಮ ಬೇಡಿಕೆಯನ್ನು ಏನು ಮಂಡಿಸಿದ್ದಾರೋ ಅದನ್ನು ನಾನು ಸಂಪೂರ್ಣವಾಗಿ ಸಮರ್ಥನೆ ಮಾಡುತ್ತಾ ಕೆಲವು ಸಲಹೆಯನ್ನು ಕೊಡಲಿಚ್ಛಿಸುತ್ತೇನೆ

ಈ ಲೋಕೋಪಯೋಗಿ ಇಲಾಖೆ ಬಹಳ ದೊಡ್ಡದು. ಈ ಇಲಾಖೆ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ. ಏತಕ್ಕೆಂದರೆ ಇಡೀ ನಮ್ಮ ದೇಶದ ಅಭಿವೃದ್ಧಿ ಕಾರ್ಯಗಳು ಎಷ್ಟು ವೇಗವಾಗಿ ಕಾರ್ಯಗತವಾಗುತ್ತದೋ ಅಷ್ಟು ವೇಗದಲ್ಲಿ ನಮ್ಮ ದೇಶ ಉನ್ನತಿ ಯಾಗುತ್ತದೆ ಅವರು ಈ ಅಭಿವೃದ್ಧಿಯ ಕಾರ್ಯದಲ್ಲಿ ಕುಂಠಿತರಾದರೆ ಆ ಕಷ್ಟವನ್ನು ಎಲ್ಲರೂ ಅನುಭವಿಸ ಬೇಕಾಗುತ್ತದೆ. ಈಗ ಈ ಇಲಾಖೆ ಮೇಲೆ ಬಹಳ ಅಪಾದನೆ ಇದೆ. ಶ್ರೀಮಾನ್ ದಯಾನಂದ ಸಾಗರ್‌ರವರು ಮಾತನಾಡುತ್ತಾ ಹೇಳಿದರು ಈ ಪಬ್ಲಿಕ್ ವರ್ಕ್ಸ್ ಇಲಾಖೆ ಎನಮಿ ನಂಬರ್ ವನ್ ಎಂದು ರಾಜಗೋಪಾಲಚಾರಿಯವರು ಹೇಳಿದರು ಎಂದು. ಅದು ಈಗ ಒಂದು ಇಲಾಖೆಗೆ ಅನ್ವಯಿಸುವುದಿಲ್ಲ ಎಂದು ಹೇಳುತ್ತೇನೆ. ಏತಕ್ಕೆಂದರೆ ಯಾವ ಇಲಾಖೆಯೂ ಸಹಿತ ಲಂಚಗುಳಿತದ ಭೂತ ಬಾಧಿತವಾಗಿಲ್ಲ. ಉದಾಹರಣೆಗೆ ವ್ಯವಸಾಯ ಇಲಾಖೆಯನ್ನೇ ತೆಗೆದುಕೊಳ್ಳಿ, ಅರಣ್ಯ ಇಲಾಖೆಯನ್ನೇ ತೆಗೆದು ಕೊಳ್ಳಿ ರೆವಿನ್ಯೂ ಇಲಾಖೆಯನ್ನೇ ತೆಗೆದು ಕೊಳ್ಳಿ ಹಿಂದೆ ವಿದ್ಯಾ ಇಲಾಖೆ ಮತ್ತು ನ್ಯಾಯಾಂಗ ಇಲಾಖೆ ಒಂದು ಪವಿತ್ರವಾದ ಇಲಾಖೆ ಎಂದು ಹೆಸರಾಗಿತ್ತು. ಈಗ ಅಲ್ಲೂ ಕೂಡ ಈ ಲಂಚಗುಳಿತನದ ಭೂತ ಪ್ರವೇಶ ಮಾಡಿದೆ. ಆದುದರಿಂದ ನಾನು ಹೇಳುವುದು ಈ ಪ್ರಜಾಪ್ರಭುತ್ವದಲ್ಲಿ ನಾವು ಅವರನ್ನೇ ದೂಷಣೆ ಮಾಡುವುದಿಲ್ಲ ನಾವೂ ಕೂಡ ಇದರಿಂದ ವಿಮುಕ್ತರಾಗಬೇಕು. ಹೇಗೆಂದರೆ ಈ ಇಲಾಖೆಯಲ್ಲಿ ನಾವು ಹೋಗಿ ಈ ಬಿಲ್ಲು ಮಾಡಿ, ಆ ಬಿಲ್ಲು ಮಾಡಿ ಎಂದು ಒತ್ತಾಯ ಮಾಡಿ ನಾವೂ ಕೂಡ ಅವರ ಕಡೆಯೇ ಸಾಬೀತಾಗಿ ಅವರ ಒಂದು ಕಾರ್ಯದಲ್ಲಿ ಸಹಾಯಕರಾಗಿರುವುದರಿಂದ ಈ ಲಂಚಗುಳಿತನ ಹೆಚ್ಚಾಗಿದೆ. ಇದಕ್ಕೆ ನಾವು ಯಾರನ್ನೂ ದೂಷಿಸುವುದು ಸರಿಯಲ್ಲ. ಈ ಬಗ್ಗೆ ಎಲ್ಲರೂ ಕೂತುಕೊಂಡು ವಿಚಾರವಿನಿಮಯ ಮಾಡಬೇಕು. ನಮ್ಮ ದೇಶದಲ್ಲಿ ಹಣದ ಕೊರತೆಗೆ ಕಾರಣ ಏನೆಂದು ರಾಜಕಾರಣಿಗಳು, ಇಲಾಖಾ ಮುಖ್ಯಸ್ಥರು ಎಲ್ಲಾ ಅಧಿಕಾರಿಗಳು ಒಂದು ಕಡೆ ಕೂತುಕೊಂಡು ಯೋಚನೆ ಮಾಡಿ ಇದಕ್ಕೆ ಕಾರಣವನ್ನು ಹಿಡಿಯಬೇಕು ಇಲ್ಲದೇ ಹೋದರೆ ಮುಂದೆ ನಾವು ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳುದರಲ್ಲಿ ಏನೂ ಸಂಶಯವಿಲ್ಲ ಇದಕ್ಕೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಈ ಬಗ್ಗೆ ಶ್ರೀಮಾನ್ ವೀರಪ್ಪಗೌಡರು ಒಂದು ಉದಾಹರಣೆ ಹೇಳಿದರು ರೆವಿನ್ಯೂ ಇಲಾಖೆಯಲ್ಲಿ ಬೆಟರ್‌ಮೆಂಟ್ ಲೆವಿ ಏನು ಬರಬೇಕೋ ಅದು ನಿಂತುಹೋಗಿರುವುದರಿಂದ ನಮ್ಮ ದೇಶಕ್ಕೆ ಆರ್ಥಿಕ ಮುಗ್ಗಟ್ಟು ಬಂದಿದೆ ಎಂದು. ಅದು ನಿಜ. ಈ ಇಲಾಖೆಯವರು ಕುಂತು ನಿಂತು ಇದರಲ್ಲಿ ಏನು ಆದಾಯ ಬರಬೇಕೋ ಅದು ಬರುತ್ತಾ ಇದೆಯೋ ಇಲ್ಲವೋ ಎನ್ನುವುದನ್ನು ಯೋಚನೆ ಮಾಡಿ ವಸೂಲ್ಮಾಡಬೇಕು. ಮತ್ತು ಅದಕ್ಕೆ ತಕ್ಕಂಥ ಬಡ್ಜೆಟ್ಟನ್ನು ಅಳವಡಿಸಿಕೊಂಡು ಎಷ್ಟು ಖರ್ಚು ಮಾಡಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಒಂದು ಅಭಿವೃದ್ಧಿ ಕಾರ್ಯ ಮಾಡಬೇಕಾದರೆ ಆದಾಯಕ್ಕೆ ತಕ್ಕಂತೆ ಖರ್ಚನ್ನು ಅಳವಡಿಸಿಕೊಂಡು ಆ ದುಡ್ಡಿನಲ್ಲಿ ಮೊದಲು ಯಾವ ಎಸ್ಟಿಮೇಟ್‌ಗೆ ಎಷ್ಟು ದುಡ್ಡು ಖರ್ಚು ಮಾಡಬಹುದು ಎನ್ನುವುದನ್ನು ನೋಡಬೇಕು. ಮತ್ತು ಎಲ್ಲರೂ ನೋಡುತ್ತಾರೆ ಯಾವ ಒಂದು ಕೆಲಸ ತೆಗೆದುಕೊಂಡರೂ ಕೂಡ ೪೦ ಪರ್ಸೆಂಟ್ ಅಷ್ಟು ಹಣ ಅವರ ಎಸ್ಟಾಬ್ಲಿಷ್‌ಮೆಂಟ್‌ಗೆ ಖರ್ಚಾಗುತ್ತದೆ ಎಂದು. ಅದೇನೋ ನಿಜ. ನಾನು ಹಾರಂಗಿ ಜಲಾಶಯ ನೋಡುವುದಕ್ಕೆ ಹೋಗಿದ್ದೆ. ಅಲ್ಲಿಗೆ

ಆ ವರ್ಷ ಬಡ್ಜೆಟ್ಟಿನಲ್ಲಿ ೧ ಕೋಟಿ ೩೦ ಲಕ್ಷ ರೂಪಾಯಿಯನ್ನು ಅಳವಡಿಸಿದ್ದರು, ಅದರಲ್ಲಿ ೩೦ ಲಕ್ಷ ರೂಪಾಯಿಯಷ್ಟು ಹಣ ಅದರ ಎಸ್ಟಾಬ್ಲಿಷ್‌ಮೆಂಟ್‌ಗೆ ನೇ ಖರ್ಚಾಗಿದೆ. ಯಾರ್ಯಾಗೆ ಎಂದರೆ ಹಾರಂಗಿ ಜಲಾಶಯದ ಸೂಪರಿಂಟೆಂಡೆಂಟ್ ಇಂಜೀನಿಯರ್, ಮತ್ತು ಇನ್ನೂ ಇತರ ಅಧಿಕಾರಿಗಳಿಗೆ ಖರ್ಚಾಗಿದೆ.

ಇನ್ನು ಕಾವೇರಿ ವ್ಯಾಲಿ ಪ್ರಾಜೆಕ್ಟ್ ತೆಗೆದುಕೊಂಡರೆ ಅಲ್ಲಿಗೆ ಒಬ್ಬರು ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದ್ದಾರೆ. ಈ ರೀತಿಯಾಗಿ ಸೂಪರ್‌ಫ್ಲೂಯಸ್ ಆಗಿ ಆಫೀಸರ್ಸ್‌ನ್ನು ನೇಮಕ ಮಾಡುತ್ತಾ ಹೋದರೆ ಅವರ ಖರ್ಚು ದೇಶಕ್ಕೆ ಎಷ್ಟಾಗುತ್ತದೆ ಎನ್ನುವುದನ್ನು ಮನಗಾಣಬೇಕು. ಈ ರೀತಿಯಾಗಿ ಈ ಇಲಾಖೆ ಯಲ್ಲಿ ಹೆಚ್ಚು ಖರ್ಚಾಗುತ್ತಾ ಇದೆ. ಆದರೆ ಅವರ ಕರ್ತವ್ಯ ಏನೋ ಗೊತ್ತಿಲ್ಲ. ಇನ್ನು ಹೇಮಾವತಿ ಪ್ರಾಜೆಕ್ಟ್ ತೆಗೆದುಕೊಂಡು ಅಲ್ಲಿ ಇನ್ನೂ ನೀರಾವರಿ ಆಗುತ್ತಾ ಇಲ್ಲ. ಅದರಲ್ಲೂ ಕೂಡ ಸೂಪರ್‌ಫ್ಲೂಯಸ್ ಆಗಿ ಅಪಾಯಿಂಟ್ ಮಾಡಿದ್ದೀರಿ, ಇದರಿಂದ ದೇಶಕ್ಕೆ ಹೆಚ್ಚು ಖರ್ಚಾಗುತ್ತಾ ಇದೆಯೇ ವಿನಾ ಪ್ರಯೋಜನಾ ಏನೂ ಆಗುತ್ತಾ ಇಲ್ಲ. ಈ ರೀತಿಯಾಗಿ ದೊಡ್ಡ ದೊಡ್ಡ ಸಂದ್ರೆಗಳನ್ನು ಜಾಸ್ತಿ ಮಾಡಿ ಕೊಳ್ಳುವುದರಿಂದ ದೇಶದ ಆರ್ಥಿಕ ಮುಗ್ಗಟ್ಟಿಗೆ ಇದೂ ಒಂದು ಕಾರಣ ಎಂದು ಹೇಳುತ್ತೇನೆ. ಇಂದು ದೇಶದ ಅಭಿವೃದ್ಧಿ ಕಾರ್ಯಗಳನ್ನು ಮಾಡುವಾಗ ಇಂಜಿನೀಯರುಗಳ ಪಾತ್ರ ಬಹಳ ಪವಿತ್ರವಾದುದು. ಹಿಂದೆ ಮೈಸೂರು ಇಂಜನೀಯರ್ಸ್ ಎಂದರೆ ಬಹಳ ಬುದ್ಧಿವಂತರು ಎಂದು ವಿಶೇಷವಾದ ಹೆಸರು ಗಳಿಸಿದ್ದರೆ. ಆದರೆ ಇಂದು ಏನಾಗಿದೆ ಎಂದರೆ ಉದಾಹರಣೆಗೆ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ತೆಗೆದುಕೊಂಡರೆ ಅದರಲ್ಲಿ ಚೀಫ್ ಇಂಜಿನಿಯರ್ ಇನ್ ಚೀಫ್, ಸೂಪರಿಂಟೆಂಡೆಂಟ್ ಇಂಜನೀಯರ್, ಅಸಿಸ್ಟೆಂಟ್ ಇಂಜನೀಯರ್ಸ್ ಅಂತ ಬೇಕಾದಷ್ಟು ಇಂಜನೀಯರ್‌ಗಳನ್ನು ನೇಮಕ ಮಾಡಿಕೊಂಡಿದ್ದೀರಿ. ಈ ರೀತಿಯಾಗಿ ಬೇಕಾದಷ್ಟು ಜನ ಇಂಜನೀಯರ್‌ಗಳನ್ನು ಅನಾವಶ್ಯಕವಾಗಿ ನೇಮಕ ಮಾಡಿಕೊಂಡಿರುವುದರಿಂದ ನಮ್ಮ ದೇಶದ ಹಣ ಸೋರಿಹೋಗುವುದಕ್ಕೆ ಇದೂ ಒಂದು ಕಾರಣ. ಈ ವಿಚಾರವನ್ನು ಗಮನಿಸಿ ಇವನ್ನು ತಡೆ ಗಟ್ಟದೆ ಹೋದರೆ ನೀವು ಏನು ಈ ಬಗ್ಗೆ ವಿಶೇಷವಾದ ಮಾಡಬೇಕು ಕಾರ್ಯಗಳನ್ನು ಎಂದು ನಿರೀಕ್ಷಣೆ ಮಾಡುತ್ತಿದ್ದೀರೋ ಅದು ಆಗುವುದಕ್ಕೆ ಸಾಧ್ಯವಿಲ್ಲ. ಇದರಿಂದ ಇನ್ನೂ ಹೆಚ್ಚಾಗಿ ದೇಶದ ಹಣ ವೇಸ್ಟ್ ಆಗುವುದು ಸಹಜ. ಏತಕ್ಕೆಂದರೆ ಈ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. (೧) ರಸ್ತೆಗಳಿಗೆ ಟಾರ್ ಹಾಕಿಸುವಾಗ ಎಷ್ಟೋ ರಸ್ತೆಗಳನ್ನು ಅಗೆದು ಬಿಟ್ಟು ಕೆಲವು ದಿವಸದವರೆಗೆ ಕೆಲಸವನ್ನೇ ಮಾಡಿರುವುದಿಲ್ಲ, ಇದರಿಂದ ಅದನ್ನು ಅದಕ್ಕೆ ಖರ್ಚಾದ ಎಲ್ಲಾ ಹಣ ನಿರರ್ಥಕ ವಾಗುತ್ತದೆ (೨) ನಂತರ ಕೆಲವು ವೇಳೆ ಜಲ್ಲಿಯನ್ನು ಕಲೆಕ್ಟ್ ಮಾಡಿ ೪-೫ ದಿವಸದವರೆಗೆ ಕೆಲಸವನ್ನೇ ಮಾಡುವುದಿಲ್ಲ. ಇದರಿಂದಲೂ ಖರ್ಚುಮಾಡಿದ ಹಣ ನಿರರ್ತಕ ವಾಗುತ್ತದೆ. (೩) ಮತ್ತು ಕಂಟ್ರಾಕ್ಟರಿಗೆ ಕೆಲಸ ಕೊಡುವಾಗ ಅವರು ಯಾವ ರೀತಿ ಕೆಲಸ ಮಾಡಬೇಕೋ ಆ ರೀತಿ ಮಾಡದ ಸಬ್ ಸ್ಟ್ಯಾಂಡರ್ಡ್ ವರ್ಕ್ ಮಾಡುವುದರಿಂದ ನಮ್ಮ ದೇಶದ ಹಣ ಅಪವ್ಯಯಿ ವಾಗುತ್ತದೆ, (೪) ಇನ್ನು ಇದರ ಜೊತೆಗೆ ಮೆಷಿನರಿಯಿಂದ ಕೆಲವಷ್ಟು ಹಣ ಸೋರಿ ಹೋಗುತ್ತದೆ. ಅದು ಯಾವ ರೀತಿ ಎಂದರೆ ಈಗ ನಮ್ಮ ಮೈಸೂರು ದೇಶದ ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ಎಷ್ಟೆಷ್ಟು ಮೆಷಿನರಿಯನ್ನು ಹೊರಗಡೆಯಿಂದ ತರಿಸಿದ್ದಾರೆ ಮತ್ತು ಇಲ್ಲಿ ಎಷ್ಟು ಮೆಷಿನರಿಗಳನ್ನು ಕೊಂಡು ಕೊಂಡಿದ್ದಾರೆ ಅದರ ಒಂದು ಲೆಕ್ಕ ಸರಿಯಾಗಿ ಇಟ್ಟಿಲ್ಲ. ಮತ್ತು ಈ ಬಗ್ಗೆ ಯಾವ ಯಾವ ಡಿವಿಷನ್‌ಗೆ ಯಾವ ಯಾವ ಮಷಿನರಿಯನ್ನು ಕೊಟ್ಟಿದ್ದಾರೆ ಇದರ ಒಂದು ಚರಿತ್ರೆಯನ್ನು ಅವರು ಪೂರ್ತಾ ಬರೆದಿಟ್ಟಿಲ್ಲ. ಮತ್ತು ಅದರ ಲೆಕ್ಕವನ್ನೇ ಸರಿಯಾಗಿ ಇಟ್ಟಿಲ್ಲ. ಯಾವ ಯಾವ ಮೆಷಿನರಿ ಎಲ್ಲಿಂದ ಬಂದಿದೆ ಮತ್ತು ಯಾವ ಯಾವ ಮೆಷಿನರಿಗಳು ಉಪಯೋಗವಾಗದೇ ಹಾಗೆಯೇ ಇವೆ ಇವುಗಳ ಲೆಕ್ಕವನ್ನೂ ಕೂಡ ಸರಿಯಾಗಿ ಇಟ್ಟಿಲ್ಲ. ಅಲ್ಲದೆ ಕೆಲವು ಮೆಷಿನರಿಗಳು ಮೈನರ್ ರಿಪೇರ್ಸ್ ಮಾಡದೆ ಹಾಗೆಯೇ ಇವೆ. ಇದರಿಂದ ಯಾವ ಪ್ರಯೋಜನವೂ ಇಲ್ಲದೆ ಕೆಲಸ ಮಾಡದೇ ನಿಂತಿವೆ. ಅದರ ಲೆಕ್ಕವನ್ನೂ ಸಹ ಇಟ್ಟಿಲ್ಲ ಮತ್ತು ಇದಿರ ರಿಪೇರಿಗಾಗಿ ಸಾಗಾಣಿಕೆಗಾಗಿ ಕೆಲವು ಹಣ ಖರ್ಚಾಗುತ್ತದೆ. ಈ ರೀತಿಯಾಗಿ ಈ ಮೆಷಿನರಿಯಿಂದ ಕೆಲವಷ್ಟು ಹಣ ಸೋರಿಹೋಗುತ್ತದೆ ಎಂದು ಹೇಳುತ್ತೇನೆ ಆದುದರಿಂದ ಮಾನ್ಯ ಲೋಕೋಪಯೋಗಿ ಇಲಾಖಾ ಮಂತ್ರಿಗಳಾದ ಶ್ರೀಮಾನ್ ಹೆಚ್. ಎಂ. ಚೆನ್ನಬಸಪ್ಪನವರಿಗೆ ಹೇಳುತ್ತೇನೆ ಅವರು ಈ ಕಡೆ ದೃಷ್ಟಿ ಹರಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಈಗ ತಮ್ಮ ಇಲಾಖೆಯಲ್ಲಿ ಈ ಮೆಷಿನರಿ ಗಳು ಏನು ಐಡಲ್ ಆಗಿ ಬಿದ್ದಿವೆ ಮತ್ತು ಯಾರ್ಯಾರಿಗೆ ಎಲ್ಲೆಲ್ಲಿಗೆ ಮೆಷಿನರಿಗಳು ಹೋದವು ಮತ್ತು ಕಂಟ್ರಾಕ್ಟರಿಗೆ ಬಾಡಿಗೆಗೆ ಕೊಟ್ಟು ಮೆಷಿನರಿಗಳಿಂದ ಎಷ್ಟೆಷ್ಟು ರಿಸೀಟ್ ಬಂದಿವೆ ಇವೆಲ್ಲದರ ಲೆಕ್ಕವನ್ನೂ ತಗೆಸಿ ನೋಡಿಸಬೇಕು. ಹೀಗೆ ಮಾಡದೇ ಹೋದರೆ ಇದರಿಂದ ಸರ್ಕಾರಕ್ಕೆ ಲಕ್ಷಾಂತರವೇ ಅಲ್ಲ ಕೋಟ್ಯಾಂತರ ರೂಪಾಯಿ ಹಣ ಸೋರಿಹೋಗುತ್ತದೆ. ಇದು ನಿಜವಾದ ವಿಚಾರ. ಈ ಇಲಾಖೆಯಲ್ಲಿ ಸೋರಿಹೋಗುವಂಥಾದ್ದರ ಕಡೆ ವಿಷಯಗಳನ್ನು ಹೇಳುವುದು ಇನ್ನೂ ಅನೇಕ ಇವೆ. ಅದು ಯಾವುವೆಂದರೆ ಎಸ್ಟಿಮೇಟ್‌ನಲ್ಲಿ ಡಿಫೆಕ್ಟ್ ಮಾಡುವುದು ಪ್ಲಾನ್ ಬದಲಾಯಿಸುವುದು, ಅಕ್ವಿಸಿಷನ್ ಕೆಲಸದಿಂದ ತಡೆ ಮಾಡುವುದು, ಮತ್ತು ಒಂದು ಸೈಟನ್ನು ಸೆಲೆಕ್ಟ್ ಮಾಡದ ಮೇಲೆ ಸುಮಾರು ಅದಕ್ಕೆ ೫೦ ಸಾವಿರ, ಒಂದು ಲಕ್ಷ ರೂಪಾಯಿ ಖರ್ಚು ಮಾಡಿದ ಮೇಲೆ ಅದನ್ನು ಯಾರಿಗೋ ಒಬ್ಬರಿಗೆ ಪರಿಭಾರ ಮಾಡುವುದು ಇಂಥಾದ್ದ

(ಶ್ರೀ ಹೆಚ್. ಬಿ. ಕೆಂಚೇಗೌಡ)

ರಿಂದಲೂ ನಮ್ಮ ದೇಶದ ಹಣ ಬೇಕಾದಷ್ಟು ಸೋರಿ ಹೋಗುತ್ತದೆ. ಆ ರೀತಿಯಾಗಿ ಪರಿಭಾರ ಮಾಡಿರುವ ನಿದರ್ಶನಗಳು ಅನೇಕ ಇವೆ. ಈ ಒಂದು ಕಾರ್ಯವನ್ನು ಮನಸಿನಲ್ಲಿಟ್ಟುಕೊಂಡು ಯೋಚನೆ ಮಾಡಿ ಇಂಜಿನಿಯರ್ಸ್ ಮಾಡಿದ ಪಕ್ಷದಲ್ಲಿ ಅನೇಕ ಇನ್‌ಸಿಡೆಂಟ್ಸ್ ಆಗುವುದನ್ನು ಉಳಿಸಬಹುದು. ಇನ್ನು ಕಂಟ್ರಾಕ್ಟ್ ಕೊಡತಕ್ಕ ವಿಚಾರ ವ್ಯವಸಾಯ ಮಾಡುವವರು ಹಾರಂಗಿ ಮತ್ತು ಹೇಮಾವತಿ ಪ್ರಾಜೆಕ್ಟಿನಲ್ಲಿ ಕಂಟ್ರಾಕ್ಟ್ ಮಾಡುವುದಕ್ಕೆ ಹೋದರು ಅವರು ಇನ್ನೊಬ್ಬರಿಗೆ ೨೦ ಪರ್ಸೆಂಟ್ ೧೫ ಪರ್ಸೆಂಟ್ ಕಮಿಷನ್ ಮೇಲೆ ಸಬ್‌ಲೆಟ್ ಮಾಡಿದರು ಇದನ್ನು ಮಾಡಬೇಕಾದರೆ ಕಂಟ್ರಾಕ್ಟನ್ನು ಎಷ್ಟು ಹೈ ರೇಟಿಗೆ ಕೊಟ್ಟಿರಬಹುದು ಮತ್ತು ಅವನು ಮಾಮೂಲು ಎಷ್ಟು ಕೊಟ್ಟಿರಬಹುದು ಎನ್ನುವುದನ್ನು ಲೆಕ್ಕ ಹಾಕಬೇಕು. ಇದು ಎಲ್ಲಾ ನೋಡಿದ ಪಕ್ಷದಲ್ಲಿ ಲೋಕೋಪಯೋಗಿ ಕಾಮಗಾರಿಕೆ ಕೆಲಸಗಳಿಗೆ ಒಂದು ಕೋಟಿ ರೂಪಾಯಿ ಅಳವಡಿಸಿದರೂ ಅದರಲ್ಲಿ ೫೦ ಲಕ್ಷ ರೂಪಾಯಿಗಳ ಕೆಲಸ ಆಗುವುದಿಲ್ಲ. ಈ ರೀತಿ ದುಡ್ಡನ್ನು ಎಲ್ಲಿಯವರೆಗೆ ಹೊಡೆಯುವುದು ? ಹೀಗೆ ಮಾಡುವುದರಿಂದ ನಮ್ಮ ದೇಶದ ಪ್ರಗತಿ ಕುಂಠಿತವಾಗುತ್ತದೆ. ನೀರಾವರಿ ಯೋಜನೆಗಳನ್ನು ಧೈರ್ಯವಾಗಿ ಮತ್ತು ವೇಗವಾಗಿ ಇದುವರೆವಿಗೆ ಕಾರ್ಯಗತ ಮಾಡಿದ್ದರೆ, ಇವತ್ತು ಆಹಾರದ ಕೊರತೆ ಇರುತ್ತಿರಲಿಲ್ಲ. ಆಂಧ್ರದಲ್ಲಿ ಎಲ್ಲಾ ಕಾರ್ಯಗಳನ್ನು ನಿಲ್ಲಿಸಿ ನಾಗಾರ್ಜುನ ಡ್ಯಾಮ್ ಕೆಲಸವನ್ನು ಮುಗಿಸಿ ಈವೊತ್ತು ೨೦ ಲಕ್ಷ ಎಕರೆ ನೀರಾವರಿಗೆ ನೀರು ಸಿಗುವಂತೆ ಮಾಡಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಸಹ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಿದ್ದರೆ ಆಹಾರದ ಕೊರತೆಯು ಇರುತ್ತಾ ಇರಲಿಲ್ಲ. ಇವತ್ತು ಡೆವಲಪ್‌ಮೆಂಟ್ ವರ್ಕ್‌ಗೆ ಇಟ್ಟ ದುಡ್ಡನ್ನು ಸರಿಯಾಗಿ ಖರ್ಚು ಮಾಡದೆ ಈ ರೀತಿ ಸೋರಿ ಹೋಗುವುದಕ್ಕೆ ಅವಕಾಶ ಕೊಟ್ಟ ಪಕ್ಷದಲ್ಲಿ ಈ ಕಾರ್ಯಗಳು ವೇಗದಲ್ಲಿ ಆಗುವುದಿಲ್ಲ. ನಮ್ಮ ಕೈಯಲ್ಲಿ ಅಧಿಕಾರ ಇದೆ ನಾವು ಏನು ಬೇಕಾದರೂ ಮಾಡಬಹುದು, ಸ್ವಾರ್ಥಕ್ಕಾಗಿ ಅಧಿಕಾರವನ್ನು ಉಪಯೋಗಿಸಬಹುದು ಎನ್ನುವ ದುರಾಸೆ ಇಟ್ಟುಕೊಂಡರೆ, ಮಿಡಾಸನ ಗತಿ ಹಿಡಿಬಹುದು ಮುಟ್ಟಿದ್ದು ಎಲ್ಲಾ ಚಿನ್ನ ಆಗಬೇಕು ಎಂದರೆ, ನಾವು ಉಪಯೋಗಿಸುವ ಆಹಾರ ಚಿನ್ನ ಆಗುತ್ತದೆ. ಉನ್ನತ ಅಧಿಕಾರದಲ್ಲಿರುವವರು ನಿಸ್ವಾರ್ಥರಾಗಿ ನೀರಾವರಿ ಯೋಜನೆಗಳಿಗೆ ಮಾನ್ಯತೆ ಕೊಟ್ಟು ವೇಗವಾಗಿ ಕಾರ್ಯಗತ ಮಾಡಿ ವ್ಯವಸಾಯಕ್ಕೆ ಅನುಕೂಲ ಮಾಡದೆ ಹೋದರೆ ನಾವು ಮುಂದೆ ಆಹಾರದ ಕೊರತೆಯನ್ನು ಅನುಭವಿಸಬೇಕಾಗುತ್ತದೆ. ಇವತ್ತಿನ ದಿವಸ ದುಡ್ಡನ್ನು ಖರ್ಚು ಮಾಡುವುದರಲ್ಲಿ ಹಳೆ ಮೈಸೂರು, ಹೊಸ ಮೈಸೂರು ಎಂದು ಬಹಳ ತಾರತಮ್ಯ ನಡೆಯುತ್ತಿದೆ. ಹಳೇ ಮೈಸೂರಿಗೆ ಜಾಸ್ತಿ ಖರ್ಚಾಗುತ್ತಿದೆಯೆಂದು ಎಲ್ಲರೂ ದೂಷಣೆ ಮಾಡುತ್ತಾರೆ. ಪಿ.ಡಬ್ಲ್ಯೂ.ಡಿ ಮಿನಿಸ್ಟರ್ ಮತ್ತು ಚೀಫ್ ಮಿನಿಸ್ಟರ್ ನಮ್ಮ ಡಿಸ್ಟ್ರಿಕ್ಟಿನವರು. ಈ ಬಡ್ಜೆಟ್ಟಿನಲ್ಲಿ ಅಳವಡಿಸಿರುವ ದುಡ್ಡನ್ನು ನೋಡಿ. ಮೈನರ್ ಇರಿಗೇಷನ್‌ಗೆ ಹಳೆ ಮೈಸೂರಿನಲ್ಲಿ ೧೦ ಲಕ್ಷ ಖರ್ಚಾದರೆ ಹೊಸ ಮೈಸೂರಿನಲ್ಲಿ ೨೫ ಲಕ್ಷ ಖರ್ಚಾಗಿದೆ. ಕಾವೇರಿ ಯೋಜನೆಯಲ್ಲಿರುವ ಮೂರು ಪ್ರಾಜೆಕ್ಟ್‌ಗಳಿಗೆ ಕೇವಲ ೯ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಹೊಸ ಮೈಸೂರಿಗೆ ೨೨ ಕೋಟಿ ರೂಪಾಯಿ ಅಳವಡಿಸಿದ್ದಾರೆ. ರಿಲೀಫ್ ವರ್ಕ್ಸ್‌ಗೆ ೫೦ ಕೋಟಿ ರೂಪಾಯಿ ಖರ್ಚು ಮಾಡಿದ್ದೂ ಅಲ್ಲದೆ ಹಳೇ ಮೈಸೂರಿನ ಜನಗಳಿಗೆ ಏನೂ ಅಭಿವೃದ್ಧಿ ಕಾರ್ಯಗಳು ಮಾಡಿಲ್ಲ. ರಸ್ತೆಗಳು ಆಗಿಲ್ಲ, ಮೈನರ್ ಇರಿಗೇಷನ್ ವರ್ಕ್ಸ್ ಆಗಿಲ್ಲ ಮತ್ತು ಯಾವ ಒಂದು ಬೃಹತ್ ನೀರಾವರಿ ಯೋಜನೆಗಳೂ ಆಗಿಲ್ಲ. ಜನರಿಗೆ ಏನು ಉತ್ತರ ಹೇಳುವುದು ? ನಮ್ಮ ಜಿಲ್ಲೆಯ ಇಬ್ಬರೂ ಮಂತ್ರಿಗಳು ಇದ್ದರೂ, ಹಾರಂಗಿ ಯೋಜನೆಗಾಗಿ ೧೯೭೨-೭೩ರಲ್ಲಿ ಮೂರು ಕೋಟಿ ೬೦ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ, ೧೯೭೩-೭೪ಕ್ಕೆ ಎರಡು ಕೋಟಿ ರೂಪಾಯಿ ಅಳವಡಿಸಿ, ಒಂದು ಕೋಟಿ ೨೦ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಮತ್ತು ಈ ವರ್ಷ ಕೇವಲ ೩೦ ಲಕ್ಷ ರೂಪಾಯಿ ಇಟ್ಟಿದ್ದಾರೆ. ಹಾರಂಗಿ ಪ್ರಾಜೆಕ್ಟಿನ ಎಲ್ಲಾ ಇಂಜಿನಿಯರ್‌ಗಳನ್ನು ಸಂದರ್ಶಿಸಿ ವಿಚಾರಿಸಿದ್ದೇನೆ. ಮೇಯಿನ್ ಡ್ಯಾಮ್ ಏನು ಇದೆ ಅದಕ್ಕೆ ಈ ವರ್ಷ ೭೫ ಲಕ್ಷ ರೂಪಾಯಿ ಕೊಟ್ಟರೆ, ಕಾಲುವೆ ಮಾಡಲು ವರ್ಷಕ್ಕೆ ೭೫ ಲಕ್ಷ ರೂಪಾಯಿ ಖರ್ಚು ಮಾಡಿದರೆ, ಆ ರೀತಿ ವರ್ಷ ಒಂದಕ್ಕೆ ಒಂದೂವರೆ ಕೋಟಿ ರೂಪಾಯಿ ಖರ್ಚು ಮಾಡಿದರೆ ೧೯೭೬ನೇ ಇಸವಿಗೆ ಸುಮಾರು ೫ ಸಾವಿರ ಎಕರೆ ಹೊಸ ನಾಲೆ ಕೆಳಗೆ ೧೦ ಸಾವಿರ ಎಕರೆ ಹಳೇ ನಾಲೆ ಕೆಳಗೆ ನೀರು ಕೊಡಬಹುದು. ಒಟ್ಟು ೬ ಕೋಟಿ ರೂಪಾಯಿ ಖರ್ಚು ಮಾಡಿದರೆ ೧೦ ಸಾವಿರ ಎಕರೆ ಹೊಸ ನಾಲೆ ಕೆಳಗೆ ಮತ್ತು ೨೫ ಸಾವಿರ ಎಕರೆ ಹಳೆ ನಾಲೆ ಕೆಳಗೆ ನೀರು ಕೊಡಬಹುದು. ಯಾವುದಾದರೂ ಅತಿ ಶೀಘ್ರವಾಗಿ ಪ್ರತಿಫಲ ಬರತಕ್ಕ ಪ್ರಾಜೆಕ್ಟಿಗೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಿದ ಪಕ್ಷದಲ್ಲಿ ಅದರಿಂದ ಹೆಚ್ಚು ಆಹಾರದ ಉತ್ಪಾದನೆ ಆಗಿ ಅದರಿಂದ ದೇಶಕ್ಕೆ ಅನುಕೂಲವಾಗುತ್ತದೆ. ಎಡದಂಡೆ ನಾಲೆ ಬಗ್ಗೆ ಎಸ್ಟಿಮೇಟ್ ಆಗಿ ಅದಕ್ಕೆ ಒಪ್ಪಿಗೆ ಕೊಟ್ಟಿಲ್ಲ. ಒಂದು ಕೋಟಿ ರೂಪಾಯಿ ಎಸ್ಟಿಮೇಟ್ ಆಗಿದೆ, ೨೫ ಲಕ್ಷ ರೂಪಾಯಿಗಳನ್ನು ಅದನ್ನು ಮುಂದುವರಿಸುವುದಕ್ಕೆ ಇವತ್ತು ಒದಗಿಸದೆ ಹೋದರೆ ಅದು ಪೂರ್ತಿ ಆಗುವುದಿಲ್ಲ. ಉತ್ತರ ಕರ್ನಾಟಕಕ್ಕೆ ೨೫-೩೦ ಲಕ್ಷ ರೂಪಾಯಿ ಚಾನಲಿಗಾಗಿ ಕೊಡುತ್ತಾರೆ. ಮುಖ್ಯಮಂತ್ರಿಗಳು ನಮ್ಮಲ್ಲಿ ಇದ್ದರೂ ಸಹ ನಮ್ಮ ಕಡೆಯ ಪ್ರಾಜೆಕ್ಟುಗಳಿಗೆ ಸಾಕಷ್ಟು ಹಣ ಒದಗಿಸು

ತ್ತಿಲ್ಲ. ಈ ಹಾರಂಗಿಗಾಗಲೀ, ಹೇಮಾವತಿಗಾಗಲೀ ಕನಿಷ್ಟ ಪಕ್ಷ ೫-೬ ಕೋಟಿ ರೂಪಾಯಿಗಳನ್ನು ಒದಗಿಸಬೇಕಾಗಿದೆ. ಕಬಿನಿಗೂ ಅಷ್ಟೇ ಒದಗಿಸಬೇಕಾಗಿದೆ. ಏತಕ್ಕೆಂದರೆ ಆ ಕಡೆ ರಿಲೀಫ್ ವರ್ಕ್ಸ್‌ಗೆ ೫೦-೬೦ ಕೋಟಿ ಖರ್ಚಾಗಿದ್ದರೆ ಘಟಪ್ರಭಾ ಪ್ರಾಜೆಕ್ಟ್‌ಗೆ ಏಳೂವರೆ ಕೋಟಿ ರೂಪಾಯಿ ಮಲಪ್ರಭಾ ಪ್ರಾಜೆಕ್ಟ್‌ಗೆ ಏಳೂವರೆ ಕೋಟಿ ರೂಪಾಯಿ ಒದಗಿಸಿದ್ದಾರೆ. ಆದ್ದರಿಂದ ಹಾರಂಗಿ ಪ್ರಾಜೆಕ್ಟ್‌ಗೆ ಇನ್ನೂ ಹೆಚ್ಚಿನ ದುಡ್ಡು ಒದಗಿಸುವ ಯೋಚನೆ ಮಾಡಬೇಕು. ಮತ್ತೆ ಈ ಇಲಾಖೆಯಲ್ಲಿ ಎಸ್ಟಾಬ್ಲಿಷ್‌ಮೆಂಟ್‌ಗಾಗಿ ಜಾಸ್ತಿ ಖರ್ಚಾಗುತ್ತಿದೆ. ಒಬ್ಬ ಕೆಲಸ ಮಾಡುವ ಕಡೆ ೧೦ ಜನ ಕೆಲಸ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನೌಕರ ವರ್ಗದವರು ಸ್ಟ್ರೈಕ್ ಮಾಡಿ ಸಂಬಳ ಜಾಸ್ತಿ ಮಾಡಬೇಕು ನಮಗೆ ಟಿ. ಎ. ಮತ್ತು ಡಿ. ಎ. ಜಾಸ್ತಿ ಕೊಡಬೇಕು ಎಂದು ಹೇಳತಕ್ಕ ಸಂದರ್ಭದಲ್ಲಿ ಆಡಳಿತದಲ್ಲಿ ಇರತಕ್ಕ ಒಂದು ವರ್ಗವಾಗಲೀ, ವಿರೋಧ ಪಕ್ಷವಾಗಲೀ ಅವರಿಗೆ ಪ್ರೋತ್ಸಾಹ ಮಾಡುವುದು ಸರಿಯೇ ಎಂದು ಕೇಳಬೇಕಾಗುತ್ತದೆ ಈವೊತ್ತಿನ ಕಷ್ಟದ ಪರಿಸ್ಥಿತಿಯಲ್ಲಿ ೨೩ ಕೋಟಿ ರೂಪಾಯಿ ನೌಕರ ಸಿಬ್ಬಂದಿಗೆ ಖರ್ಚು ಮಾಡುತ್ತಿದ್ದೇವೆ. ಆದರೆ ೧೦೦ಕ್ಕೆ ೮೦ ಜನರು ಇರತಕ್ಕ ರೈತರ ವಿಚಾರ ನೋಡುವುದಿಲ್ಲ. ಇವತ್ತು ನೌಕರರು ಟಿ.ಎ, ಮತ್ತು ಡಿ.ಎ, ಜಾಸ್ತಿ ಮಾಡಿಕೊಡು ಎಂದು ಸ್ಟ್ರೈಕ್ ಮಾಡಿದರೆ, ಅವರಿಗೆ ಪ್ರೋತ್ಸಾಹ ಕೊಡಬಹುದು. ಮಾನ್ಯ ಚನ್ನಬಸಪ್ಪನವರು ೧೯೫೬ನೇ ಇಸವಿಯಲ್ಲಿ ದಕ್ಷ ಆಡಳಿತ ಮಾಡಿದರು ಎಂದು ಎಲ್ಲರೂ ಹೇಳುತ್ತಾರೆ. ಅಷ್ಟೇ ದಕ್ಷತೆಯಿಂದ ಆಡಳಿತ ಮಾಡುತ್ತಾ ಇಲ್ಲ. ಈಗ ಏತಕ್ಕೆ ಈ ಭಾವನೆ ಬಂದು ಬಿಟ್ಟಿದೆ, ಅವರಾದರೂ ಮುಖ್ಯವಾಗಿ ಬಹಳ ಧೈರ್ಯ ಸ್ಥೈರ್ಯದಿಂದ ಕೊನೇ ಕಾಲಕ್ಕೆ ಆಡಳಿತ ಸರಿ ಮಾಡಿ ಹೋಗುತ್ತಾರೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ) .–ಸನ್ಮಾನ್ಯ ಅಧ್ಯಕ್ಷರೇ, ಹಿರಿಯರೂ, ದಕ್ಷ ಆಡಳಿತಗಾರರೂ ಮತ್ತು ಕರ್ನಾಟಕದ ಪಿತಾಮಹರೂ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾರು ಈ ಕರ್ನಾಟಕದಲ್ಲಿ ಹಾಗೂ ಪ್ರಾಮುಖ್ಯವಾದಂಥ ಲೋಕೋಪಯೋಗಿ ಇಲಾಖೆಯಲ್ಲಿ ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಆಡಳಿತ ನಡೆಸತಕ್ಕಂಥ ವ್ಯಕ್ತಿ ಎಂದು ಅನಿಸಿಕೊಂಡಿದ್ದರೋ ಅವರೇ ಈ ದಿವಸ ಅಷ್ಟೇ ಒಂದು ಅಪಖ್ಯಾತಿಯನ್ನು ತಲೆಯ ಮೇಲೆ ಹೊತ್ತಿದ್ದಾರೆ ಎಂದರೆ ಲವಲೇಶವೂ ತಪ್ಪಾಗಲಾರದು. ಇಂತಹ ಇಳಿ ವಯಸ್ಸಿನಲ್ಲಿ ಅವರು ಇಂತಹ ಒಂದು ಕಾರ್ಯವನ್ನು ಮಾಡಿಕೊಳ್ಳಬಾರದಾಗಿತ್ತು ಎಂದು ನಾನು ಅವರಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಆದರೂ ನೆಪಮಾತ್ರಕ್ಕೆ ಮಂತ್ರಿಯಾಗಿರತಕ್ಕ ಅವರಲ್ಲಿ ಒಂದೆರಡು ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತೆ ಈ ಹಿಂದೆ ಶ್ರೀಮಾನ್ ಚೆನ್ನಬಸಪ್ಪನವರು ಪ್ರವಾಸ ಬರುತ್ತಾರೆ ಎಂದರೆ ರಾಜಕಾರಣಿಗಳು ಸೊಂಟ ಕಟ್ಟಿ ನಿಲ್ಲುತ್ತಿದ್ದರು, ಲಂಚಕೋರ ಅಧಿಕಾರಿಗಳು ಹೆಂಗಸರ ಮೊರೆ ಹೋಗುತ್ತಿದ್ದರು. ಆದರೆ ಇಂದು ಅದೇ ಮಂತ್ರಿಗಳು ಹಾಹಾಕಾರ ಇರತಕ್ಕಂತಹ ರಾಜಕಾರಣಿಗಳ ವಶವಾಗಿದ್ದಾರೆಂದರೆ ತಪ್ಪಾಗಲಾರದು. ಹಗಲು ನಡೆಯುತ್ತಿರುವ ಪಾಪದ ಕೆಲಸಗಳನ್ನು ಕಂಡೂ ಕಾಣದಂತೆ ಕಣ್ಣು ಮುಚ್ಚಿಕೊಂಡು ನುಂಗುತ್ತಿದ್ದಾರೆ. ಹಾಸನದ ಪ್ರಕರಣವನ್ನು ಆಕಾಶದ ಮಟ್ಟದಲ್ಲಿ ಹೇಳಿದರೂ ಸಹ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ; ಇಂದು ಲಂಚಕೋರ ಅಧಿಕಾರಿಗಳದ್ದೇ ಒಂದು ಜಾತಿಯಾಗಿದೆ ಇಂತಹ ಅಧಿಕಾರಿಗಳು ಹಾಸನದಲ್ಲಿರಲಿ, ಗುಲ್ಬರ್ಗದಲ್ಲಿರಲಿ, ಬಿಜಾಪುರದಲ್ಲಿರಲಿ, ಕ್ಷಾಮ ಪ್ರದೇಶದಲ್ಲಿರಲಿ ಮತ್ತು ಅವರು ಯಾವ ಜಾತಿಗೆ ಸೀಮಿತವಾಗಿದ್ದರೂ ಕೂಡ ಅವರು ಲಂಚಕೋರರ ವರ್ಗಕ್ಕೆ ಸೇರಿದವರಾಗಿರುತ್ತಾರೆ. ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಒಂದು ಎಚ್ಚರಿಕೆಯ ಮಾತನ್ನು ಹೇಳುತ್ತೇನೆ. ಏನೆಂದರೆ, ಅವರು ಏನಾದರೂ ಅವರ ಇಲಾಖೆಯ ಯಾವ ಅಧಿಕಾರಿಯ ಮೇಲಾದರೂ ಕ್ರಮ ಕೈಕೊಳ್ಳುವುದಕ್ಕೆ ಮೊದಲು ತಮ್ಮ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು ಎಂದು. ನಮ್ಮ ನೆಚ್ಚಿನ ವಿರೋಧಪಕ್ಷದ ನಾಯಕರು ಒಂದು ಬೃಹದಾಕಾರದ ದೂರನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಆ ಬಗ್ಗೆ ತಾವು ತನಿಖೆ ನಡೆಸಿ, ತಪ್ಪು ಮಾಡಿದವರೂ ಎಂತಹ ಉಚ್ಚಮಟ್ಟದ ಅಧಿಕಾರಿಗಳೇ ಆಗಿರಲಿ, ಅವರನ್ನೆಲ್ಲಾ ಏಕಕಾಲದಲ್ಲಿ ಶಿಕ್ಷೆಗೆ ಒಳಪಡಿಸಬೇಕು ಎಂದು ಅಧ್ಯಕ್ಷರ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ತಮ್ಮ ಒಂದು ಸಾಮರ್ಥ್ಯ ಲವಲೇಶ ಕಡಿಮೆಯಾದರೂ ಸಹ ತಾವು ಸೀತಾದೇವಿಯಂತೆ ಅಗ್ನಿ ಪ್ರವೇಶ ಮಾಡಬೇಕಾಗುತ್ತದೆಂದು ಸೂಚಿಸಿ ತಮ್ಮ ಇಲಾಖೆಯ ಬಗ್ಗೆ ಒಂದೆರಡು ಅಂಶಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಹಳೆಯ ಮೈಸೂರಿನ ಭಾಗದವರಾದ ನಾವು ಏನು ದುರಾದೃಷ್ಟವೋ ಗೊತ್ತಿಲ್ಲ. ಈ ಇಲಾಖೆಯ ಫಲವನ್ನು ಸರಿಯಾಗಿ ಪಡೆಯುತ್ತಿಲ್ಲ. ಹಿಂದಿನ ವರ್ಷ ದುರದೃಷ್ಟದಿಂದ ಹೊಸ ಕರ್ನಾಟಕ ಭಾಗದಲ್ಲಿ ಅಭಾವ ಬಂದಾಗ ನಾವೆಲ್ಲರೂ ಏಕಕಂಠದಿಂದ ಒಪ್ಪಿಕೊಂಡು ಹಣದ ವ್ಯವಹಾರವೆಲ್ಲವನ್ನೂ ಆ ಕಡೆಗೆ ಹರಿಸಿದೆವು. ಮತ್ತು ನಮ್ಮ ಸೋದರ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ರಿಗಾಗಿ ತ್ಯಾಗ ಮಾಡಿದೆವು. ಅದನ್ನು ಈ ಸರ್ಕಾರ ಅರಿತಿದೆ. ಮತ್ತು ಮಾನ್ಯ ಅಧ್ಯಕ್ಷರೂ ಸಹ ಅರಿತಿದ್ದಾರೆ. ಆ ರೀತಿ ತ್ಯಾಗ ಮಾಡಿದ ವ್ಯಕ್ತಿಗಳಿಗೆ ಶಿಕ್ಷೆಯಾಗಬಾರದು ? ಹಿಂದೆ ಸ್ವಾತಂತ್ರ್ಯಪೂರ್ವದಲ್ಲಿ, ಈ ದೇಶಕ್ಕೆ ಸ್ವಾತಂತ್ರ್ಯ ಬರಬೇಕು ಎಂದು ಅನೇಕ ಜನರು ತಮ್ಮ ಹೆಂಡತಿ ಮತ್ತು ಮಕ್ಕಳ ಆಸೆಯನ್ನು ಬಿಟ್ಟು ಹೋರಾಟ ಮಾಡಿ ಜೈಲಿಗೆ ಹೋದವರು ಇಂದು ತಮ್ಮ ಆಸ್ತಿಯನ್ನು ಕಳೆದುಕೊಂಡಿದ್ದಾರೆ. ಅನೇಕ ವಕೀಲರು ತಮ್ಮ ಪ್ರಾಕ್ಟೀಸನ್ನು ಕಳೆದುಕೊಂಡು ಅಂದು ಹೋರಾಟ ಮಾಡಿದ್ದರ ಫಲವಾಗಿ ಇಂದು ಭಿಕ್ಷಾ ಪಾತ್ರೆಯನ್ನು ಹಿಡಿದಿದ್ದಾರೆ. ಅಂತಹ ಒಂದು ಅವಸ್ಥೆ ಹಳೆಯ ಮೈಸೂರು ಭಾಗಕ್ಕೆ ಈ ಇಲಾಖೆ ಯಿಂದ ಆಗಬಾರದು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಮ್ಮ ಇಲಾಖೆಗೆ ಒದಗಿಸಿರತಕ್ಕಂಥ ಹಣವನ್ನು ನೋಡಿದರೆ ನಮಗೆ ಅದರಿಂದ ಲವಲೇಶವೂ ಸಹಾಯವಾಗುವುದಿಲ್ಲವೆಂದು ಕಾಣುತ್ತದೆ. ಈ ಹಿಂದೆ ತಾವು ಪ್ರತಿ ಅಸೆಂಬ್ಲಿ ಕ್ಷೇತ್ರದಲ್ಲಿಯೂ ೧೦೦ ಕಿಲೋಮೀಟರ್‌ನಷ್ಟು ರಸ್ತೆ ಕೆಲಸವನ್ನು ಈ ಇಲಾಖೆ ಯಿಂದ ಮಾಡಿಸುವುದಾಗಿ ಧೀರೋದಾತ್ತನಾಗಿ ಆಶ್ವಾಸನೆ ಕೊಟ್ಟಿದ್ದಿರಿ. ಆದರೆ ಇಂದು ಅದಕ್ಕೆ ತದ್ವಿ ರುದ್ಧವಾಗಿ ಸರ್ಕಾರ ನಡೆಯುತ್ತಿರುವುದನ್ನು ನೋಡಿದಾಗ, ಬಹುಶಃ ಸೌಮ್ಯ ಸ್ವಭಾವದ ನಮ್ಮ ಜನರು ಇನ್ನು ಹೆಚ್ಚು ಕಾಲ ಸೈರಣೆಯಿಂದ ಇರುವುದಿಲ್ಲ ಎಂದು ನಾನು ಸೂಚಿಸುತ್ತೇನೆ.

ಇನ್ನು ಕರ್ನಾಟಕ ರಾಜ್ಯದಲ್ಲಿ ಅನ್ನ ಬವಣೆ ನೀಗಬೇಕಾದರೆ ಸಣ್ಣ ಸಣ್ಣ ನೀರಾವರಿ ಯೋಜನೆಗಳ ಕೆಲಸ ತ್ವರಿತವಾಗಿ ಆಗಬೇಕು. ಆದರೆ ತಾವು ಇದಕ್ಕೆ ಒದಗಿಸಿರತಕ್ಕಂಥ ಹಣವನ್ನು ನೋಡಿದರೆ ಆಶ್ಚರ್ಯ ವಾಗುತ್ತದೆ. ಎಲ್ಲೆಲ್ಲಿ ದೈವೀಕವಾದಂಥ ಸೌಲಭ್ಯ ಇದೆಯೋ ಅಂತಹ ಕಡೆಗಳಲ್ಲಿ ಪಿಕಪ್ ಕಟ್ಟಬಹುದು, ಸಣ್ಣ ಸಣ್ಣ ಕೆರೆಗಳನ್ನು ಕಟ್ಟಬಹುದು, ಮತ್ತು ಲಿಫ್ಟ್ ಇರಿಗೇಷನ್ ಸ್ಕೀಂ ಮೂಲಕ ನೀರನ್ನು ಒದಗಿಸ ಬಹುದು. ಇಂತಹ ಸೌಲಭ್ಯಗಳು ಹಳೆಯ ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಜಾಸ್ತಿ ಇದೆ. ಇಂತಹ ಒಂದು ಅವಕಾಶವನ್ನು ಉಪಯೋಗಿಸಿಕೊಳ್ಳಲು ಹೆಚ್ಚು ಹಣವನ್ನು ಮೈನರ್ ಇರಿಗೇಷನ್‌ಗೆ ಒದಗಿಸಿ ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಂದು ಮೈನರ್ ಇರಿಗೇಷನ್ ವಿಭಾಗದಲ್ಲಿ ಇರುವಂತಹ ಒಂದು ದೊಡ್ಡ ತಾಪ ತ್ರಯ ಎಂದರೆ, ಪ್ರತ್ಯೇಕವಾದ ಇಂಜಿನಿಯರಿಂಗ್ ಸ್ಟಾಫ್ ಇಲ್ಲದಿರುವುದು ಒಬ್ಬ ಮಂತ್ರಿಯ ಕೈಕೆಳಗೆ ಈ ಇಲಾಖೆ ಇರುವುದರಿಂದ ಅವರಿಗೆ ಅಲಾಹಿದಿಯಿಂದ ಸಿಬ್ಬಂದಿಯನ್ನು ಕೊಡಬೇಕು ಮತ್ತು ಅವರಿಗೆ ತಾಂತ್ರಿಕ ಹತೋಟಿ ಇರುವುದು ಆವಶ್ಯಕ. ಈ ಮೈನರ್ ಇರಿಗೇಷನ್ ಕೆಲಸಗಳು ಜರೂರಾಗಿ ಆಗ ಬೇಕಾದರೆ ಇದು ಅತ್ಯಾವಶ್ಯಕ ಎಂದು ತಮ್ಮಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ತಾವು ಅಧಿಕಾರಕ್ಕೆ ಬಂದಮೇಲೆ ಸೆಕ್ರೆಟೇರಿಯಟ್ ಮಟ್ಟದಲ್ಲಿ ಒಂದು ವೈಶಿಷ್ಟ್ಯವನ್ನು ಮಾಡಿದ್ದೀರಿ. ಅದೇನೆಂದರೆ, ಐ.ಎ.ಎಸ್. ಅಧಿಕಾರಿಗಳನ್ನು ಸೂಪರ್ ಸ್ಕೇಲ್ ಆಫೀಸರ್ ಎಂದು ಮಾಡಿ ಎಲ್ಲ ಇಲಾಖೆಗಳಲ್ಲಿಯೂ ಕಾರ್ಯದರ್ಶಿ ಗಳನ್ನಾಗಿ ನೇಮಕ ಮಾಡಿದ್ದೀರಿ. ತಮ್ಮ ಇಲಾಖೆ ತಾಂತ್ರಿಕ ವಿಭಾಗಕ್ಕೆ ಸೇರಿದ್ದರೂ ಸಹ ಐ.ಎ.ಎಸ್. ಅಧಿಕಾರಿಯನ್ನೇ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದ್ದೀರಿ. ಅದೇ ಮಿರ್ಜಾ ಮತ್ತು ಸರ್.ಎಂ ವಿಶ್ವೇಶ್ವರಯ್ಯನವರು ಈ ರಾಜ್ಯದಲ್ಲಿ ದಿವಾನರಾಗಿದ್ದ ಕಾಲದಲ್ಲಿ ಐ.ಎ.ಎಸ್ ಅದವರೇ ಈ ಇಲಾಖೆಗೆ ಕಾರ್ಯದರ್ಶಿಯಾಗಿರಲಿಲ್ಲವೆಂಬ ಅರಿವು ನನಗೆ ಇದೆ. ಈ ಐ.ಎ.ಎಸ್ ಅಧಿಕಾರಿಗಳಿಗೆ ತಾಂತ್ರಿಕ ಜ್ಞಾನ ಅಷ್ಟು ಇರುವುದಿಲ್ಲ. ರೆವಿನ್ಯೂ ಆಡಳಿತವನ್ನು ನಡೆಸಿಕೊಂಡು ಹೋಗತಕ್ಕ ಸಾಮರ್ಥ್ಯ ಅವರಲ್ಲಿರಬಹುದೇ ಹೊರತು ಈ ಇಲಾಖೆಯನ್ನು ನಡೆಸಿಕೊಂಡು ಹೋಗತಕ್ಕ ಸಾಮರ್ಥ್ಯ ಅವರಲ್ಲಿರುವುದಿಲ್ಲ. ಈ ಅಂಶ ವನ್ನು ಹೇಳುವಾಗ ನಾನು ವೈಯಕ್ತಿಕವಾಗಿ ಯಾವ ಅಧಿಕಾರಿಯನ್ನೇ ಆಗಲಿ ಟೀಕೆ ಮಾಡುತ್ತಿಲ್ಲ ; ಸಂಬಳ ಮತ್ತು ಅಂತಸ್ತಿನಲ್ಲಿ ಚೀಫ್ ಇಂಜಿನಿಯರ್ ಅವರು ತಮಗಿಂತ ಕಡಿಮೆ ಇದ್ದಾರೆ ಎಂಬ ಭಾವನೆಯಿಂದ ಅವರಿಂದ ಹೋದಂತಹ ಟೆಕ್ನಿಕಲ್ ಪ್ರಪೋಸಲ್‌ನ್ನು ಜಾಗ್ರತೆ ಇತ್ಯರ್ಥ ಮಾಡುತ್ತಿಲ್ಲ. ಮತ್ತು ಚೀಫ್ ಇಂಜಿನಿಯರ್ ಅವರಿಂದ ಬಂದಂಥ ಫೈಲ್‌ಗಳನ್ನು ಸಹ ಜಾಗ್ರತೆ ಇತ್ಯರ್ಥ ಮಾಡುತ್ತಿಲ್ಲ. ಮತ್ತು ಚೀಫ್ ಇಂಜಿನಿಯರ್ ಅವರಿಂದ ಬಂದಂಥ ಫೈಲ್‌ಗಳನ್ನು ಸಹ ಜಾಗ್ರತೆ ಇತ್ಯರ್ಥ ಮಾಡುತ್ತಿಲ್ಲ ; ಈ ರೀತಿ ಅವರನ್ನು ಸಕಾಲದಲ್ಲಿ ಸಂಪರ್ಕ ಮಾಡಿ ಇತ್ಯರ್ಥ ಮಾಡದಿರುವುದರಿಂದ ಎಸ್ಟಿಮೇಟ್‌ಗಳ ಅಂತರ ವರ್ಷೇ ವರ್ಷೇ ಹೆಚ್ಚಾಗುತ್ತಾ ಹೋಗುತ್ತಿದೆ, ಈ ಹೆಚ್ಚಿನ ಹೊರೆಯನ್ನು ಕರ್ನಾಟಕದ ಪ್ರಜೆಗಳು ಹೊರಬೇಕಾ ಗುತ್ತದೆ. ಈ ಕಾರಣದಿಂದ ತಾಂತ್ರಿಕ ಪರಿಜ್ಞಾನವಿರುವವರನ್ನು ಮತ್ತು ಜರೂರಾಗಿ ಕೆಲಸಗಳನ್ನು ಮಾಡುವವರನ್ನು ಈ ಇಲಾಖೆಗೆ ನೇಮಕ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ಮುಖ್ಯವಾದ ಸಂಗತಿಯೇನೆಂದರೆ, ಇಂದು ಪೆಟ್ರೋಲಿನ ಬೆಲೆ ದುಬಾರಿಯಾಗಿದೆ. ಆದರೂ ಕೂಡ ತಮ್ಮ ಇಲಾಖೆಯಲ್ಲಿ ಕೆಲವು ರಸ್ತೆ, ಕೆರೆ ಮುಂತಾದ ಕಾಮಗಾರಿ ಕೆಲಸಗಳನ್ನು ಮಾಡಿಸುವಾಗ ಮೆಷಿನರಿಯ ಉಪಯೋಗ ಇಲ್ಲದೆ ಮಾಡುವುದಕ್ಕೆ ಸಾಧ್ಯವಿಲ್ಲ. ಮನುಷ್ಯನ ಶಕ್ತಿ ಕುಂದಿರುವಾಗ, ತಿನ್ನುವುದಕ್ಕೆ ಸಾಕಷ್ಟು ಆಹಾರ ಇಲ್ಲದಿರುವಾಗ, ಈ ತಾಂತ್ರಿಕ ಯುಗದಲ್ಲಿ ಮೆಷಿನರಿಗಳನ್ನು ಉಪಯೋಗಿಸುವುದು

ಅತ್ಯಾವಶ್ಯಕವಾಗಿದೆ. ಇದರಿಂದ ಕೆಲಸವೂ ಜಾಗ್ರತೆ ಜಾಗ್ರತೆಯೂಗುತ್ತದೆ. ಮತ್ತು ಹಣದ ಕೊರತೆಯೂ ಕಡಿಮೆಯಾಗುತ್ತದೆ. ಆದರೆ ಇಂದು ತಮಗೆ ಗೊತ್ತಿರುವಂತೆ ಪ್ರತಿಯೊಂದು ಡಿವಿಜನ್‌ಗಳಲ್ಲಿಯೂ ಅನೇಕ ಮೆಷಿನರಿಗಳು ಕೆಟ್ಟು ನಿಂತಿವೆ. ತಮ್ಮ ಕಾಲದಲ್ಲಿ ಇವುಗಳನ್ನು ಕ್ಷಿಪ್ರದಲ್ಲಿಯೇ ರಿಪೇರಿ ಮಾಡಿ ಸುತ್ತೀರಿ, ಅವುಗಳಿಗೆ ಹಿಡಿದಿರುವ ಕೊಳೆ ಮತ್ತು ಕಿಲಬನ್ನು ತೆಗೆಸಿ ರಿಪೇರಿ ಮಾಡಿಸುತ್ತೀರಿ, ಇಲ್ಲವೇ ಅವುಗಳನ್ನೆಲ್ಲಾ ವಿಲೇ ಮಾಡಿ ಹೊಸ ಮೆಷಿನರಿಗಳನ್ನು ತರಿಸುತ್ತೀರಿ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಅವುಗಳ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ ಎಂದು ತಾವು ಹೇಳಬಹುದು ; ಆದರೆ ನಾನು ರೈತನ ಮಗನಾಗಿ ಹೇಳುತ್ತೇನೆ, ಏನೆಂದರೆ ಇಂದು ರೈತರಲ್ಲಿ ಸಂಘಟನೆ ಇಲ್ಲದಿರುವ ಕಾರಣ ಅವರಿಗೆ ಸಾಕಷ್ಟು ಅನ್ಯಾಯ ಮಾಡಿದ್ದೀರಿ ಎಂದು. ಮುಖ್ಯವಾಗಿ ನಾವು ಓಡಾಡುವ ರಸ್ತೆಗಳನ್ನು ರಿಪೇರಿ ಮಾಡಿಸುವುದು, ಮಕ್ಕಳು ಓದುವುದಕ್ಕೆ ಪಾಠಶಾಲೆಗಳನ್ನು ಕಟ್ಟಿಸುವುದು, ಮತ್ತು ಭೂಮಿಗೆ ನೀರನ್ನು ಒದಗಿಸುವುದು, ಇವುಗಳ ಕಡೆಗೆ ಸರ್ಕಾರ ಹೆಚ್ಚು ಗಮನ ಕೊಟ್ಟು ಜನರ ಕಲ್ಯಾಣ ವನ್ನು ಮಾಡಬೇಕಾಗಿತ್ತು. ಆದರೆ ಇವುಗಳ ಕಡೆಗೆ ಗಮನ ಕೊಟ್ಟಿಲ್ಲ ಮಾನ್ಯ ಕೆಂಚೇಗೌಡರು ಹೇಳಿದಂತೆ ಇಂದು ಅನೇಕ ಸಂಘಸಂಸ್ಥೆಗಳು ಸರ್ಕಾರದ ಮೇಲೆ ಧಿಕ್ಕಾರ ಹಾಕುವುದರಿಂದ ಅವರಿಗೆ ಹೆಚ್ಚಿಗೆ ಬೋನಸ್ ಕೊಡುತ್ತಿದ್ದೀರಿ ಮತ್ತು ಸಂಬಳವನ್ನು ಹೆಚ್ಚು ಮಾಡುತ್ತಿದ್ದೀರಿ. ಆದರೆ ರೈತವರ್ಗದಲ್ಲಿ ಸಂಘಟನೆ ಇಲ್ಲದಿರುವ ಕಾರಣ ಅವರನ್ನು ಪರೋಕ್ಷವಾಗಿ ಶೋಷಣೆ ಮಾಡುತ್ತಿದ್ದೀರಿ ಮಾನ್ಯ ಮಂತ್ರಿಗಳಿಗೆ ಒಂದು ಕಿವಿ ಮಾತನ್ನು ಹೇಳುತ್ತೇನೆ, ಏನೆಂದರೆ ಈ ಒಂದು ಶೋಷಣೆ ಮಾಡುತ್ತೀರಿ ಮಾನ್ಯ ಮಂತ್ರಿ ಗಳಿಗೆ ಒಂದು ಕಿವಿ ಮಾತನ್ನು ಹೇಳುತ್ತೇನೆ, ಏನೆಂದರೆ ಈ ಒಂದು ಶೋಷಣೆ ಬಹಳ ಕಾಲ ನಡೆಯುವುದಿಲ್ಲ; ಏಕೆಂದರೆ ರೈತರು ಈಗಾಗಲೇ ಸಾಕಷ್ಟು ಜಿಗುಪ್ಸೆ ಹೊಂದಿದ್ದಾರೆ. ಸರ್ಕಾರದ ದಿನಚರಿ ಕೆಲಸಗಳು ಇದೇ ರೀತಿ ಮುಂದುವರೆದರೆ ಒಂದು ದಿವಸ ರೈತ ಕೋಪಮಾಡಿಕೊಳ್ಳಬಹುದು. ಆ ರೀತಿ ಕೋಪ ಮಾಡಿ ಕೊಂಡಾಗ ಎಂತಹವರೂ ಸಹ ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ತಾವು ಅಧಿಕಾರಕ್ಕೆ ಬರುವಾಗ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವುದಾಗಿ ಹೇಳಿದಿರಿ ; ಆದರೆ ತಾವು ಇಂದು ಹೊಸದಾಗಿ ಭ್ರಷ್ಟಾಚಾರವನ್ನು ನಿರ್ಮಾಣ ಮಾಡಿದ್ದೀರಿ. ತಮ್ಮ ಅರಿವಿಗೆ ಒಂದು ಮಾತನ್ನು ಹೇಳುತ್ತೇನೆ ; ಏನೆಂದರೆ ಶಾಸಕರ ಭವನ ಮಾನ್ಯ ಅಧ್ಯಕ್ಷರ ಅಧೀನದಲ್ಲಿದ್ದಾಗ ನಾವುಗಳು ಯಾರೂ ವಿಷ ಕುಡಿದು ಸತ್ತಿರಲಿಲ್ಲ. ಆದರೂ ಸಹ ದಕ್ಷತೆಯಿಂದ, ಬಹಳ ಚೆನ್ನಾಗಿ ಲಾಭಕರವಾಗಿ ಮತ್ತು ಒಂದು ಸಂಯಮದಿಂದ ನಡೆಸುತ್ತಾರೆ ಎಂದು ಉದಾರ ಭಾವನೆಯಿಂದ ಲೋಕೋಪಯೋಗ ಇಲಾಖೆಯ ವಶಕ್ಕೆ ಕೊಟ್ಟರು.

5-30 P.M.

ಅಲ್ಲಿ ಏನಾಯಿತು ಬಹಳ ತಳಕಾಯಿತು, ಈ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ೩ ಜನ ಇಂಜ ನಿಯರುಗಳ ಬಗ್ಗೆ ನಾವು ಇಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದೇವೆ. ಬೆಂಗಳೂರಿನ ಬಿಲ್ಡಿಂಗ್ ಡಿವಿಜನ್ನಿನ ಸಬ್‌ಡಿವಿಜನ್ನಿನ ಸಬ್‌ಡಿವಿಜನ್ ನಂ. ೧ ಮತ್ತು ೪ ರಲ್ಲಿರತಕ್ಕ ಇಬ್ಬರು ಅಸಿಸ್ಟೆಂಟ್ ಇಂಜಿನಿ ಯರುಗಳು ಮತ್ತು ಒಬ್ಬರು ಎಗ್ಸಿಕ್ಯೂಟೀವ್ ಇಂಜಿನಿಯರು ಇವರ ಮೇಲೆ ಗುರುತರವಾದ ಅಪಾದನೆ ಇದೆ. ಅವರ ಬಗ್ಗೆ ಕೆಲವು ವಿಷಯಗಳನು ನಾನು ತಮ್ಮ ಅವಗಾಹನೆಗೆ ತರುತ್ತೇನೆ. ಲೆಜಿಸ್ಲೇಟರ್ ಹೋಂನಲ್ಲಿ ಲಕ್ಷಾಂತರ ಗಟ್ಟಲೆ ಹಣ ದುರುಪಯೋಗವಾಗಿದೆ. ಲುಕ್ಸಾನಾಗಿದೆ. ಇದಕ್ಕೆ ಯಾರು ಜವಾಬ್ದಾರರು ? ಚಾಪೆಯ ಮೇಲೆ ಮಾಗಿಕೊಳ್ಳತಕ್ಕ ನಮಗೆ ಲೆಜಿಸ್ಲೇಟರ್ ಹೋಮಿನಲ್ಲಿ ಈ ಸ್ಕ್ರೀನು ಗಳು ಮತ್ತು ಸೋಫಾಗಳೆಲ್ಲಾ ಏತಕ್ಕೆ ? ಈ ಸೋಫಾಗಳೆಲ್ಲಾ ಏತಕ್ಕೆ ? ಈ ಸೋಫಾಗಳ ಮೇಲೆ ಮಿಂಚುವ ಬಟ್ಟೆ ಬೇರೆ ಹಾಕಿದ್ದಾರೆ. ಮೊದಲು ಇದ್ದಂತಹ ರಗ್ಗುಗಳೇ ಚೆನ್ನಾಗಿತ್ತು. ಈಗ ಅವುಗಳನ್ನು ಬದಲಾಯಿಸಿ ಹೊಸರಗ್ಗುಗಳನ್ನು ಹಾಕಿದ್ದಾರೆ ಇದಕ್ಕೆ ಕಾರಣವೇನು ? ಯಾರು ಯಾರು ಸೇರಿ ಇದರಲ್ಲಿ ಹಣ ಲಪಟಾಯಿಸಿದ್ದಾರೆ ! ಇದಕ್ಕೆ ಒಂದು ಇತಿಮಿತಿ ಇಲ್ಲವೇ ? ಆದ್ದರಿಂದ ಈ ಲೆಜಿಸ್ಲೇಟರ್ಸ್ ಹೋಮಿನಲ್ಲಿ ನಡೆದಿರತಕ್ಕ ಕೆಲಸಗಳನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಎಲೆಕ್ಟ್ರಿಕಲ್ ಸಬ್ ಡಿವಿಜನ್‌ಗೆ ಸೇರಿದ ಹಾಗೆ ಅವರು ಕೆಲವು ಸಾಮಾನುಗಳನ್ನು ತರಿಸುತ್ತಾರೆ. ಅದಕ್ಕೆ ಒಂದು ಫಾರಂ ಉಪಯೋಗಿಸುತ್ತಾರೆ. ನಂಬರ್ ೪ ಸಬ್‌ಡಿವಿಜನ್‌ನಲ್ಲಿ ಶ್ರೀ ನಾರಾಯಣ್ ಎನ್ನುವವರು ಅಸಿಸ್ಟೆಂಟ್ ಇಂಜನಿಯರ್ ಇದ್ದಾರೆ. ಅವರು ಲೆಜಿಸ್ಲೇಟರ್ಸ್ ಹೋಂ ಮತ್ತು ಮಂತ್ರಿಗಳ ಗೃಹಗಳು ಇವುಗಳೆಲ್ಲವುಗಳ ವಹಿವಾಟವನ್ನು ನಡೆಸುತ್ತಾರೆ. ಅವರು ತಮಗೆ ಬೇಕಾದ ಹಾಗೆ ಬಿಲ್ಲುಗಳನ್ನು ಬರೆಸಿಕೊಂಡು ಬಂದಿದ್ದಾರೆ. ಲಕ್ಷಗಟ್ಟಲೇ ಹಣವನ್ನು ದುರುಪಯೋಗ ಮಾಡಿದ್ದಾರೆ. ಮಾನ್ಯ ಮಂತ್ರಿಗಳಾದ ಹುಚ್ಚಮಾಸ್ತಿಗೌಡರು ಮೊದಲು ಇದ್ದ ಮನೆಯನ್ನು ಬಿಟ್ಟು ಬೇರೆಮನೆಗೆ ಹೋದರು. ಅವರು ಮುಮುಕ್ಷರು, ಅವರಿಗೆ ಅಂಥಾ ಲಗ್ಜುರಿ ಇಷ್ಟವಿಲ್ಲ. ಆದರೂ ಸಹ ಅವರು ಮೊದಲು ಇದ್ದ ಮನೆಯನ್ನು ಬಿಟ್ಟು ಬೇರೆ ಮನೆಗೆ ಹೋಗುವ ವೇಳೆಗೆ ಆ ಮನೆಯಲ್ಲಿ ಏನೇನೋ ಅಲಂಕಾರಗಳನ್ನು ಮಾಡಿದ್ದಾರಂತೆ. ಒಂದು ಹೊಸ ವಾತಾವರಣವನು ಸೃಷ್ಟಿ ಮಾಡಿದ್ದಾರಂತೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಕರ್ನಾಟಕ ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ. ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಸರ್ಕಾರದಲ್ಲಿ ಹಣವಿಲ್ಲ ಎನ್ನುವ ಪರಿಸ್ಥಿತಿಯಲ್ಲೆ ಸರ್ಕಾರದವರು ಈ ಪರಿಸ್ಥಿತಿಗೆ ಹೋಗಬಾರದು.

ನಾಲ್ಕನೇ ಸಬ್‌ಡಿವಿಜನ್ ಅಸಿಸ್ಟೆಂಟ್ ಇಂಜನಿಯರ್ ಬಗ್ಗೆ ಇನ್ನೊಂದು ವಿಷಯವನ್ನು ಹೇಳುತ್ತೇನೆ ಲಾಲ್‌ಬಾಗ್‌ನಲ್ಲಿ ಒಂದು ಕೆರೆ ಇದೆ. ಅಲ್ಲಿ ೮–೯ ಸಾವಿರ ರೂಪಾಯಿಗಳ ಕಾಮಗಾರಿ ನಡೆದಿದೆ, ಅಲ್ಲಿ ಕೆರೆಯಲ್ಲಿ ಮಣ್ಣು ಎತ್ತಿ ಹಾಕುವುದು ಕುರುಚಲುಗಿಡಗಳನ್ನು ಕಡಿದು ಹಾಕುವುದು ಇತ್ಯಾದಿ ಕೆಲಸಗಳನ್ನು ಮಾಡಿದ್ದಾರೆ. ಇದಕ್ಕೆಲ್ಲಾ ಎಷ್ಟು ಹಣ ಖರ್ಚಾಗಬಹುದು ಎಂಬುದನ್ನು ಪ್ರಾಜ್ಞರು ಯೋಚನೆ ಮಾಡಬೇಕು. ಈ ಲಾಲ್‌ಬಾಗ್ ಕೆರೆ ಕಾಮಗಾರಿ ಕೆಲಸಕ್ಕೆ ೮–೧೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಆದಕ್ಕೆ ೮೦ ಸಾವಿರ ರೂಪಾಯಿಗಳ ಚೆಕ್‌ಕೊಟ್ಟಿದ್ದಾರೆ. ಇದನ್ನು ಎನ್‌ಕ್ವೈರಿ ಮಾಡುವುದಕ್ಕೆ ವಿಜಿಲೆನ್ಸ್ ಕಮಿಷನ್ನಿಗೆ ರೆಫರ್ ಮಾಡಿದ್ದರು. ಅದರಲ್ಲಿ ಏನೇನು ನಡೆದಿದೆ ಎನ್ನುವ ತನಿಖೆ ರಿಪೋರ್ಟ್ ಬಂದಿಲ್ಲ. ವಾಯುವೇಗದಲ್ಲಿ ಹೋಗತಕ್ಕ ಮಾನ್ಯ ಚನ್ನಬಸಪ್ಪನವರಿಗೆ ಆ ರಿಪೋರ್ಟನ್ನು ಇನ್ನೂ ತರಿಸುವುದಕ್ಕೆ ಆಗಿಲ್ಲವೇ ? ಇವರು ಯಾರ ಕೃಪಕಟಾಕ್ಷಕ್ಕೆ ಒಳಗಾಗಿದ್ದಾರೆ ಎನ್ನುವ ಶಂಕೆ ಜನತೆಯಲ್ಲಿ ಮಾಡುವುದಿಲ್ಲವೇ ? ಅವರು ಇಂಥಾ ಇಳಿ ವಯಸ್ಸಿನಲ್ಲಿ ಅಂಥಾ ಒಂದು ಶಂಕೆಗೆ ಒಳಗಾಗಬಾರದು ನಮ್ಮ ತಂದೆಯವರ ಜೊತೆಯಲ್ಲಿ ನಾನು ಅವರ ಹತ್ತಿರ ಹೋಗುತ್ತಿದ್ದೆ. ಅವರು ಯಾವ ಲಂಚಪರತ್ತುಗಳಿಗೂ ಆಸೆ ಪಡತಕ್ಕ ವ್ಯಕ್ತಿ ಅಲ್ಲ ಎಂದು ನಾನು ಅರಿತುಕೊಂಡಿದ್ದೇನೆ. ಸಿಮೆಂಟ್ ಕಬ್ಬಿಣ ಹೊಡೆದುಕೊಂಡು ಹೋಗಿ ಅದರಲ್ಲಿ ಮನೆಕಟ್ಟಿಸಿಕೊಳ್ಳತಕ್ಕ ವ್ಯಕ್ತಿ ಅವರಲ್ಲ ಎಂದು ನಾನು ಭಾವಿಸುತ್ತೇನೆ. ಆದರೆ ಅವರ ಹತೋಟಿಯಲ್ಲಿರತಕ್ಕ ಅಧಿಕಾರಿಗಳು ದುರ್ವ್ಯವಹಾರಕ್ಕೆ ಹೋದಾಗ ಅವರನ್ನು ಶಿಕ್ಷಿಸತಕ್ಕ ಯೋಗ್ಯತೆ ಅವರಿಗೆ ಇಲ್ಲ ಎಂದು ಭಾವಿಸುತ್ತೇನೆ. ಅವರ ಹಿತದಲ್ಲಿ ಇರತಕ್ಕ ಅಧಿಕಾರಿಗಳು ದುರ್ವ್ಯವಹಾರ ಮಾಡುವಾಗ ಅದನ್ನು ಕಂಡು ಕಾಣದ ಹಾಗೆ ಇದ್ದಾರೆ ಆದ್ದರಿಂದ ಅವರು ಆ ಅಪರಾಧಕ್ಕೆ ಒಳಗಾಗಿದ್ದಾರೆ ಎನ್ನುವ ನೋವು ನನಗೆ ಇದೆ. ಅಂಥವರನ್ನು ನಿಷ್ಪಕ್ಷವಾಗಿ ಹಿಡಿದು ಶಿಕ್ಷೆ ಮಾಡುತ್ತಾರೆ, ಒಂದು ವೇಳೆ ಆ ರೀತಿ ಅಪರಾಧ ಮಾಡಿದವರು ಅವರ ಮಗನೇ ಆಗಿದ್ದರೂ ಶಿಕ್ಷೆಯನ್ನು ವಿಧಿಸುತ್ತಾರೆ ಎನ್ನುವ ಪ್ರಖ್ಯಾತಿಯನ್ನು ಪಡೆದಿದ್ದ ವ್ಯಕ್ತಿ ಅವರು.

ಶ್ರೀ ಎಚ್.ಎಂ. ಚನ್ನಬಸಪ್ಪ.—ಕಂಡರೇ ಮಾತ್ರ ಯಾವುದನ್ನೂ ಬಿಡುವುದಿಲ್ಲ,

ಶ್ರೀ ಬಿ. ಪುಟ್ಟಸ್ವಾಮಯ್ಯ.—ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿರತಕ್ಕ ಮೂರು ಜನ ಇಂಜಿನಿಯರಂಗಳು ತಮ್ಮ ಮಡದಿಯರನ್ನು ಅಪಾಯಕ್ಕೆ ಸಿಕ್ಕಿಸಿದ್ದಾರೆ. ಪಾಪ ಅವರು ಮದುವೆ ಆಗಿ ಗಂಡನ ಮನೆಗೆ ಬಂದು ಮನೆಯಲ್ಲಿ ಎಲ್ಲರಿಗೂ ಸುಖಸಂತೋಷವನ್ನುಂಟು ಮಾಡಿ ಕಲ್ಯಾಣವನ್ನು ಮಾಡಬೇಕು ಎಂದು ಬಂದರೆ ಅಂಥವರನ್ನು ಈ ಮೂರು ಜನ ಇಂಜಿನಿಯರುಗಳು ಅಪಾಯಕ್ಕೆ ಸಿಕ್ಕಿಸಿದ್ದಾರೆ. ಬೆಂಗಳೂರು ಸಬ್‌ಡಿವಿಜನ್ ನಂಬರ್ ೧ ಮತ್ತು ಸಬ್ ಡಿವಿಜನ್ ೪ ರಲ್ಲಿರತಕ್ಕ ಇಬ್ಬರು ಅಸಿಸ್ಟೆಂಟ್ ಇಂಜನಿಯರುಗಳು ಮತ್ತು ಒಬ್ಬರು ಎಗ್ಸಿಕ್ಯುಟೀವ್ ಇಂಜನಿಯರುಗಳ ಧರ್ಮ ಪತ್ನಿಯರು ಬಂಡವಾಳವನ್ನು ಹೂಡಿ ಸದಾಶಿವನಗರದಲ್ಲಿ ಒಂದು ನ್ಯಾಯಬೆಲೆಯ ಅಂಗಡಿಯನ್ನು ನಡೆಸುತ್ತಿದ್ದಾರೆ ಎಂದು ಗೊತ್ತಾಗಿದೆ.

ಅಧ್ಯಕ್ಷರು.—ಅವರು ನ್ಯಾಯ ಬೆಲೆಯ ಅಂಗಡಿಯನ್ನು ತೆಗೆದಿರುವುದರಲ್ಲಿ ತಪ್ಪು ಏನಿದೆ ? ಹೆಣ್ಣುಮಕ್ಕಳು ಸೇರಿಕೊಂಡು ನ್ಯಾಯಬೆಲೆಯ ಅಂಗಡಿಯನ್ನಿಟ್ಟು ಎಲ್ಲರಿಗೂ ಅನುಕೂಲವಾಗುವ ಕೆಲಸ ಮಾಡಿದ್ದಾರೆ. ಅದರಲ್ಲಿ ತಪ್ಪು ಏನಿದೆ. ಹೆಣ್ಣು ಮಕ್ಕಳ ವಿಚಾರದಲ್ಲಿ ಈ ರೀತಿ ಹೇಳುವುದು ಸರಿಯಲ್ಲ

ಶ್ರೀ ಎಚ್ ಡಿ. ದೇವೇಗೌಡ.—ಆಫೀಸರು ಪ್ರತೀವರ್ಷ ಅಸೆಟ್ಸ್ ಅಂಡ್ ಲಯಬಿಲಿಟೀಸ್ ಸ್ಟೇಟ್‌ಮೆಂಟ್ ಕೊಡುತ್ತಾರೆ. ಅವರು ಅವರ ಹೆಂಡತಿಯರ ಹೆಸರಿನಲ್ಲಿ ಆಸ್ತಿಯನ್ನು ಮಾಡಿದ್ದರೆ ಅದನ್ನೂ ಸ್ಟೇಟ್‌ಮೆಂಟ್‌ನಲ್ಲಿ ಕೊಡಬೇಕಾಗುತ್ತದೆ. ಆದ್ದರಿಂದ ಅವರ ಆಸ್ತಿಪಾಸ್ತಿಗಳ ಬಗ್ಗೆ ತನಿಖೆಯಾಗಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾಯಿ ನನಗೆ ತಾಯಂದಿರ ಬಗ್ಗೆ ಅಪಾರಗೌರವ ಇದೆ ಆ ಇಂಜನಿಯರುಗಳು ಲಂಚ ಹೊಡೆದ ದುಡ್ಡಿನಲ್ಲಿ ಬಂಗಲೆಗಳನ್ನು ಕಟ್ಟಿಸಿದ್ದಾರೆ. ಸಾವಿರಾರು ಜನ ಹೆಣ್ಣುಮಕ್ಕಳಿದ್ದಾರೆ. ಎಲ್ಲರೂ ಸೇರಿ ೧೦ ಸಾವಿರ ರೂಪಾಯಿ ಬಂಡವಾಳ ಹಾಕಿ ಕೋ ಆಪರೇಟೀವ ಬೇಸೀಸ್ ಮೇಲೆ ಒಂದು ಸೊಸೈಟಿಯನ್ನು ತೆಗೆದರೆ ನನಗೆ ತುಂಬಾ ಸಂತೋಷವಾಗುತ್ತದೆ. ನಾನು ಹೆಣ್ಣು ಮಕ್ಕಳ ಬಗ್ಗೆ ಎಷ್ಟರಮಟ್ಟಿನ ಅಭಿಮಾನವನ್ನು ಇಟ್ಟಿದೇನೆ ಎಂದರೆ ಪ್ರಾಯಶಃ ಈ ಕರ್ನಾಟಕ ಉಳಿಯಬೇಕಾದರೆ ಹೆಣ್ಣುಮಕ್ಕಳು ಈ ರಾಜ್ಯದ ಆಡಳಿತವನ್ನು ನಡೆಸಬೇಕು. ಈಗ ಆಡಳಿತವನ್ನು ನಡೆಸತಕ್ಕವರು ಅವರಿಗೆ

ಆಡಳಿತವನ್ನು ವಹಿಸಿಕೊಡಬೇಕು. ಹೆಣ್ಣುಮಕ್ಕಳಾದರೂ ದೇಶದ ಆಡಳಿತವನ್ನು ನಡೆಸಿದರೆ ದೇಶಕ್ಕೆ ಕಲ್ಯಾಣವುಂಟಾಗುತ್ತದೆ ಎಂದು ನಾನು ಧೈರ್ಯವಾಗಿ ಹೇಳುತ್ತೇನೆ.

ನಾನು ಈಗಾಗಲೇ ಹೇಳಿದ ೩ ಜನ ಇಂಜಿನಿಯರುಗಳ ಆಸ್ತಿಪಾಸ್ತಿಗಳ ವಿವರವನ್ನು ಮಾನ್ಯ ಮಂತ್ರಿಗಳು ಈ ಚರ್ಚೆಗೆ ಉತ್ತರವನ್ನು ಕೊಡುವಾಗ ಒದಗಿಸಬೇಕು. ಆ ಮೂರು ಜನ ಇಂಜಿನಿಯರುಗಳು ಅವರ ಹೆಸರಿನಲ್ಲಿ, ಅವರ ಧರ್ಮಪತ್ನಿಯವರ ಹೆಸರಿನಲ್ಲಿ ಅವರ ಮಕ್ಕಳ ಹೆಸರಿನಲ್ಲಿ ಇರತಕ್ಕ ಆಸ್ತಿಪಾಸ್ತಿಗಳ ವಿವರಗಳನ್ನು ಒದಗಿಸಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಡಿವಿಜನ್ ನಂಬರ್ ೪ ರಲ್ಲಿ ಇರತಕ್ಕ ಅಸಿಸ್ಟೆಂಟ್ ಇಂಜನಿಯರು ಶ್ರೀ ಪೋನ್ ನಾರಾಯಣ್ ಎನ್ನುವವರು ನಾಯಂಡರಹಳ್ಳಿಯ ಹಳ್ಳಿಯ ಹತ್ತಿರ ಒಂದು ಎಸ್ಟೇಟನ್ನು ನಡೆಸುತ್ತಿದ್ದಾರೆ ಎಂದು ಗೊತ್ತಾಗಿದೆ. ಬಡಬೋರೆಗೌಡನು ಕಟ್ಟಿದ ಕಂದಾಯದಿಂದ ಆ ಇಂಜನಿಯವರು ದ್ರಾಕ್ಷಿ ಬೆಳೆಯನ್ನು ಮತ್ತು ತೆಂಗಿನ ಗಿಡವನ್ನು ಬೆಳೆಸುತ್ತಿದ್ದಾರೆ ಎಂದು ಗೊತ್ತಾಗಿದೆ. ಅವರ ಎಸ್ಟೇಟಿನಲ್ಲಿ ಕೆಲಸಕಾರ್ಯಗಳನ್ನು ಮಾಡುವವರು ಯಾರು ಎಂಬುದನ್ನು ಮಾನ್ಯ ಮಂತ್ರಿಗಳು ವಿಚಾರಣೆ ಮಾಡಬೇಕು. ಇಂಜನಿಯರುಗಳಲ್ಲಿ ಎಸ್ಟೇಟ್ ಮಾಡಿರುವವರು ಬಹಳ ಜನರಿದ್ದಾರೆ. ತಾವು ಖಾಸಗಿಯಾಗಿ ಅಥವಾ ಅಧಿಕೃತವಾಗಿ ಬನ್ನಿ, ಯಾವ ರೀತಿಯಲ್ಲಿ ಇಂಜನಿಯರ್ಸ್ ಎಸ್ಟೇಟು ಮಾಡಿದ್ದಾರೆಂಬುದನ್ನು ನಾನು ನಿಮಗೆ ತೋರಿಸಿ ಕೊಡುತ್ತೇನೆ. ಅವೆಲ್ಲವೂ ನಾವು ತಿರುಗಾಡುವ ದಾರಿಯಲ್ಲಿಯೇ ಇದೆ. ನಾನು ಬೇಕಾದರೆ ತೋರಿಸುತ್ತೇನೆ. ವ್ಯವಸಾಯ ಮಾಡುವ ಮನುಷ್ಯ ಒಂದು ತೆಂಗಿನ ಸಸಿ ನೆಡಬೇಕೆಂದರೆ ಆಲ್ಲಿ ಆಗುವುದಿಲ್ಲ. ಇದರ ಬಗ್ಗೆ ಕೇವಲ ಬೆರಳು ತೋರಿಸುವುದಲ್ಲ. ಅವರ ಸಚ್ಚಾರಿತ್ರ್ಯಗಳನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇಂತಹ ಲಂಚಕೋರತನವನ್ನು ನೀವು ನೋಡಿಕೊಂಡು ಇದ್ದೀರಿ. ಅಧ್ಯಕ್ಷರಾಗಿರುವ ತಮಗೆ ವ್ಯವಸಾಯದ ವಿಷಯ ಚೆನ್ನಾಗಿ ಗೊತ್ತಿದೆ. ವ್ಯವಸಾಯ ಮಾಡಿ ಈ ಬೆಂಗಳೂರಿನಲ್ಲಿ ಒಂದು ದೊಡ್ಡ ಮನೆಯನ್ನು ಕಟ್ಟುವುದಕ್ಕೆ ನಮ್ಮ ರೈತರ ಕೈಲಿ ಆಗುತ್ತದೆಯೋ ಎಂಬುದಾಗಿ ನಾನು ಪ್ರಶ್ನೆ ಮಾಡಬೇಕಾಗಿದೆ. ನೀವು ಬಹಳ ಉತ್ತಮವಾದ ವ್ಯವಸಾಯಗಾರರು. ವ್ಯವಸಾಯಗಾರನಾದವನು ಇವತ್ತಿನ ಒಂದು ಪರಿಸ್ಥಿತಿಯಲ್ಲಿ ಎಷ್ಟು ರಾಗಿ ಭತ್ತವನ್ನು ಮಾಡಿದ್ದಾನೆ, ಸಾಲ ಎಷ್ಟು ಮಾಡಿಕೊಂಡಿದ್ದಾನೆಂಬುದನ್ನು ನೋಡಬೇಕು. ಇಂತಹ ಪರಿಪಾಟದಲ್ಲಿ ರೈತರು ಇರುವಾಗ, ಸಂಬಳ ತೆಗೆದುಕೊಳ್ಳುವ ಮನುಷ್ಯ ಜೀವನ ಮಾಡುವದೇ ಅಸಾಧ್ಯವಾಗಿರುವಾಗ, ಇನ್ನು ಅವನು ಕೂಡಿಡುವುದು ಎಲ್ಲಿ ಬಂತು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ಬೆಂಗಳೂರು ನಗರದಲ್ಲಿಯೇ ಹಗಲು ದರೋಡೆ ಆಯಿತು. ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್ ಕಾಂಪೌಂಡಿನಲ್ಲಿ ಕೆಲವು ಕಟ್ಟಡಗಳು ನಿರ್ಮಾಣವಾದುವು. ಅಲ್ಲಿ ಕಂಬೈನ್ಸ್ ಬೋರ್ಡ್ ಬಿಲ್ಡಿಂಗ್ಸ್ ಎಂಬುದಾಗಿ ಆಯಿತು, ವಾಟರ್ ಸೂಯರೇಜ್ ಬೋರ್ಡ್, ಟ್ರಸ್ಟ್ ಬೋರ್ಡ್, ಎಲೆಕ್ಟ್ರಿಸಿಟಿ ಬೋರ್ಡ್, ಮುಂತಾದ ಇಲಾಖೆಗಳು ಅಲ್ಲಿ ಇವೆ. ಇವಕ್ಕೆ ಒರಿಜಿನಲ್ ಎಸ್ಟಿಮೇಟ್ ಕೇವಲ ೬೦ ಲಕ್ಷ ರೂಪಾಯಿಗಳು ಆಗಿತ್ತು. ಆದರೆ ಪೇಮೆಂಟ್ ೨ ಕೋಟಿ ರೂಪಾಯಿಗಳವರೆಗೆ ಆಗಿದೆ. ಇದಕ್ಕೆ ಯಾರು ಮಂಜೂರಾತಿ ಕೊಟ್ಟರು ? ಕೇವಲ ನಮ್ಮ ಊರಿನಲ್ಲಿ ಒಂದು ಕಡೆ ಕಲ್‌ವರ್ಟ್ ಮಾಡಬೇಕು, ಊರಿಗೆ ಹೋಗುವುದಕ್ಕಾಗುವುದಿಲ್ಲವೆಂದರೆ, ಆದಕ್ಕೆ ಟೆಕ್ನಿಕಲ್ ಸ್ಯಾಂಕ್ಷನ್ ಆಗಬೇಕು, ಅಡ್ಮಿನಿಸ್ಟ್ರೇಷನ್ ಅಪ್ರೂವಲ್ ಬೇಕು ಎಂಬುದಾಗಿ ಹೇಳುತ್ತಾರೆ.

ಶ್ರೀ ಎಚ್.ಎಂ. ಚನ್ನಬಸಪ್ಪ — ಅದು ಕಂಬೈನ್ಸ್ ಬೋರ್ಡ್ ಬಿಲ್ಡಿಂಗ್ಸ್. ಪಿ.ಡಬ್ಲ್ಯೂ.ಡಿ. ಅವರು ಕಟ್ಟಿಸುತ್ತಾ ಇಲ್ಲ. ಅದು ಪಿ.ಡಬ್ಲ್ಯೂ. ಎಸ್.ಎಸ್.ಬಿ ಗೆ ಸಂಬಂಧಪಟ್ಟದು. ಆದರೂ ಸೂಪರ್ ವಿಷನ್ ಯಾರು ಮಾಡಬೇಕು ಎಂಬುದೇ ಈಗ ಬಂದಿರುವ ವಿಚಾರ.

ಶ್ರೀ ಬಿ. ಪುಟ್ಟಸ್ವಾಮಯ್ಯ —ಹಾಗಾದರೆ ಇವರು ಪವರ್‌ಲೆಸ್ ಮಂತ್ರಿಗಳಾಗಿದ್ದಾರೆ. ನನಗೆ ನಿಮ್ಮ ಪವರ ಏನಿದೆಯೆಂಬುದನ್ನು ಅರಿತುಕೊಳ್ಳುವುದೇ ಕಷ್ಟವಾಗಿದೆ. ನಿಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಅಧಿಕಾರಿಗಳಾಗಿರುವವರು ಎಷ್ಟುಮಟ್ಟಿಗೆ ನಿಮ್ಮ ಮೇಲೆಯೇ ಇವತ್ತಿನ ದಿವಸ ಬೀಳುತ್ತಿದ್ದಾರೆಂಬುದನ್ನು ಇವತ್ತಿನದಿವಸ ನಾವು ನೋಡುತ್ತಿದ್ದೇವೆ.

ಶ್ರೀ ಎಚ್.ಎಂ. ಚನ್ನಬಸಪ್ಪ.—ಅದಕ್ಕೂ ಕೊನೆಗಾಲ ಇದೆ. ಬರುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹಿಂದೆ ಮಹಾತ್ಮ ಗಾಂಧಿಯವರನ್ನೇ ಘೋಸ್ಸೆ ಹೊಡೆದಂಥ ಈ ಒಂದು ರಾಜ್ಯದಲ್ಲಿ ನಿಮ್ಮ ಒಂದು ಮಂತ್ರಿಮಂಡಲದಲ್ಲಿ ಲಂಚಕೋರರನ್ನು ನೀವು ಹೇಗೆ ಬಿಟ್ಟಿದ್ದೀರಿ ಎಂದು ನಾನು ಕೇಳುತ್ತೇನೆ ಇದು ಯಾವ ನ್ಯಾಯ ? ನಾನು ಕೊಲೆಪಾತಕನಲ್ಲದಿದ್ದರೂ ರೈತನ ಮಗನಾಗಿ ಸತ್ಯಸಂಧತೆಯಿಂದ ಈ ರಾಜ್ಯದ ಆಡಳಿತ ನಡೆಯಬೇಕು. ಮತ್ತು ಕೆಲಸ ಕಾರ್ಯಗಳು ನ್ಯಾಯವಾಗಿ ನಡೆಯಬೇಕೆಂಬುದಾಗಿ ಆಶೆಯನ್ನು ಇಟ್ಟುಕೊಂಡಿದ್ದೇನೆ. ಆದರೆ ಇಲ್ಲಿ ಒಂದೊಂದು ಬಾಬಿನಲ್ಲಿಯೂ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಲಂಚ ಇದೆ. ಈ ಸಂದರ್ಭದಲ್ಲಿ ನಾನು ಅಧ್ಯಕ್ಷರನ್ನು ಒಂದು ಮಾತು ಕೇಳುತ್ತೇನೆ. ಸರ್ಕಾರದವರನ್ನು ಒಂದು ಪ್ರಶ್ನೆ ಮಾಡುತ್ತೇನೆ. ನಿಮ್ಮ ಈ ಬೆಂಗಳೂರು ಸರ್ಕಲ್ ಸೂಪರಿಂಟೆಂಡಿಗ್ ಇಂಜಿನಿಯರಿಂಗ್ ಅವರಾದ ಮಾನ್ಯ ಶ್ರೀ ಚಿಕ್ಕಣ್ಣ ಅವರು ಎಲ್ಲೋ ಮಹಾಮುನಿಯಾಗಿ ಹುಟ್ಟುವುದಕ್ಕೆ ಬದಲಾಗಿ ಈ ಇಲಾಖೆಗೆ ಏಕೆ ಬಂದರೋ ನನಗೆ ಗೊತ್ತಾಗಲಿಲ್ಲ, ಅವರಿಗೆ ಲಂಚ ತೆಗೆದುಕೊಳ್ಳುವುದಕ್ಕೇ ಬರುವುದಿಲ್ಲ. ಲಂಚ ಹೇಗೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಅಂತವರು ಸಂಖ್ಯೆ ಕೇವಲ ಶೇಕಡ ೨ ಅಥವಾ ೩ರಷ್ಟು ಇರಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂತಹವರು ನಮ್ಮಲ್ಲಿ ಇದ್ದಾರೆ. ನಮ್ಮಲ್ಲಿ ಅಂತಹ ಒಳ್ಳೆಯ ಇಂಜಿನಿಯರುಗಳೂ ಸಹ ಇದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸಾಮಾನ್ಯವಾಗಿ ೧೦೦ ರೂಪಾಯಿಗಳ ಒಂದು ಬಿಲ್ ಆದರೆ ಅದರಲ್ಲಿ ಮೇಸ್ತ್ರಿಗೆ ಶೇಕಡ ೧ರಷ್ಟು, ಸೂಪರ್‌ವೈಸರ್‌ಗೆ ಶೇಕಡ ...ರಷ್ಟು, ಅಸಿಸ್ಟೆಂಟ್ ಇಂಜಿನಿಯರ್‌ಗೆ ಶೇಕಡ ಏಳುಮುಯಷ್ಟು, ಎಗ್ಜಿಕ್ಯುಟೀವ್ ಇಂಜಿನಿಯರ್‌ಗೆ ಶೇಕಡ ಹನೆರಡುವರಯಷ್ಟು, ಈ ಮಧ್ಯೆ ಫುಟ್ ಲಾಯರ್ಸ್‌ಗೆ ಶೇಕಡ ೧೫ರಷ್ಟು—ಈರೀತಿಯಾಗಿ ಹಂಚಿ ಹೋಗುತ್ತದೆ. ೧೯೬೨ರಿಂದೀಚೆಗೆ ಇಂತಹವರ ಸಂಖ್ಯೆ ಬಹಳ ಜಾಸ್ತಿಯಾಗಿದೆ. ಸಾಮಾನ್ಯವಾಗಿ ಮಾನ್ಯ ವಿರೋಧಪಕ್ಷದವರು ಆಕ್ಷೇಪಣೆ ಮಾಡುವುದು ಸಹಜ. ಈ ದೇಶದ ರಕ್ಷಣೆಗೆ ಹಾಗೂ ಈ ದೇಶದ ಟ್ರೆಜರಿಗೆ ನಾವೇ ಪಾರುಪತ್ತೆದಾರರಾಗಿ ನಾವೇ ಬಹಿರಂಗವಾಗಿ ಟ್ರೆಜರಿ ಸೀಲ್ ಒಡೆಯುವುದಕ್ಕೆ ಶುರುಮಾಡಿದರೆ ಇನ್ನು ದೇಶದ ರಕ್ಷಣೆ ಮಾಡುವವರು ಯಾರು ? ಇಲ್ಲಿ ಆಗತಕ್ಕ ಅನ್ಯಾಯವನ್ನು ಯಾರಿಗೆ ಹೇಳಬೇಕು ? ಮಹಾತ್ಮಗಾಂಧಿಯವರ ಹಾಗೂ ಪ್ರಧಾನಿಯವರ ವ್ಯಕ್ತಿತ್ವವನ್ನು ಗೇಲಿಮಾಡುವ ಜನರು ಈಗ ಈ ದೇಶದಲ್ಲಿರುವಾಗ ಹಾಡು ಹಗಲಿನಲ್ಲಿಯೇ ಮಾಡಬಾರದ ಕಾರ್ಯಗಳನ್ನು ಮಾಡುವ ಅದರಲ್ಲಿಯೂ ಅದನ್ನು ಬಹಿರಂಗಮಾಡುವವರು ಈ ಕರ್ನಾಟಕ ರಾಜ್ಯದಲ್ಲಿ ಅನೇಕ ಮಂದಿ ಇದ್ದಾರೆ ಆದ್ದರಿಂದ ಈ ಕರ್ನಾಟಕ ಜನತೆಗೆ ನಾನು ಕೈಜೋಡಿಸಿ ಪ್ರಾರ್ಥನೆ ಮಾಡುತ್ತೇನೆ. ಈ ರೀತಿ ಅನ್ಯಾಯಗಳನ್ನು ಮಾಡುವವರ ಬಗ್ಗೆ ಬಹಿರಂಗವಾಗಿ ವಿಚಾರಣೆಯಾಗುವ ಪ್ರಯತ್ನ ಈ ಕರ್ನಾಟಕದಲ್ಲಿ ಇನ್ನು ಮುಂದೆ ನಡೆಯದಿದ್ದರೆ, ನಿಜವಾಗಿ ಈ ರಾಜ್ಯದಲ್ಲಿ ಯಾರಿಗೂ ಉಳಿಗಾಲವಿಲ್ಲ. ನಮ್ಮ ಮುಂದಿನ ಪೀಳಿಗೆಗೂ ಖಂಡಿತವಾಗಿ ಉಳಿಗಾಲವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅದಕ್ಕಾಗಿ ಯಾವ ಸತ್ಯವಂತ ಮಂತ್ರಿ ನಮ್ಮಲ್ಲಿ ಇದ್ದಾರೆಂಬುದನ್ನು ಇನ್ನು ನಾವು ದುರ್ಬೀನ್ ಹಾಕಿಕೊಂಡು ನೋಡಬೇಕಾಗಿದೆ. ಆದರೆ ಮಾನ್ಯ ಶ್ರೀ ಚನ್ನಬಸಪ್ಪನವರಂತಹ ಮನೆಯಲ್ಲಿ ಹೆಂಗಸರು, ಅಳಿಯ, ಮಕ್ಕಳೇನಾದರೂ ಲಂಚ ತೆಗೆದುಕೊಂಡರೆ, ಅದನ್ನು ನಾನು ಯಾವ ದುರ್ಬೀನಿನಿಂದ ನೋಡಲಿ. ನಾನು ಹೇಳಿದ್ದು ಮಾನ್ಯ ಚನ್ನಬಸಪ್ಪನವರ ಮನೆಯಲ್ಲಿ ಅಲ್ಲ. ಯಾರೇ ಆಗಲಿ ಏನಾದರೂ ಆಪಾದನೆ ಮಾಡಿದರೆ ಅದನ್ನು ರುಜುವಾತು ಮಾಡಬೇಕು. ಕೆಲವರು ತಿರುಪತಿ ವೆಂಕಟರಮಣಸ್ವಾಮಿ ಹೆಸರನ್ನು ಹೇಳಿಕೊಂಡು ಮಾಯ, ಮಾಟ, ಮಂತ್ರ; ತಂತ್ರ ಮಾಡುವುದು ನಡೆಯುತ್ತಿದೆ ಆದರೆ ಮಾನ್ಯ ಶ್ರೀ ದೇವೇಗೌಡರಿಗೆ ಆ ರೀತಿಯಾಗಿ ಮಾಡುವುದಕ್ಕೆ ಬರುವುದಿಲ್ಲ, ಅವನ್ನು ಹಿಂದಿನಿಂದ ಮಾಡುವುದೂ ಅಲ್ಲ. ಆದ್ದರಿಂದ ಇವರಿಗೆ ಯಾರು ಹೆಣ್ಣು ಕೊಡುತ್ತಾರೆ ? ಹೆಣ್ಣು ಕೊಟ್ಟ ಪುಣ್ಯಾತ್ಮರು ಬೇರೆ ಇದ್ದಾರೆ. ಅವರೂ ಅನುಭವಿಸುತ್ತಿದ್ದಾರೆ. ಇವರ ರೂಪು ಮಾತ್ರ ನೋಡಿದರೆ ನಾನೇ ಹೆಣ್ಣಾಗಿದ್ದರೆ ಈ ಜನ್ಮದಲ್ಲಿ ನಾನು ಮದುವೆಯಾಗುತ್ತಾ ಇರಲಿಲ್ಲ. ಇಂಥಾದ್ದಕ್ಕೆ ಇದನ್ನು ಏಕೆ ಹೋಲಿಸುತ್ತಿದ್ದೇನೆಂದರೆ ಇದನ್ನು ನಾನು ಲಘುವಾಗಿ ಹೇಳುತ್ತಾ ಇಲ್ಲ ಪ್ರಾಯಶಃ ಅಲ್ಲ ಇಲ್ಲಿ ಕುಳಿತಿರುವವರಲ್ಲಿ ಕೆಲವರು ನನ್ನ ತಾಯಿ ತಂದೆ ವಯಸ್ಸಿನವರಾಗಿದ್ದಾರೆ. ಆದ್ದರಿಂದ ಈ ರೀತಿಯಾಗಿ ಅನ್ಯಾಯಗಳು ಈ ರಾಜ್ಯದಲ್ಲಿ ನಡೆಯುವುದಕ್ಕೆ ಅವಕಾಶವನ್ನು ಕೊಡದೆ, ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ನಮ್ಮನ್ನು ಇಲ್ಲಿಗೆ ಆರಿಸಿಕಳುಹಿಸಿದಂಥ ಜನರೇ ನಾಳೆ ಕ್ಷಮಾಡುತ್ತಾರೆ. ಆ ಕಡೆಯಲ್ಲಿರುವವರಿಗೆ ಸ್ವಲ್ಪಮಟ್ಟಿಗೆ ಇಕ್ಕಟ್ಟು ಇರುತ್ತದೆ. ತಪ್ಪೆಯಾಗುತ್ತದೆ. ಆದರ ಪಾರ್ಟಿ ಮೀಟಿಂಗುಗಳಲ್ಲಿ ಅವರು ಇದು ಒಗ್ಗ ಚನ್ನಾಗಿ ಮಾತನಾಡುವುದಕ್ಕೆ ಅವಕಾಶವಿರುತ್ತದೆ. ಆ ರೀತಿ ಮಾಡದೇ ಹೋದರೆ ಇದು ಯಾವ ನ್ಯಾಯ ? ಅನೇಕ ಸನ್ನಿವೇಶಗಳಲ್ಲಿ ನಿಮ್ಮ ಇಲಾಖೆಯಲ್ಲಿರುವ ಅನೇಕ ಅಧಿಕಾರಿಗಳು ರಾಜಕಾರಣಿಗಳ ಒತ್ತಡಕ್ಕೆ ಬಲಿಯಾಗಿದ್ದಾರೆ. ಆದ್ದರಿಂದ ಇದನ್ನು ತ್ರಿಕರಣಶುದ್ಧಿಯಿಂದ ವಿಮರ್ಶೆಮಾಡಿ ಮಾನ್ಯ ಶ್ರೀ ದೇವೇಗೌಡರು ಈ ದಿವಸ ಏನು ಆಪಾದನೆ ಮಾಡಿದ್ದಾರೋ ಅದಕ್ಕೆಲ್ಲಾ ವಿಚಾರ ಮಾಡುತ್ತೇನೆಂದು ಹೇಳಿಬಿಡುತ್ತಾರೆ. ಈ ಇಳಿವಯಸ್ಸಿನಲ್ಲಿಯೇ ನೀವು ಪರಿಶುದ್ಧವಾಗಿ ಈ ಇಲಾಖೆಯನ್ನು ಬಿಡಿ. ಏಕೆಂದರೆ ನಿಮ್ಮ ಇಲಾಖೆಯಲ್ಲಿ ಇಂತಹ ಅನ್ಯಾಯಗಳು ಲಂಚಗುಳಿತನಗಳು ವಿಶೇಷವಾಗಿ ನಡೆಯುತ್ತಿವೆ. ನೀವು ಜಾಗ್ರತೆಯಾಗಿ ರಿಟೈರ್ ಆದರೆ ನಿಮ್ಮದು ಒಂದು ಸ್ವಾಚ್ಛ್ಯವನ್ನು ನಾನೇ ಈ ಸರ್ಕಾರ ನಡೆಸಿದ್ದೇ ಆದರೆ ನಂದಿನಾಥಪುರ

ದಲ್ಲಿ ಇಡುತ್ತಿದ್ದೆ. ಮಾನ್ಯ ಶ್ರೀ ದಯಾನಂದಸಾಗರ್ ಅವರು ಹಿಂದೆ ಒಂದು ಮಾತನ್ನು ಹೇಳುತ್ತಿದ್ದರು ಮಾನ್ಯ ಶ್ರೀ ಎಸ್. ನಿಜಲಿಂಗಪ್ಪನವರ ಆಕೃತಿಯನ್ನು ಕಂಚಿನ ಪ್ರತಿಮೆ ಮಾಡಬೇಕೆಂದು ಹೇಳಿದರು ಆದರೆ ನಾನು ಮಾನ್ಯ ಶ್ರೀ ನಿಜಲಿಂಗಪ್ಪನವರ ಹೆಸರನ್ನು ಇಲ್ಲಿ ಹೇಳಿದನೆಂದು ಯಾರೂ ಏನೂ ತಿಳಿಯಬಾರದು. ಆಡಿದಂತೆ ನಡೆಯುವುದು, ನುಡಿದಂತೆ ನಡೆಯುವುದು ನನ್ನ ಧರ್ಮ ಅಂದಮೇಲೆ ನುಡಿದಂತೆ ನಡೆಯುದಿದ್ದರೆ, ನಿಮಗೆ ಇದು ಲಾಯಕ್ಕಲ್ಲ, ನಾವು ಕಾವಸ್ಥೆ ಪಟೇಲ್ ಆಗಬಾರದು, ನೀವು ಪಿ.ಡಬ್ಲ್ಯು.ಡಿ ಮಂತ್ರಿಗಳಾಗಿರುವುದರಿಂದ ಹಳೆಯ ಮೈಸೂರಿನ ಭಾಗದಲ್ಲಿ ಉಳಿದಿರತಕ್ಕ ಎಲ್ಲ ಕೆಲಸಗಳನ್ನೂ ಮರ್ಯಾದೆಯಾಗಿ ಮಾಡುವಂತೆ ಆರ್ಡರನ್ನು ಜಾರಿಮಾಡಿ. ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿ ಎರಡು ವರ್ಷಗಳಾಗಿದ್ದರೂ ಅದಕ್ಕೆ ಒಪ್ಪಿಗೆಯನ್ನು ತೆಗೆದುಕೊಂಡಿದ್ದರೂ ಈ ಸಭೆಗೆ ಅವನ್ನು ಜಾರಿಮಾಡದೆ ಅಗೌರವವನ್ನು ಮಾಡಿದ್ದೀರಿ. ಏಕೆ ಆ ಕಾಮಗಾರಿಗಳನ್ನು ಪ್ರಾರಂಭಮಾಡಲಿಲ್ಲ ? ಈ ಸಭೆಗೆ ಅಗೌರವವಲ್ಲವೆ ? ಯಾವ ರೀತಿಯಲ್ಲಿ ನಮ್ಮ ಹಳೆಯ ಮೈಸೂರಿನ ಭಾಗದ ಸದಸ್ಯರು ಇದನ್ನು ನೋಡಿ ಸಹಿಸಿಕೊಂಡಿದ್ದಾರೋ ನನಗಂತೂ ಅರ್ಥವಾಗಲಿಲ್ಲ ನಿಮ್ಮೆಲ್ಲರ ಸಚ್ಚಾರಿತ್ರವನ್ನು ಈಗಾಗಲೇ ಅನೇಕರು ಬರೆದಿಟ್ಟಿದ್ದಾರೆ ಇನ್ನೂ ಬರೆಯುವವರು ಇದ್ದಾರೆ. ಅಂತಹವರಿಗೆ ನೀವು ಏನೂ ಮಾಡುವುದಕ್ಕಾಗುವುದಿಲ್ಲ. ಈಗ ಅಲ್ಲಿನ ಜನರಿಗೆ ಏನೇನು ಅನ್ಯಾಯವಾಗಿದೆ ಅವನ್ನೆಲ್ಲಾ ನೀವು ವಾಯುವೇಗದಲ್ಲಿ ತೀರ್ಮಾನಿಸಿ ಆ ಕಾರ್ಯಗಳನ್ನು ಕ್ಷಿಪ್ರವಾಗಿ ಪ್ರಾರಂಭ ಮಾಡದಿದ್ದರೆ ವಾಯುದೇವನು ಇರುವ ಕಡೆ ನಿಮ್ಮನ್ನು ಕಳುಹಿಸಬೇಕಾಗುತ್ತದೆಂಬುದಾಗಿ ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಿಜವಾಗಿಯೂ ಈ ಕರ್ನಾಟಕದಲ್ಲಿ ಏನಾದರು ಕಲ್ಯಾಣವಾಗಬೇಕಾದರೆ, ಈ ರಾಜ್ಯದಲ್ಲಿ ಮೈನರ್ ಇರಿಗೇಷನ್ ಕಾಮಗಾರಿಗಳು ಹೆಚ್ಚುಹೆಚ್ಚಾಗಿ ಆಗಬೇಕು

ಇದನ್ನು ಹೀಗೆ ಲೋಪ ಮಾಡುವುದಕ್ಕಾಗುವುದಿಲ್ಲ. ಮೈನರ್ ಇರಿಗೇಷನ್ನಿಗೆ ಹಣವನ್ನು ಬಹಳ ಕಡಿಮೆ ಒದಗಿಸಿದ್ದಾರೆ. ಈ ಹಣವನ್ನು ಇನ್ನೂ ಹೆಚ್ಚು ಒದಗಿಸಬೇಕೆಂದು ಒತ್ತಾಯ ಮಾಡುತ್ತೇನೆ. ನಮ್ಮಲ್ಲಿ ಈಗ ಒಳ್ಳೆಯ ಚೀಫ್ ಇಂಜಿನಿಯರ್ ಇದ್ದಾರೆ. ಸಾರ್ವಜನಿಕ ರಂಗದಲ್ಲಿ ಅವರು ಒಳ್ಳೆಯ ಕೆಲಸಗಳನ್ನು ಮಾಡುತ್ತಿದಾರೆ. ಆದರೆ ಈ ಕರ್ನಾಟಕದಲ್ಲಿ ಇತ್ತೀಚೆಗೆ ಆಡಳಿತದಲ್ಲಿ ಎಲ್ಲಿ ನೋಡಿದರೂ ದುರಾಡಳಿತ, ದುರ್ನೀತಿ ಮತ್ತು ಲಂಚದ ಹಾವಳಿ ಬಹಳ ಜಾಸ್ತಿಯಾಗಿದೆ. ಇದನ್ನು ತಡೆಗಟ್ಟುವುದಕ್ಕೆ ಪುರುಷ ಮಂತ್ರಿಗಳಿಂದ ಇಲ್ಲಿಯವರೆಗೂ ಸಾಧ್ಯವಾಗಲಿಲ್ಲ, ಆದುದರಿಂದ ಈಗ ಇವರೆಲ್ಲರೂ ರಾಜೀನಾಮೆ ಕೊಟ್ಟು ಈ ಮಂತ್ರಿಮಂಡಲವನ್ನು ರಚಿಸಲು ದಕ್ಷತೆಯುಳ್ಳ ಒಬ್ಬ ಹೆಣ್ಣು ಮಗಳಿಗೆ ಆಜಮಾಯಿಷಿ ಮಾಡುವುದಕ್ಕಾದರೂ ಕೆಲವು ಕಾಲದವರೆಗೆ ಬಿಟ್ಟುಕೊಡಬೇಕೆಂದು ಮಾನ್ಯ ದೇವರಾಜ ಅರಸರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನನಗೆ ಅಪಾರ ವಿಶ್ವಾಸವಿದೆ. ನಾನು ಕೊಟ್ಟ ಸಲಹೆಯನ್ನು ಅವರು ಈಡೇರಿಸಿ ರಾಜ್ಯದ ಪ್ರಜೆಗಳಿಗೆ ಒಳ್ಳೆಯದಾಗತಕ್ಕ ಕಾರ್ಯವನ್ನು ಮಾಡುವಂತೆ ಮಾತೆ ಶ್ರೀ ಚಾಮುಂಡೇಶ್ವರಿ ಅವರಿಗೆ ಬುದ್ಧಿಯನ್ನು ಕೊಡಲೆಂದು ಹಾರೈಸುತ್ತೇನೆ. ನಾನು ಎಲ್ಲಿಯೋ ಕೇಳಿದ್ದೆ ಒಬ್ಬ ಮಾನ್ಯ ಲೋಕಸಭೆಯ ಸದಸ್ಯರು ಒಂದು ಪುಸ್ತಕವನ್ನು ಎಚ್ಚೆತ್ತ ಕರ್ನಾಟಕ ಎತ್ತ ಸಾಗುತ್ತಿದೆ. ಎಂದು ಬರೆದಿದ್ದಾರೆ ಎಂದು. ಅದಕ್ಕೆ ಉತ್ತರವಾಗಿ ನಾನು ಹೇಳಬಹುದಾದರೆ ಎಚ್ಚೆತ್ತ ಕರ್ನಾಟಕ ಎತ್ತ ಸಾಗುತ್ತಿದೆ ಎಂದರೆ ಅದು 'ಹೆಂಡದಂಗಡಿಯ ಕಡೆಗೆ, 'ಸೂಳೆಯರ ಮನೆಯ ಕಡೆಗೆ, ಮತ್ತು ಲಂಚಕೋರರ ಮನೆಯ ಕಡೆಗೆ ಸಾಗುತ್ತಿದೆ ಎಂದು ಹೇಳದೆ ವಿಧಿಯಿಲ್ಲ. ಹಿಂದೆ ನಮ್ಮ ಮೈಸೂರಿಗೆ ಇಡೀ ಪ್ರಪಂಚದಲ್ಲೇ ಎಂಥ ಹೆಸರಿತ್ತು ? ಈಗಲೂ ಅಂಥಹ ಉತ್ತಮ ಅಭಿಮಾನ ಮತ್ತು ಒಳ್ಳೆಯ ಹೆಸರನ್ನು ಪಡೆಯುವುದಕ್ಕಾಗುವುದಿಲ್ಲವೇನು ? ಸಾಧ್ಯವಿದ್ದಾಗ್ಯೂ ಕರ್ನಾಟಕದ ಖ್ಯಾತಿಯನ್ನು ಈ ಸರ್ಕಾರ ಹಾಳು ಮಾಡಿದೆ. ಆದರೆ ನಾನು ಕಟ್ಟಕಡೆಯದಾಗಿ ಇಳಿವಯಸ್ಸಿನಲ್ಲಿರತಕ್ಕ ಮಾನ್ಯ ಚನ್ನಬಸಪ್ಪನವರಲ್ಲಿ ಒಂದು ವಿಷಯವನ್ನು ಬಹಳ ಭಕ್ತಿಪೂರ್ವಕವಾಗಿಯೂ ಮತ್ತು ಬಹಳ ಅಭಿಮಾನಪೂರ್ವಕವಾಗಿಯೂ ಕೇಳಿಕೊಳ್ಳುವುದಿಷ್ಟೆ, ಆದರ ಮಾನ್ಯ ಚನ್ನಬಸಪ್ಪನವರಲ್ಲಿ ಒಂದು ವೀಕ್‌ನೆಸ್ ಇದೆ –ಅದೇನೆಂದರೆ ಮಾತೆತ್ತಿದರೆ ಹಾ. ಹೂ, ಎಂದು ಕೈಆಡಿಸುವುದಕ್ಕೆ ಪ್ರಾರಂಭ ಮಾಡುತ್ತಾರೆ, ಅದು ಬೇಡ, ಅವರಿಗಿನ್ನೂ ಆರೋಗ್ಯ ಉತ್ತಮಗೊಂಡಿಲ್ಲ. ಅವರು ತಮ್ಮ ಕೈಲಾಗುವಂತಿದ್ದರೆ ನಮ್ಮ ಕರ್ನಾಟಕದ ಈ ಅನೇಕ ಸಮಸ್ಯೆಗಳನ್ನು ಬಗೆಹರಿಸಬೇಕು ಇಲ್ಲವೆ ಗಂಭೀರವಾಗಿ ರಾಜೀನಾಮೆ ಕೊಟ್ಟು ಹೊರಗೆ ಬರಬೇಕು, ಅಂಥ ಒಂದು ಒಳ್ಳೆಯ ಬುದ್ಧಿಯನ್ನು ಚಾಮುಂಡಾಂಬೆ ಅವರಿಗೆ ಕರುಣಿಸಲೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎ.ವಿ. ಮುನಿಸ್ವಾಮಿ (ಮೂಲೂರು)–ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಶಾಖೆಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳೆಲ್ಲವನ್ನೂ ನಾನು ಸಂಪೂರ್ಣವಾಗಿ ಅನುಮೋದಿಸುತ್ತ ಕೆಲವು ವಿಚಾರಗಳನ್ನು ಮಾನ್ಯ ಸಭೆಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ದೇವೇಗೌಡರು ಈ ಲೋಕೋಪಯೋಗಿ ಇಲಾಖೆಯನ್ನು 'ಪಾಲಿಟೀಷಿಯನ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್, ಎಂದು ಕರೆದಿದ್ದಾರೆ ಅದು ಸರಿಯಲ್ಲ. ಅದನ್ನು ಅತಿ ಶೀಘ್ರದಲ್ಲೇ 'ಪೀಪಲ್ಸ್, ವೆಲ್‌ಫೇರ್ ಡಿಪಾರ್ಟ್‌ಮೆಂಟ್.ಎಂದು ಕರೆಯುವ ಕಾಲ ಹತ್ತಿರಕ್ಕೆ ಬರುತ್ತಿದೆ. ಈ ಇಲಾಖೆಯಿಂದ ಇಡೀ ರಾಜ್ಯದ

(ಶ್ರೀ ಎ. ವಿ. ಮುನಿಸ್ವಾಮಿ)

ಜನತೆಯ ಕಲ್ಯಾಣ ಸಾಧನೆಯಾಗಬೇಕಾಗಿದೆ. ನಮ್ಮ ದೇಶಕ್ಕೆ ಕಲ್ಯಾಣವಾಗಬೇಕಾಗಿದ್ದರೆ ನಮ್ಮಲ್ಲಿರತಕ್ಕ ಆಹಾರದ ಕೊರತೆ ಮೊದಲು ತೊಲಗಬೇಕು. ಹಾಗೆ ಆಹಾರದ ಕೊರತೆ ನೀಗಬೇಕಾಗಿದ್ದರ ರಾಜ್ಯದಲ್ಲಿ ಹೆಚ್ಚು ಹೆಚ್ಚು ನೀರಾವರಿ ಕಾಮಗಾರಿಗಳು ನಡೆಯಬೇಕು. ಆ ನೀರಾವರಿ ಕಾಮಗಾರಿಗಳು ನಮಗೆ ಬೇಗ ಫಲ ಕೊಡುವಂತಾಗಬೇಕಾಗಿದ್ದರೆ ನಮ್ಮ ಲೋಕೋಪಯೋಗಿ ಶಾಖೆಯು ಬಹಳ ಶ್ರಮಪಟ್ಟು ದುಡಿಯಬೇಕಾಗಿದೆ ಹೆಚ್ಚಿನ ಕಲಸಗಳನ್ನು ಸಕಾಲಕ್ಕೆ ಮುಗಿಸಬೇಕು ಅದರಂತೆಯೇ ಈಗ ಕೆಲಸಕಾರ್ಯಗಳು ನಡೆಯುತ್ತಿವೆ ಆದರ ನಮ್ಮಲ್ಲಿ ನಮ್ಮ ಪಾಲಿಸಿಯಲ್ಲಿ ನಾವು ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಗಿದೆ. ರಾಜ್ಯದಲ್ಲಿ ಈಗಾಗಲೇ ಅನೇಕ ಬೃಹತ್ ಪ್ರಮಾಣದ ನೀರಾವರಿ ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದಾರೆ. ಅವುಗಳು ಬೇಗ ಫಲವನ್ನು ಕೊಡಬೇಕಾದರೆ ಅವು ಬೇಗ ಕಾರ್ಯರೂಪಕ್ಕೆ ಬರಬೇಕು ಹಾಗೆ ಕಾರ್ಯರೂಪಕ್ಕೆ ಬರಲು ಅವುಗಳಿಗೆ ಹೆಚ್ಚು ಹಣವನ್ನು ವರ್ಷಂಪ್ರತಿ ಒದಗಿಸಬೇಕು. ಇಲ್ಲವಾದರೆ ನಮ್ಮ ನಿರೀಕ್ಷಣೆಯಂತೆ ಶೀಘ್ರದಲ್ಲಿ ನಿಮಗೆ ಫಲ ದೊರೆಯುವುದಿಲ್ಲ. ಆದುದರಿಂದ ಈ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವಾಗ ಎಲ್ಲಿಲ್ಲಿ ಯಾವುದನ್ನು ಹೇಗೆ ಯಾವ ರೀತಿ ಪ್ರಾರಂಭ ಮಾಡಬೇಕು ಎನ್ನತಕ್ಕ ವಿಚಾರದಲ್ಲಿ ಸ್ವಲ್ಪ ಹೆಚ್ಚಿನ ಪರಿಶೀಲನೆ ಮತ್ತು ಆಲೋಚನೆ ಮಾಡತಕ್ಕ ಅಗತ್ಯವಿದೆ. ನಮ್ಮ ರಾಜ್ಯದಲ್ಲಿ ಮಳೆಯಿಲ್ಲದೆ ಬಹಳ ತೊಂದರೆಯಾಗಿದೆ, ಇಂಥ ಪ್ರದೇಶ ಬಹಳವಾಗಿದೆ. ಇಲ್ಲಿ ಸರ್ಕಾರದವರು ನೀರಾವರಿ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕೆಂದರೆ ಇನ್ನು ಕೆಲವು ಸ್ನೇಹಿತರು ಹೇಳುತ್ತಾರೆ, ಮಲೆನಾಡಿನಲ್ಲಿ ಹೆಚ್ಚು ಮಳೆ ಬರುತ್ತದೆ, ಆದುದರಿಂದ ಅಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡುವುದು ಒಳ್ಳೆಯದು ಎಂದ , ಇನ್ನು ಕೆಲವು ಸ್ನೇಹಿತರು—ಅದು ಸರಿಯ ಲ್ಲ. ಬೈಲು ಸೀಮೆಯಲ್ಲಿ ಮಳೆ ಬರುವುದೇ ಅಪರೂಪ, ಆದುದರಿಂದ ಇಲ್ಲಿ ಬೃಹತ್ ನೀರಾವರಿ ಕಾಮಗಾರಿಗಳನ್ನು ಮಾಡತಕ್ಕ ಪ್ರಶೆ ಇಲ್ಲವಾದ್ದರಿಂದ ಇಲ್ಲಿ ಮೀಡಿಯಂ ಮತ್ತು ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಬೇಕು ಇವು ಶೀಘ್ರದಲ್ಲಿ ಫಲ ಕೊಡುತ್ತವೆಂದು ಹೇಳುತ್ತಾರೆ. ಈಗ ವಾದವಿವಾದಗಳನ್ನು ಕೇಳಿ ಸರ್ಕಾರದವರು ಡೋಲಾಯಮಾನವಾಗಿದ್ದಾರೆ. ಅವರ ಮನಸ್ಸು ತೂಗಾಟದಲ್ಲಿದೆ ಆದರೆ ಅವರು ಇವುಗಳಲ್ಲಿ ಯಾವುದನ್ನು ಮೊದಲು ಮತ್ತು ಯಾವುದನ್ನು ಹಿಂದಾಗಿ ಮಾಡಬೇಕು ಎಂಬುದನ್ನು ನಿರ್ಧಾರ ಮಾಡತಕ್ಕ ಬಗ್ಗೆ ಮತ್ತು ಯಾವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು ಯಾವುದಕ್ಕೆ ಕಡಿಮೆ ಪ್ರಾಶಸ್ತ್ಯ ಕೊಡಬೇಕೆಂಬ ವಿಚಾರದಲ್ಲಿ ನಿರ್ದಿಷ್ಟವಾದ ತೀರ್ಮಾನ ತೆಗೆದುಕೊಳ್ಳದೆ ಕೆಲಸವನ್ನು ಪ್ರಾರಂಭ ಮಾಡಬಾರದು. ಕೆಲವು ಪ್ರದೇಶಗಳಿಗೆ ಸರ್ಕಾರದವರು ಆರು ಸಾವಿರ ಕೋಟಿ ಖರ್ಚುಮಾಡಿದರೆ ಇನ್ನು ಕೆಲವು ಪ್ರದೇಶಗಳಿಗೆ ೬೦೦ರೂಪಾಯಿ ಕೂಡ ಖರ್ಚುಮಾಡುವುದಿಲ್ಲ. ಇದನ್ನು ತಪ್ಪಿಸಿ ಈ ಎರಡೂ ಪ್ರದೇಶಗಳ ಹಣವನ್ನು ಒಟ್ಟುಗೂಡಿಸಿ ಎರಡು ಸಮಭಾಗ ಮಾಡಿ ಇಡೀ ರಾಜ್ಯಕ್ಕೆ ಅನುಕೂಲವಾಗುವಂತೆ ಕೆಲಸ ಮಾಡಬೇಕಾದ್ದು ಯೋಗ್ಯವಾದದ್ದು. ಇನ್ನು ನಮ್ಮ ಉತ್ತರ ಕರ್ನಾಟಕದಲ್ಲ ಅಲ್ಲಿ ಯಾವಾಗಲೂ ಆಹಾರದ ಅಭಾವ ಉಂಟಾಗುತ್ತಿರುವುದರಿಂದ ಅಲ್ಲಿಗೆ ಸರ್ಕಾರದವರು ಮೊದಲಿಂದಲೂ ಸರಿಯಾದ ಕಾರ್ಯಕ್ರಮ ಇಟ್ಟುಕೊಂಡು ಆ ಪ್ರದೇಶವನ್ನು ಉತ್ತಮಪಡಿಸಿದ್ದರೆ ಈ ದಿವಸ ಅಲ್ಲಿ ಕ್ಷಾಮ ಹೇಳುವುದಕ್ಕೆ ಕಾರಣವೇ ಇರಲಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಕಳೆದ ಸಾಲಿನಲ್ಲಿ ನಮ್ಮ ಸರ್ಕಾರದವರು ಅಲ್ಲಿ ೬೦-೭೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರ. ಆದರ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಾರೆ ಈ ಹಣದಲ್ಲಿ ಬಹುಪಾಲು ರಾಜಕಾರಣಿಗಳು ಹೊಡೆದುಕೊಂಡು ಹೋಗಿದ್ದಾರೆ ಎಂದು, ಆದರೆ ನಾನು ಅವರ ವಾದವನ್ನು ಒಪ್ಪುವುದಿಲ್ಲ, ಹಾಗೆ ನಮ್ಮ ರಾಜಕೀಯ ಮುಖಂಡರು ಅಲ್ಲಿ ಜನತೆಗೆ ಅನ್ಯಾಯ ಮಾಡಿದ್ದರೆ ಮೊನ್ನೆ ಆ ಗುಲ್ಬರ್ಗದಲ್ಲಿ ನಡೆದ ಚುನಾವಣೆಯಲ್ಲಿ ನಮ್ಮ ಪಕ್ಷಕ್ಕೆ ಖಂಡಿತ ಜಯವಾಗುತ್ತಿರಲಿಲ್ಲ. ಇನ್ನು ಕಂಟ್ರಾಕ್ಟರ್ ವಿಚಾರವಾಗಿ ಮಾತನಾಡುತ್ತ ಮಾನ್ಯ ಬಂಗಾರಪ್ಪನವರು ಪ್ಲಾನ್ ಮತ್ತು ಎಸ್ಟಿಮೇಟ್‌ಗಳು ಮತ್ತು ವರ್ಕ್ ಆರ್ಡರ್ ಇಲ್ಲದೆ ಕೆಲಸವಾಗಿದೆ ಎಂದು ಹೇಳಿ ಕಂಟ್ರಾಕ್ಟರುಗಳು ಬಿಲ್ಲುಗಳನ್ನು ತೆಗೆದುಕೊಂಡಿದ್ದಾರೆಂದು ಹೇಳಿದರು, ಅದು ಸರಿಯಲ್ಲ. ನಾನು ರಾಜಕೀಯಕ್ಕೆ ಬರುವುದಕ್ಕೆ ಮೊದಲು ಒಬ್ಬ ಕಂಟ್ರಾಕ್ಟರಾಗಿದ್ದೆ ಕೆಲವು ರಾಜಕೀಯ ಮುಖಂಡರ ಅಥವಾ ಶಾಸನಸಭೆಯ ಸದಸ್ಯರ ಒತ್ತಡಕ್ಕಾಗಿ ಯಾವಾದರೂ ಮಂತ್ರಿಗಳು ಕೆಲವು ಸಂದರ್ಭಗಳಲ್ಲಿ ಕಂಟ್ರಾಕ್ಟರನ್ನು ಕರೆದು ಬರಿ ಮೌಜವಾಬ್ ಮೇಲೆ ಆರ್ಡರ್ ಮಾಡಿ ಇಂಥ ಕೆಲಸವನ್ನು ನೀನು ಮಾಡು ಎಂದು ಕಂಟ್ರಾಕ್ಟರಿಗೆ ಹೇಳಿದ ಮೇಲೆ ಆ ಮಂತ್ರಿಗಳು ಅದೇ ದಿವಸ ಆ ಕೆಲಸದ ಬಗೆಗೆ ಅಂದಾಜು, ಎಸ್ಟಿಮೇಟ್ ಮತ್ತು ಬಿಲ್ಲು ಇಷ್ಟನ್ನೂ ಒಂದೇ ದಿನದಲ್ಲಿ ಮಾಡಿಸಿ ಪೇಮೆಂಟ್ ಮಾಡಿರತಕ್ಕ ನಿದರ್ಶನ ನಾನು ನೋಡಿದ್ದೇನೆ. ಆದರೆ ಮಾನ್ಯ ಸದಸ್ಯರು ಹೇಳಿದಂಥ ನಿದರ್ಶನ ನನಗೆ ತಿಳಿಯದು ಇನ್ನು ಸರ್ಕಾರದವರು ಕೆಲ ಕೆಲ ಇಲಾಖೆಗಳಿಗೆ ಅಂದರೆ ವಿದ್ಯಾ ಇಲಾಖೆ, ಆರೋಗ್ಯ ಇಲಾಖೆಗಳಿಗೆ ಹೆಚ್ಚು ಹಣವನ್ನು ವೆಚ್ಚಮಾಡುತ್ತಿದ್ದಾರೆ. ಅವುಗಳಿಗೆ ವೆಚ್ಚಮಾಡತಕ್ಕ ಹಣದಲ್ಲಿ ಅರ್ಧ ಕೂಡ ಈ ಲೋಕೋಪಯೋಗಿ ಇಲಾಖೆಗೆ ಖರ್ಚುಮಾಡುತ್ತಿಲ್ಲ, ವಿದ್ಯಾ ಇಲಾಖೆಗೆ ಹಣ ಖರ್ಚುಮಾಡಿ ದೇಶದಲ್ಲಿ ನಿರಂ

ದ್ಯೋಗಿಗಳ ಸಂಖ್ಯೆಯನ್ನು ಬೆಳೆಸುತ್ತಿದ್ದಾರೆ. ಆದರ ದೇಶದಲ್ಲಿ ಬೃಹದಾಕಾರದಲ್ಲಿ ನಿಂತಿರುವ ಅನ್ನಕ್ಷಾಮವನ್ನು ನಿವಾರಣೆ ಮಾಡತಕ್ಕ ಬಗ್ಗೆ ಸರ್ಕಾರ ಹಣವನ್ನು ಖರ್ಚುಮಾಡುವುದಕ್ಕೆ ಮೀನಾಮೇಷ ಎಣಿಸುತ್ತಿದೆ. ಇದಾವ ಬುದ್ಧಿವಂತಿಕೆಯೋ ಕಾಣಲಿಲ್ಲ, ಇದರಂತೆಯೇ ಆರೋಗ್ಯ ಇಲಾಖೆಯಲ್ಲಿ ಬೇಕಾದಷ್ಟು ದುಡ್ಡನ್ನು ಖರ್ಚುಮಾಡುತ್ತಿದ್ದಾರೆ. ಹಿಂದೆ ಒಬ್ಬ ಮನುಷ್ಯನ ಸರಾಸರಿ ವಯಸ್ಸು ೨೫–೩೦ ವರ್ಷಗಳಿತ್ತು. ಈಗ ಅದನ್ನು ೫೦ ವರ್ಷಗಳಿಗೆ ಏರಿಸಿದ್ದಾರೆ. ಹಾಗೆ ಒಂದು ಕಡೆ ಮನುಷ್ಯನ ಆಯುಸ್ಸನು ಹೆಚ್ಚಿಸಿ ಇನ್ನೊಂದುಕಡೆ ಮತ್ತೆ ಹಣವನ್ನು ಖರ್ಚುಮಾಡಿ ಫ್ಯಾಮಿಲಿ ಪ್ಲಾನಿಂಗಿನಲ್ಲಿ ಪ್ರಜಾಸಂಖ್ಯೆಯನ್ನು ತಡೆಗಟ್ಟಬೇಕೆಂದು ಹೇಳುತ್ತಿದ್ದಾರೆ, ಹೀಗೆ ಈ ಇಲಾಖೆಯಲ್ಲಿ ಮನುಷ್ಯನ ಆಯುಸ್ಸನ್ನು ಹೆಚ್ಚಿಸುವುದಕ್ಕೆ ದುಡ್ಡು ಖರ್ಚಾಗುತ್ತಿದ. ಮತ್ತು ಜನಸಂಖ್ಯೆಯನ್ನು ತಗ್ಗಿಸುವುದಕ್ಕೆ ಇದೇ ಇಲಾಖೆ ಹಣವನ್ನು ಖರ್ಚು ಮಾಡುತ್ತಿದ್ದೆ. ಆದರೆ ಆಹಾರ ಬೆಳೆಯತಕ್ಕ ಯೋಜನೆಗಳಿಗೆ ಸರ್ಕಾರ ಹಣವಿಲ್ಲ ಎಂದು ಹೇಳುತ್ತಿರುವುದು ಆಶ್ಚರ್ಯ.

MADAM SPEAKAR —The House will now adjourn and meet again at one of the clock on Tuesday, the 7th May 1974.

The House adjourned at six of the Clock to meet again at one of the Clock on Tuesday, the 7th May 1974.